ಬುಧವಾರ, ಸೆಪ್ಟೆಂಬರ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 271 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಚಾಲಕರೇ ಇಲ್ಲದ ಕಾರುಗಳದ್ದು ಈಗ ಉನ್ನತ್ತ ತಾರುಣ್ಯದ ಕಾಲ! ವಿದೇಶಗಳಲ್ಲಿ ಅವು ದಾರಿಗಿಳಿದು ಪರ್ಯಟನ ಮಾಡಲು ತೊಡಗಿವೆ.

ಆಳ-ಅಗಲ ಡಿಜಿಟಲ್ ಕಾರ್ಡ್ ಆರೋಗ್ಯ ಮಾಹಿತಿ ಕಣಜ

ಹೃದಯಕ್ಕಾಗಿ ಮಿಡಿಯುತ್ತಿವೆ ನೂರಾರು ಜೀವ! 6

ಪಡಿತರಕ್ಕೆ ಕನ್ನ ಹಾಕಿದ ಸಾಗಣೆ ಗುತ್ತಿಗೆದಾರ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,667 ▼	17,748 ▼	₹47,400 (ಬೆಂಗಳೂರು) ▼	₹61,500 (ಬೆಂಗಳೂರು) ▼	74.06 ▼

'ನಂಜುಂಡಪ್ಪ ವರದಿ' ಅನುಷ್ಠಾನಕ್ಕೆ ರಾಜ್ಯ ಸರ್ಕಾರದಿಂದ ಹೊಸ ಯೋಜನೆ

ಹಿಂದುಳಿದ ತಾಲ್ಲೂಕು: 'ಸಮತೋಲನ'

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸಿನಂತೆ ಜಾರಿಯಲ್ಲಿರುವ 'ವಿಶೇಷ ಅಭಿವೃದ್ಧಿ ಯೋಜನೆ'ಯನ್ನು ಬದಲಿಸಿ, ನೀತಿ ಆಯೋಗ ಸೂಚಿಸಿರುವ 49 ಸೂಚಕಗಳನ್ನು ಅಳವಡಿಸಿ 'ಪ್ರಾದೇಶಿಕ ಸಮತೋಲನ ಯೋಜನೆ' ಎಂಬ ಹೆಸರಿನಲ್ಲಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ನಂಜುಂಡಪ್ಪ ವರದಿಯಲ್ಲಿ 114 ತಾಲ್ಲೂಕುಗಳು ಹಿಂದುಳಿದ ಪಟ್ಟಿಯಲ್ಲಿದ್ದವು. ತಾಲ್ಲೂಕುಗಳ ಪುನರ್‌ರಚನೆ ವೇಳೆ ಈ ವ್ಯಾಪ್ತಿಯಲ್ಲಿ 39 ಹೊಸ ತಾಲ್ಲೂಕುಗಳು ರಚನೆಯಾದವು. ಹೀಗಾಗಿ ಒಟ್ಟು 153 ತಾಲ್ಲೂಕುಗಳಲ್ಲಿ ನೀತಿ ಆಯೋಗದ ಸೂಚಕಗಳಿಗೆ ಅನುಗುಣವಾಗಿ ಐದು ವಲಯಗಳಿಗೆ ಆದ್ಯತೆ ನೀಡಿ ₹ 3 ಸಾವಿರ ಕೋಟಿ ಅನುದಾನವನ್ನು ತಾಲ್ಲೂಕುವಾರು 2022–23ನೇ ಸಾಲಿನಿಂದ ಹಂಚಿಕೆ ಮಾಡಲು ಸರ್ಕಾರ ಉದ್ದೇಶಿಸಿದೆ.

ಪ್ರಜಾವಾಣಿ ವಿಶೇಷ

ಒಟ್ಟು ಅನುದಾನದಲ್ಲಿ (₹ 3 ಸಾವಿರ ಕೋಟಿ) ಬೃಹತ್ ನೀರಾವರಿಯೂ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗೆ ಈವರೆಗೆ ಹೆಚ್ಚು ಅನುದಾನ ಮೀಸಲಾಡಲಾಗುತ್ತಿತ್ತು. 2020–21ರಲ್ಲಿ ₹ 2,559 ಕೋಟಿಯನ್ನು ಈ ಉದ್ದೇಶಕ್ಕೆ ಮೀಸಲಿಡಲಾಗಿತ್ತು. ಆದರೆ, ಪ್ರಸ್ತಾಪಿತ ಯೋಜನೆಯಡಿ ಮೂಲಸೌಕರ್ಯ ಅಭಿವೃದ್ಧಿಗೆ ₹ 150 ಕೋಟಿ ಮಾತ್ರ ನಿಗದಿಪಡಿಸಲಾಗಿದೆ.

ಹೊಸ ಯೋಜನೆಗೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಸಚಿವ ಸಂಪುಟ ಸಭೆಯ ಅನುಮೋದನೆಯ ಬಳಿಕ ಈ ಯೋಜನೆ ಜಾರಿಗೆ ಬರಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕಲಬುರ್ಗಿಯಲ್ಲಿ ಇತ್ತೀಚೆಗೆ (ಸೆ. 17) ನಡೆದ 'ಕಲ್ಯಾಣ ಕರ್ನಾಟಕ ಉತ್ಸವ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನೀತಿ ಆಯೋಗ, ವಿಶ್ವಸಂಸ್ಥೆಯ ವರದಿ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಆಧಾರವಾಗಿ ಇಟ್ಟುಕೊಂಡು ನಂಜುಂಡಪ್ಪ ವರದಿ ಪರಿಷ್ಕರಿಸಲಾಗುವುದು. ಮುಂದಿನ ಐದು ವರ್ಷಗಳ ಅಭಿವೃದ್ಧಿಗೆ ಹೊಸ ಮಾನದಂಡ ನಿಗದಿಪಡಿಸಲಾಗುವುದು' ಎಂದು ಹೇಳಿದ್ದರು. ಹೊಸ ಯೋಜನೆಯ ಸಮಗ್ರ ಮಾಹಿತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಏನಿದು ಹೊಸ ಯೋಜನೆ: ನಂಜುಂಡಪ್ಪ ಸಮಿತಿ ವರದಿಯಂತೆ ವಿಶೇಷ ಅಭಿವೃದ್ಧಿ ಯೋಜನೆಯಡಿ 2007–08ರಿಂದ 2020–21ರವರೆಗೆ 114 ಹಿಂದುಳಿದ ತಾಲ್ಲೂಕುಗಳಿಗೆ ನೀಡಲಾದ ಒಟ್ಟು ಅನುದಾನದಲ್ಲಿ ಶೇ 60ರಷ್ಟು ಐದು ಇಲಾಖೆಗಳಿಗೆ (ಜಲಸಂಪನ್ಮೂಲ ಶೇ 19, ಗ್ರಾಮೀಣಾಭಿವೃದ್ಧಿ ಶೇ 17, ವಸತಿ ಶೇ 11, ಲೋಕೋಪಯೋಗಿ ಶೇ 7, ಇಂಧನ ಶೇ 6) ಹಂಚಿಕೆ ಆಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಶೇ 12.5, ಶಿಕ್ಷಣಕ್ಕೆ ಶೇ 5.8, ಆರೋಗ್ಯಕ್ಕೆ ಶೇ 5, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಶೇ 1.6, ಕೃಷಿಗೆ ಶೇ 6.5. ಉದ್ದಿಮೆ ಮತ್ತು ವ್ಯಾಪಾರಕ್ಕೆ ಕೇವಲ ಶೇ 0.89 ಅನುದಾನ ನೀಡಲಾಗಿದೆ.

11ನೇ ಪುಟ ನೋಡಿ

ಅಂಕಿ-ಅಂಶಗಳು

₹35,822 ಕೋಟಿ
ವಿಶೇಷ ಅಭಿವೃದ್ಧಿಗೆ 2007–08ರಿಂದ 2020–21ರವರೆಗೆ ಅನುದಾನ ನಿಗದಿ

₹28,972 ಕೋಟಿ (81%)
ಈವರೆಗೆ ಬಿಡುಗಡೆ

₹27,341 ಕೋಟಿ (94.37%)
ಈವರೆಗೆ ವೆಚ್ಚ

ಹೊಸ ಯೋಜನೆಯಡಿ ₹ 3 ಸಾವಿರ ಕೋಟಿ ಹಂಚಿಕೆ

ವಲಯ	ನಂಜುಂಡಪ್ಪ ವರದಿಯ ಸೂಚಕ	ನೀತಿ ಆಯೋಗದ ಸೂಚಕ	ನೀತಿ ಆಯೋಗದ ಆದ್ಯತೆ (ಶೇ)	ಹೊಸ ಯೋಜನೆಯಲ್ಲಿ ಹಂಚಿಕೆ (₹ ಕೋಟಿಗಳಲ್ಲಿ)	ನಂಜುಂಡಪ್ಪ ವರದಿಯಡಿ ಹಂಚಿಕೆ
ಆರೋಗ್ಯ, ಪೌಷ್ಟಿಕತೆ	3	13	30	900	223
ಶಿಕ್ಷಣ	4	8	30	900	88
ಕೃಷಿ, ಜಲಸಂಪನ್ಮೂಲ	9	10	20	600	84
ಆರ್ಥಿಕ ಸೇರ್ಪಡೆ	4	7	10	300	63
ಕೌಶಲ	0	5	5	150	43
ಮೂಲಸೌಕರ್ಯ (ಬೃಹತ್ ನೀರಾವರಿ ಸೇರಿ)	15	6	5	150	2,559
ಒಟ್ಟು	35	49	100	3,000	3,060

ಕೋವಿಡ್ ಸಾವು: ಎಲ್ಲ ಪ್ರಕರಣಗಳಲ್ಲೂ ಪರಿಹಾರ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ಪ್ರತಿಯೊಬ್ಬರ ಕುಟುಂಬಕ್ಕೂ ತಲಾ ₹ 50,000 ಪರಿಹಾರ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಪರಿಷ್ಕೃತ ಆದೇಶದ ಪ್ರಕಾರ, ಬಿಪಿಎಲ್ ಕುಟುಂಬಗಳಲ್ಲಿ ಒಂದಕ್ಕಿಂತ ಹೆಚ್ಚು ಮಂದಿ ಮೃತಪಟ್ಟಿದ್ದರೆ ಒಂದು ಪ್ರಕರಣದಲ್ಲಿ ₹ 1.5 ಲಕ್ಷ ಪರಿಹಾರ ದೊರೆಯಲಿದೆ. ಉಳಿದ ಪ್ರಕರಣಗಳಲ್ಲಿ ತಲಾ ₹ 50,000 ನೀಡಲಾಗುತ್ತದೆ. ಬಡತನ ರೇಖೆಗಿಂತ ಮೇಲಿರುವ (ಎಪಿಎಲ್) ಕುಟುಂಬಗಳಲ್ಲಿ ಎಲ್ಲ ಪ್ರಕರಣಗಳಿಗೂ ತಲಾ ₹ 50,000ದಂತೆ ಪರಿಹಾರ ವಿತರಿಸಲಾಗುತ್ತದೆ.

11ನೇ ಪುಟ ನೋಡಿ

ಮೈಸೂರು ದಸರಾ ಉದ್ಘಾಟನೆಗೆ ಎಸ್‌.ಎಂ. ಕೃಷ್ಣ

ಬೆಂಗಳೂರು: ಅಕ್ಟೋಬರ್ 7ರಿಂದ ಆರಂಭವಾಗಲಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರನ್ನಾಗಿ ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ.

ದಸರಾ ಆಚರಣೆಯ ಸಿದ್ಧತೆ ಕುರಿತು ಪರಿಶೀಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಕೃಷ್ಣ ಅವರನ್ನು ಉದ್ಘಾಟಕರನ್ನಾಗಿ ಆಯ್ಕೆಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.

'ಕಾನೂನು ತೊಡಕು ನಿವಾರಿಸಿ ಜಾತಿ ಗಣತಿ ವರದಿ ಸಲ್ಲಿಕೆ'

ಚಿಕ್ಕಬಳ್ಳಾಪುರ: 'ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಗೆ (ಜಾತಿವಾರು ಜನಗಣತಿ) ಸಂಬಂಧಿಸಿದಂತೆ ಎದುರಾಗಿರುವ ಕಾನೂನು ತೊಡಕು ನಿವಾರಿಸಿದ ನಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ.

6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಉಪ ಚುನಾವಣೆ: ಅಭ್ಯರ್ಥಿ ಆಯ್ಕೆಗೆ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾನಗಲ್ ಮತ್ತು ಸಿಂದಗಿ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ದಿನಾಂಕ ಘೋಷಣೆಯಾಗುತ್ತಿದ್ದಂತೆ ಮೂರು ರಾಜಕೀಯ ಪಕ್ಷಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಮತ್ತು ಗೆಲುವಿಗಾಗಿ ಕಸರತ್ತು ಆರಂಭಿಸಿವೆ.

ಸಿ.ಎಂ.ಉದಾಸಿ ಅವರ ನಿಧನದಿಂದ ಹಾನಗಲ್ ಮತ್ತು ಎಂ.ಸಿ. ಮನಗೂಳಿ ಅವರ ನಿಧನದಿಂದ ಸಿಂದಗಿ ಕ್ಷೇತ್ರಗಳು ತೆರವಾಗಿದ್ದವು. ಎರಡೂ ಕ್ಷೇತ್ರಗಳನ್ನು ಗೆದ್ದುಕೊಳ್ಳಲು ಬಿಜೆಪಿ ಮತ್ತು ಕಾಂಗ್ರೆಸ್ ಜಿದ್ದಾಜಿದ್ದಿ ಪೈಪೋಟಿ ನಡೆಸಿದ್ದರೆ, ಸಿಂದಗಿ ಕ್ಷೇತ್ರವನ್ನು ತನ್ನ ತೆಕ್ಕೆಯಲ್ಲೇ ಉಳಿಸಿಕೊಳ್ಳಲು ಜೆಡಿಎಸ್ ಕಸರತ್ತು ಆರಂಭಿಸಿದೆ.

ಬಿಜೆಪಿ ಈ ಎರಡೂ ಕ್ಷೇತ್ರಗಳಲ್ಲಿ ಯಾರನ್ನು ಕಣಕ್ಕೆ ಇಳಿಸಬೇಕು ಎಂಬ ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ.

6ನೇ ಪುಟ ನೋಡಿ

ಸಾಮೂಹಿಕ ನಾಯಕತ್ವ:ಬೊಮ್ಮಾಯಿ

'ಈ ಉಪಚುನಾವಣೆ ನನ್ನ ನೇತೃತ್ವದಲ್ಲಿ ಎನ್ನುವುದಕ್ಕಿಂತ ಎಲ್ಲ ನಾಯಕರೂ ಒಟ್ಟುಗೂಡಿ ಎದುರಿಸಿ ಗೆಲ್ಲುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಉದ್ದೇಶದಿಂದ ಅಭಿಪ್ರಾಯ ಸಂಗ್ರಹಕ್ಕೆ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವೀಕ್ಷಕರನ್ನು ಕಳುಹಿಸಲಿದ್ದಾರೆ. ದಾವಣಗೆರೆಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಎರಡು ಕ್ಷೇತ್ರಗಳ ಅಭ್ಯರ್ಥಿಗಳ ಬಗ್ಗೆಯೂ ಚರ್ಚೆ ಆಗಿದೆ. ಎರಡೂ ಕ್ಷೇತ್ರಗಳ ಸ್ಥಿತಿ ಗತಿಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲಿದ್ದಾರೆ. ರಾಜ್ಯದ ಜನರು ನಮ್ಮ ಜತೆ ಇದ್ದಾರೆ. ಪಕ್ಷದ ಸಂಘಟನೆ ಗಟ್ಟಿಯಾಗಿದೆ. ಕಾರ್ಯಕರ್ತರೇ ಪಕ್ಷದ ಬಲ' ಎಂದರು.

ಹಾನಗಲ್‌ನಲ್ಲಿ ಕಳೆದ ಬಾರಿ ಸೋತವರು ಚುನಾವಣೆ ನಂತರವೂ ಪಕ್ಷ ಸಂಘಟನೆಗೆ ಶ್ರಮಿಸುತ್ತಿದ್ದಾರೆ. ಅಭ್ಯರ್ಥಿಯ ಅಂತಿಮ ಆಯ್ಕೆಯನ್ನು ಹೈಕಮಾಂಡ್ ಮಾಡುತ್ತದೆ

ಡಿ.ಕೆ.ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ

ಸಿಂದಗಿ ಕ್ಷೇತ್ರದಲ್ಲಿ ನಾಲ್ಕೈದು ಮಂದಿ ಟಿಕೆಟ್ ಆಕಾಂಕ್ಷಿಗಳು ಇದ್ದಾರೆ. ಈ ಬಗ್ಗೆ ಅಲ್ಲಿನ ಕಾರ್ಯಕರ್ತರ ಜೊತೆ ಚರ್ಚಿಸಿದ್ದು, ಶೀಘ್ರ ತೀರ್ಮಾನ ಕೈಗೊಳ್ಳುತ್ತೇವೆ.

ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕಾಂಗ್ರೆಸ್‌ಗೆ ಕನ್ಹಯ್ಯಾ; ಸ್ಥಾನ ಬಿಟ್ಟ ನವಜೋತ್ ಸಿಧು

ನವದೆಹಲಿ: ಕಾಂಗ್ರೆಸ್ ಪಕ್ಷಕ್ಕೆ ಮಂಗಳವಾರವು ಏಕಕಾಲಕ್ಕೆ ಶುಭ ಮತ್ತು ಅಶುಭ ಎರಡೂ ಆಗಿ ಪರಿಣಮಿಸಿದೆ. ಯುವ ನಾಯಕ ಕನ್ಹಯ್ಯಾ ಕುಮಾರ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅದೇ ಹೊತ್ತಿಗೆ, ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನವಜೋತ್ ಸಿಂಗ್ ಸಿಧು ರಾಜೀನಾಮೆ ಕೊಟ್ಟರು.

ಸಿಧು

ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಪಂಜಾಬ್ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಿದ ಕೆಲವೇ ದಿನಗಳಲ್ಲಿ, ಸಿಧು ರಾಜೀನಾಮೆ ಕೊಟ್ಟಿದ್ದಾರೆ. ಇದರೊಂದಿಗೆ ಪಂಜಾಬ್ ಕಾಂಗ್ರೆಸ್ ಪಕ್ಷದೊಳಗಿನ ಬಿಕ್ಕಟ್ಟು ಮತ್ತೆ ತೀವ್ರಗೊಂಡಿದೆ. ಪಂಜಾಬ್ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ.

ಸಿಧು ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರಾದ ರಜಿಯಾ ಸುಲ್ತಾನಾ ಮತ್ತು ಪರ್ಗತ್ ಸಿಂಗ್ ಅವರು ರಾಜೀನಾಮೆ ಕೊಟ್ಟಿದ್ದಾರೆ. ಪ್ರದೇಶ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಯೋಗಿಂದರ್ ಧಿಂಗ್ರಾ ಅವರೂ ಸ್ಥಾನ ತೊರೆದಿದ್ದಾರೆ. ಈ ನಡುವೆ, ಅಮರಿಂದರ್ ಅವರು ಬಿಜೆಪಿ ಮುಖಂಡರನ್ನು ದೆಹಲಿಯಲ್ಲಿ ಭೇಟಿ ಮಾಡಲಿದ್ದಾರೆ ಎಂಬ ವದಂತಿಯೂ ಕೇಳಿ ಬಂದಿತ್ತು. ಆದರೆ, ಅದನ್ನು ಅಮರಿಂದರ್ ಆಪ್ತರು ಅಲ್ಲಗಳೆದಿದ್ದಾರೆ.

11ನೇ ಪುಟ ನೋಡಿ

ಯುವ ಮುಖಂಡರ ಭೇಟಿಯಾದ ರಾಹುಲ್



ಮೆವಾನಿ



ಕನ್ಹಯ್ಯಾ

ಯುವ ನಾಯಕ ಕನ್ಹಯ್ಯಾ ಕುಮಾರ್ ಮತ್ತು ಗುಜರಾತ್‌ನ ಪಕ್ಷೇತರ ಶಾಸಕ ಜಿಗ್ನೇಶ್ ಮೆವಾನಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ದೆಹಲಿಯ ಶಹೀದ್ ಭಗತ್ ಸಿಂಗ್ ಪಾರ್ಕ್‌ನಲ್ಲಿ ಮಂಗಳವಾರ ಸಂಜೆ ಭೇಟಿಯಾದರು. ಭಗತ್ ಸಿಂಗ್ ಜನ್ಮದಿನದ ಸಂದರ್ಭದಲ್ಲಿ ಈ ಭೇಟಿ ನಡೆದಿದೆ. ಬಳಿಕ ಇಬ್ಬರೂ ಕಾಂಗ್ರೆಸ್ ಕೇಂದ್ರ ಕಚೇರಿಗೆ ಭೇಟಿ ಕೊಟ್ಟು ಕನ್ಹಯ್ಯಾ ಅವರು ಪಕ್ಷಕ್ಕೆ ಸೇರ್ಪಡೆಯಾದರು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಚಿಹ್ನೆಯಲ್ಲಿ ಸ್ಪರ್ಧಿಸುವುದಾಗಿ ಮೆವಾನಿ ಹೇಳಿದರು. ಪಕ್ಷೇತರ ಶಾಸಕರಾಗಿರುವ ಕಾರಣ, ಅನರ್ಹತೆ ಭಯದಿಂದ ಅವರು ಕಾಂಗ್ರೆಸ್‌ಗೆ ಸೇರ್ಪಡೆ ಆಗಲಿಲ್ಲ.

ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ

ಮುಜಾವರ್ ನೇಮಕ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾದಲ್ಲಿ ಪೂಜಾ ಕಾರ್ಯಕ್ಕೆ ಮುಜಾವರ್ ನೇಮಕ ಮಾಡಿ 2018ರ ಮಾರ್ಚ್ 19ರಂದು ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ವಿಷಯದಲ್ಲಿ ಉನ್ನತ ಮಟ್ಟದ ಸಮಿತಿಯ ವರದಿ ಉಲ್ಲೇಖಿಸದೆ ಕಾನೂನಿನ ಪ್ರಕಾರ ಮರುಪರಿಶೀಲನೆ ನಡೆಸುವಂತೆ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಸಲ್ಲಿಸಿದ ವರದಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿತ್ತು. ಗರ್ಭಗುಡಿಗೆ ಪ್ರವೇಶಿಸಿ ಹಿಂದೂ ಮತ್ತು ಮುಸ್ಲಿಮ್ ಸಮುದಾಯದವರಿಗೆ ತೀರ್ಥ ವಿತರಿಸಲು ಮುಜಾವರ್‌ಗೆ ಮಾತ್ರ ಅನುಮತಿ ನೀಡಿತ್ತು. ಈ ಆದೇಶವನ್ನು ಶ್ರೀ ಗುರು ದತ್ತಾತ್ರೇಯ ಪೀಠ ಸಂವರ್ಧನಾ ಸಮಿತಿ ಪ್ರಶ್ನಿಸಿತ್ತು. 2010ರ ಮಾರ್ಚ್ 10ರಂದು ಮುಜರಾಯಿ ಆಯುಕ್ತರು ನೀಡಿರುವ ಎರಡನೇ ವರದಿ ಜಾರಿಗೊಳಿಸಲು ನಿರ್ದೇಶನ ನೀಡಲು ಕೋರಿತ್ತು.

'ಸರ್ಕಾರ ಮುಕ್ತ ಮನಸಿನಿಂದ ಈ ಆದೇಶ ಮಾಡಿಲ್ಲ ಮತ್ತು ಉನ್ನತ ಮಟ್ಟದ ಸಮಿತಿ ವರದಿ ಕೂಡ ಪಕ್ಷಪಾತದಿಂದ ಮುಕ್ತವಾದಂತೆ ಕಾಣಿಸುತ್ತಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಉನ್ನತ ಮಟ್ಟದ ಸಮಿತಿ ನೇಮಿಸುವ ನಿರ್ಧಾರ ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ರಹಮತ್ ತರೀಕೆರೆ ಇದ್ದರು. ವರದಿ ಪಕ್ಷಪಾತದಿಂದ ಕೂಡಿದೆ' ಎಂದು ಅರ್ಜಿದಾರರ ಪರ ವಕೀಲ ಅಶೋಕ್ ಹಾರನಹಳ್ಳಿ ವಾದಿಸಿದ್ದರು.

ದತ್ತಾತ್ರೇಯರ ಪಾದುಕೆಗಳಿಗೆ ಹಿಂದೂ ಅರ್ಚಕರಿಂದಲೇ ಪೂಜೆ ಸಲ್ಲಿಸುವಂತೆ ಮಾಡಲು ದಶಕಗಳ ಕಾಲದ ಹೋರಾಟಕ್ಕೆ ಫಲ ಸಿಕ್ಕಿದ್ದು, ಪ್ರತಿ ದಿನ ಪೂಜೆಗೆ ಅವಕಾಶ ಸಿಕ್ಕಿದಂತಾಗಿದೆ

ವಿ.ಸುನೀಲ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ, ಇಂಧನ ಸಚಿವ

ದತ್ತ ಪೀಠದ ವಿಚಾರದಲ್ಲಿ ಹಿಂದೂಗಳ ಹೋರಾಟಕ್ಕೆ ಜಯ ಸಿಕ್ಕಿದೆ. ದತ್ತ ಮಾಲಾಧಾರಿಗಳು ಮತ್ತು ದತ್ತ ಪೀಠವನ್ನು ನಂಬುವ ಎಲ್ಲರಿಗೂ ಶುಭ ವಿಚಾರ

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ಹೈಕೋರ್ಟ್ ಈಗ ನೀಡಿರುವ ಆದೇಶಾನುಸಾರ ಸರ್ಕಾರವು ಪುನರ್ ಪರಿಶೀಲನೆ ಮಾಡಿ ಏನು ನಿರ್ಧಾರ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡುತ್ತೇವೆ

ಸಯ್ಯದ್ ಗೌಸ್ ಮೊಹಿದ್ದೀನ್, ಶಾಖಾದ್ರಿ, ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ



ಪೇಂಟಿಂಗ್ ಟ್ರೈನಿಂಗ್ ಕೋರ್ಸ್ ಕುರಿತು ವಿವರಗಳಿಗೆ

ಈಗಲೇ ಕರೆ ಮಾಡಿ 9591572894 080 22220549

ಏಷ್ಯನ್ ಪೇಂಟ್ಸ್ ಕಲರ್ ಅಕಾಡೆಮಿ, #7/2, 2 ನೇ ಮಹಡಿ, 2 ನೇ ಕ್ರಾಸ್, ಲಾಲ್ ಬಾಗ್ ರೋಡ್, ಪೂರ್ಣಿಮಾ ಥಿಯೇಟರ್ ಬಸ್ ಸ್ಟಾಪ್ ಹತ್ತಿರ, ಸುಧಾಮನಗರ, ಬೆಂಗಳೂರು – 560027.

ಅರ್ಹ ಪಾಲಿಸಿಗಳಿಗೆ ಲೇಟ್ ಫೀನಲ್ಲಿ ರಿಯಾಯಿತಿ ಇದೆ*

ಬರಬೇಕಾಗಿರುವ ಒಟ್ಟು ಪ್ರೀಮಿಯಮ್	% ಲೇಟ್ ಫೀ ರಿಯಾಯಿತಿ	ಗರಿಷ್ಠ ರಿಯಾಯಿತಿ ಮಿತಿ
₹1,00,000ದ ವರೆಗೆ	20%	₹2,000
₹1,00,001 ರಿಂದ ₹3,00,000ದ ವರೆಗೆ	25%	₹2,500
₹3,00,001 ಮತ್ತು ಅದಕ್ಕೂ ಮೀರಿ	30%	₹3,000

*ಟರ್ಮ್ ಅಶ್ಯೂರೆನ್ಸ್, ಮಲ್ಟಿಪಲ್ ರಿಸ್ಕ್ ಪಾಲಿಸಿಗಳು ಇತ್ಯಾದಿ ಹೈ ರಿಸ್ಕ್ ಪ್ಲಾನ್‌ಗಳಿಗೆ ಅನ್ವಯಿಸುವುದಿಲ್ಲ.
**ಸಂದಾಯ ಮಾಡಿಲ್ಲದ ಪ್ರಥಮ ಪ್ರೀಮಿಯಮ್‌ನ ತಾರೀಖಿನಿಂದ 5 ವರ್ಷಗಳ ಒಳಗೆ ಪಾಲಿಸಿಗಳನ್ನು ಪುನರುಜ್ಜೀವನಗೊಳಿಸಬಹುದು.

**ಷರತ್ತು ಮತ್ತು ನಿಬಂಧನೆಗಳು ಅನ್ವಯ.

ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ಭೇಟಿ ನೀಡಿ www.licindia.in ಗೆ

ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ | ಕಾಲ್ ಸೆಂಟರ್ ಸೇವೆಗಳು (022) 6827 6827 | ಡೌನ್‌ಲೋಡ್ ಮಾಡಿ ಎಲ್‌ಐಸಿಯ ಮೊಬೈಲ್ ಆಪ್ "MyLIC"

ನಮ್ಮೊಂದಿಗೆ ಸೇರಿಕೊಳ್ಳಿ: LIC India Forever | IRDAI Regn No.: 512

ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ!

ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ. ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.

LIC
ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA

ಜೀವನದ ಜೊತೆಗೂ, ಜೀವನದ ಬಳಿಕವೂ.

LIC / MUD / 2021 -22 / 25 / Kan

ಸಿಸಿಬಿ ಪೊಲೀಸರ ಕಾರ್ಯಾಚರಣೆ • ಇರಾನ್ ಪ್ರಜೆಗಳು ಸೇರಿ ನಾಲ್ವರ ಬಂಧನ

‘ಡ್ರಗ್ಸ್’ ವಿಲ್ಲಾ: ₹ 1 ಕೋಟಿ ಮೌಲ್ಯದ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡದಿ ಬಳಿಯ ವಿಲ್ಲಾವೊಂದರಲ್ಲಿ ಹೈಡ್ರೊ ಗಾಂಜಾ ಗಿಡ ಬೆಳೆಸಿ ಮಾರುತ್ತಿದ್ದ ಪ್ರಕರಣದಲ್ಲಿ ಇರಾನ್‌ನ ಇಬ್ಬರು ಪ್ರಜೆಗಳು ಸೇರಿ ನಾಲ್ವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ₹ 1 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

‘ವಿಲ್ಲಾದಲ್ಲಿ ವ್ಯವಸ್ಥಿತವಾಗಿ ಗಿಡಗಳನ್ನು ಬೆಳೆಸಿ ಮಾರುತ್ತಿದ್ದ ಜಾಲವನ್ನು ಭೇದಿಸಲಾಗಿದೆ. 130 ಹೈಡ್ರೊ ಗಾಂಜಾ ಗಿಡಗಳು, ಎನ್‌ಎಸ್‌ಡಿ ಕಾಗದದ ಚೂರುಗಳು ಹಾಗೂ ಕಾರು ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ದೇವರಜೀವನಹಳ್ಳಿ (ಡಿ.ಜೆ. ಹಳ್ಳಿ) ಠಾಣೆ ವ್ಯಾಪ್ತಿಯ ಕಾವೇರಿ ನಗರಕ್ಕೆ ಸೆ. 26ರಂದು ಕಾರಿನಲ್ಲಿ ಬಂದಿದ್ದ ನಾಲ್ವರು ಆರೋಪಿಗಳು, ಗಾಂಜಾ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಅವರ ವಿಚಾರಣೆಯಿಂದ, ವಿಲ್ಲಾದಲ್ಲಿ ಗಾಂಜಾ ಬೆಳೆಯುತ್ತಿದ್ದ ಮಾಹಿತಿ ಹೊರಬಿತ್ತು. ಬಳಿಕ ವಿಲ್ಲಾ ಮೇಲೆ ದಾಳಿ ಮಾಡಲಾಗಿತ್ತು’ ಎಂದೂ ಅವರು ತಿಳಿಸಿದರು.

ಬಿಡದಿ ಬಳಿಯ ವಿಲ್ಲಾದಲ್ಲಿ ಆರೋಪಿಗಳು ಬೆಳೆದಿದ್ದ ಹೈಡ್ರೊ ಗಾಂಜಾ ಗಿಡಗಳು

ಡಾರ್ಕ್‌ನೆಟ್‌ನಲ್ಲಿ ಬೀಜ ಖರೀದಿ: ‘ಪ್ರಮುಖ ಆರೋಪಿ ಜಾವಿದ್ ರುಸ್ತುಂ ಪುರಿ (36) ಹಾಗೂ ಸ್ನೇಹಿತರು, ಬಿಡದಿ ಬಳಿಯ ವಿಲ್ಲಾದಲ್ಲಿ ನೆಲೆಸಿದ್ದರು. ಡ್ರಗ್ಸ್ ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸಿ, ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದೂ ಅಧಿಕಾರಿ ಹೇಳಿದರು.

‘ಡಾರ್ಕ್‌ನೆಟ್ ಜಾಲತಾಣಗಳ ಮೂಲಕ ಹೈಡ್ರೊ ಗಾಂಜಾ ಬೀಜಗಳನ್ನು ಆರೋಪಿಗಳು ತರಿಸುತ್ತಿದ್ದರು. ವಿಲ್ಲಾದ ಚಾವಣಿ ಹಾಗೂ ಗ್ರೀನ್ ಹೌಸ್‌ನಲ್ಲಿ ಕುಂಡಗಳನ್ನು ಇಟ್ಟು, ಅದರಲ್ಲಿ ಗಾಂಜಾ ಬೀಜಗಳನ್ನು ಹಾಕುತ್ತಿದ್ದರು. ಗಿಡಗಳು ಬೆಳೆಯಲು ಅನುಕೂಲವಾಗಲೆಂದು ಎಲ್‌ಇಡಿ ಬಲ್ಬ್‌ಗಳ ಮೂಲಕ ಬೆಳಕಿನ ವ್ಯವಸ್ಥೆ ಮಾಡಿದ್ದರು. ಕೋಳಿ ಫಾರ್ಮ್ ಮಾದರಿಯಲ್ಲೇ ಗಿಡಗಳನ್ನು ಬೆಳೆಸುತ್ತಿದ್ದರು’ ಎಂದೂ ತಿಳಿಸಿದರು.

‘ಕುಂಡಗಳಲ್ಲಿ ಬೆಳೆದ ಗಾಂಜಾ ಗಿಡಗಳು ಕತ್ತರಿಸಿ ಒಣಗಿಸುತ್ತಿದ್ದರು. ನಂತರ, ಅದನ್ನೇ ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಳು ಆರೋಪಿಗಳ ಬಳಿ ಗಾಂಜಾ ಖರೀದಿಸುತ್ತಿದ್ದರು’ ಎಂದೂ ಅಧಿಕಾರಿ ವಿವರಿಸಿದರು.

ಎನ್‌ಸಿಬಿಯಲ್ಲೂ ಪ್ರಕರಣ: ‘ಆರೋಪಿ ಜಾವಿದ್ ರುಸ್ತುಂ, ಈ ಹಿಂದೆಯೂ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಭಾಗಿಯಾಗಿದ್ದ. ಆತನ ವಿರುದ್ಧ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಬೆಂಗಳೂರು ವಲಯ ಹಾಗೂ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು’ ಎಂದೂ ಅಧಿಕಾರಿ ಹೇಳಿದರು.

‘ಪುಸ್ತಕ ಓದಿ ಕಲಿತಿದ್ದ’

‘ಕಮ್ಮನಹಳ್ಳಿಯಲ್ಲಿ ನೆಲೆಸಿದ್ದ ಆರೋಪಿ, ಆರಂಭದಲ್ಲಿ ಬೇರೊಬ್ಬರ ಬಳಿ ಗಾಂಜಾ ಖರೀದಿಸಿ ತಂದು ಮಾರುತ್ತಿದ್ದ. ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಕಮ್ಮನಹಳ್ಳಿ, ಬಾಣಸವಾಡಿ, ಹೆಣ್ಣೂರು ಬಳಿ ಕಾರ್ಯಾಚರಣೆ ನಡೆಸಿದ್ದರು. ಸಿಕ್ಕಿಬೀಳುವ ಭಯದಲ್ಲಿ ಆರೋಪಿ, ಕಮ್ಮನಹಳ್ಳಿ ತೊರೆದಿದ್ದ. ಬಿಡದಿ ಬಳಿ ವಿಲ್ಲಾ ಬಾಡಿಗೆ ಪಡೆದು ವಾಸವಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಹೈಡ್ರೊ ಗಾಂಜಾ ಗಿಡ ಬೆಳೆಸುವುದನ್ನು ಆರೋಪಿ, ಪುಸ್ತಕ ಓದಿ ಕಲಿತಿದ್ದ. ಪುಸ್ತಕವನ್ನು ಆನ್‌ಲೈನ್‌ನಲ್ಲಿ ಖರೀದಿಸಿದ್ದ. ಪುಸ್ತಕವೂ ಆತನ ವಿಲ್ಲಾದಲ್ಲಿ ಸಿಕ್ಕಿದೆ’ ಎಂದೂ ಹೇಳಿದರು.

ಅಪರಾಧ ಸುದ್ದಿ

ಸುದ್ದಿ 2 ನಿಮಿಷ

ಪೊಲೀಸ್ ಪಬ್ಲಿಕ್ ಶಾಲೆಗೆ ₹ 4.50 ಲಕ್ಷ ಬಹುಮಾನ

ಬೆಂಗಳೂರು: ಅಮೆರಿಕದ ಆನ್‌ಲೈನ್ ಕಲಿಕಾ ವೇದಿಕೆ ‘ಮ್ಯಾಟಿಫಿಕ್’ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ‘ಜೂನಿಯರ್ ಗಣಿತ ಚಾಂಪಿಯನ್ ಶಿಪ್’ ಸ್ಪರ್ಧೆಯಲ್ಲಿ ನಗರದ ಪೊಲೀಸ್ ಪಬ್ಲಿಕ್ ಶಾಲೆಗೆ ಮೊದಲ ಬಹುಮಾನ ಲಭಿಸಿದೆ.

‘ನರ್ಸರಿ ತರಗತಿಯಿಂದ 6ನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ಸ್ಪರ್ಧೆ ಆಯೋಜಿಸಲಾಗಿತ್ತು. ದೇಶದ 1,200 ಶಾಲೆಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಈ ಪೈಕಿ, ಬೆಂಗಳೂರು ಪೊಲೀಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ₹ 4.50 ಲಕ್ಷ ಬಹುಮಾನ ಗೆದ್ದಿದ್ದಾರೆ’ ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಸೆ. 29ರಂದು ಬಹುಮಾನ ವಿತರಣೆ ಕಾರ್ಯಕ್ರಮ ಜರುಗಲಿದೆ. ಶಾಲೆಯ ಶಿಕ್ಷಣ ನಿರ್ವಹಣಾ ಸಮಿತಿ ಅಧ್ಯಕ್ಷರೂ ಆಗಿರುವ ಎಡಿಜಿಪಿ ಅಲೋಕ್‌ಕುಮಾರ್ ಅವರು ಬಹುಮಾನ ವಿತರಿಸಲಿದ್ದಾರೆ’ ಎಂದೂ ಹೇಳಲಾಗಿದೆ.

‘ಹೊಂಡಾ ಅಮೇಜ್’ ಕಾರಿಗೆ ಬೆಂಕಿ: ಚಾಲಕ ಪಾರು

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಚಲಿಸುತ್ತಿದ್ದ ‘ಹೊಂಡಾ ಅಮೇಜ್’ ಕಾರಿಗೆ ಬೆಂಕಿ ತಗುಲಿದ್ದು, ನಡುರಸ್ತೆಯಲ್ಲೇ ಕಾರು ಹೊತ್ತಿ ಉರಿದಿದೆ. ಬೆಂಕಿ ಕಾಣುತ್ತಿದ್ದಂತೆ ಕಾರಿನಿಂದ ಇಳಿದು ಚಾಲಕ ನಟರಾಜ್ (29) ಅಪಾಯದಿಂದ ಪಾರಾಗಿದ್ದಾರೆ.

‘ಉತ್ತರಹಳ್ಳಿಯ ನಟರಾಜ್, ಸಂಬಂಧಿಕರನ್ನು ನೋಡಲು ಹೊಂಡಾ ಅಮೇಜ್ ಕಾರಿನಲ್ಲಿ ಹೊರಟಿದ್ದರು. ದೊಡ್ಡಬಸ್ತಿ ಮುಖ್ಯರಸ್ತೆಯಲ್ಲಿ ಕಾರಿನಲ್ಲಿ ಹೊಗೆ ಕಾಣಿಸಿಕೊಂಡು ಬೆಂಕಿ ಹೊತ್ತಿ ಉರಿಯಲಾರಂಭಿಸಿತ್ತು. ಗಾಬರಿಗೊಂಡ ನಟರಾಜ್, ಕಾರನ್ನು ರಸ್ತೆಯಲ್ಲೇ ನಿಲ್ಲಿಸಿ ಇಳಿದಿದ್ದರು’ ಎಂದು ಪೊಲೀಸರು ಹೇಳಿದರು.

‘ಸ್ಥಳಕ್ಕೆ ಹೋಗಿದ್ದ ಗಸ್ತು ಸಿಬ್ಬಂದಿ, ಕಾರಿನ ಬಳಿ ಸಾರ್ವಜನಿಕರ ಓಡಾಟವನ್ನು ನಿರ್ಬಂಧಿಸಿದ್ದರು. ನಾಗರಬಾವಿ ಅಗ್ನಿಶಾಮಕ ದಳದ ಸಿಬ್ಬಂದಿ ಕಾರಿಗೆ ತಗುಲಿದ್ದ ಬೆಂಕಿ ನಂದಿಸಿದರು. ಅಷ್ಟರಲ್ಲೇ ಕಾರು ಸಂಪೂರ್ಣ ಸುಟ್ಟಿದೆ’ ಎಂದೂ ತಿಳಿಸಿದರು.

‘ಕಾರಿಗೆ ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದು ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದರು.

ಸವಾರನಿಗೆ ₹ 11,600 ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮಗಳನ್ನು 36 ಬಾರಿ ಉಲ್ಲಂಘಿಸಿದ್ದ ದ್ವಿಚಕ್ರ ವಾಹನ ಸವಾರರೊಬ್ಬರಿಗೆ ₹ 11,600 ದಂಡ ವಿಧಿಸಲಾಗಿದೆ.

‘ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ವಾಹನಗಳ ತಪಾಸಣೆ ನಡೆಸುತ್ತಿದ್ದರು. ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬರುತ್ತಿದ್ದ ಚಾಲಕನನ್ನು ತಡೆದು ಪರಿಶೀಲನೆ ನಡೆಸಿದ್ದರು. ಉಪಕರಣದಲ್ಲಿ ಪರಿಶೀಲಿಸಿದಾಗ, 36 ಬಾರಿ ನಿಯಮ ಉಲ್ಲಂಘಿಸಿದ್ದು ಪತ್ತೆಯಾಯಿತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರ ಬಂಧನ

ಬಾಡಿಗೆ ಮನೆಯಲ್ಲಿ 31 ಕೆ.ಜಿ ಗಾಂಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ಮನೆಯಲ್ಲಿ ಗಾಂಜಾ ಸಂಗ್ರಹಿಸಿಟ್ಟುಕೊಂಡು ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

'ಚಿನೊನ್ಯೆ ಇಕೆಚುಕ್ವು (39) ಹಾಗೂ ಕ್ಲಿವಿನ್ ಚಿಬ್ಯುಕೆ ಅನ್ಯವೊ (46) ಬಂಧಿತರು. ಅವರಿಂದ ₹ 10 ಲಕ್ಷ ಮೌಲ್ಯದ 31 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಗಳು, ವೀಸಾ ಅವಧಿ ಮುಗಿದರೂ ತಮ್ಮ ದೇಶಕ್ಕೆ ವಾಪಸು ಹೋಗಿರಲಿಲ್ಲ. ಇಲ್ಲಿಯೇ ಬಾಡಿಗೆ ಮನೆಯಲ್ಲಿ ನೆಲೆಸಿ, ಮಾದಕ ವಸ್ತು ಮಾರುತ್ತಿದ್ದರು. ಅದರಿಂದ ಅಕ್ರಮವಾಗಿ ಹಣ ಸಂಪಾದಿಸಿ ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದೂ ತಿಳಿಸಿದರು.

‘ಹೆಣ್ಣೂರು ಠಾಣೆ ವ್ಯಾಪ್ತಿಯ ಹೊರಮಾವು ಸಿ.ಎಂ.ಆರ್ ಬಡಾವಣೆಯ 5ನೇ ಅಡ್ಡರಸ್ತೆಯಲ್ಲಿರುವ ಬಹುಮಹಡಿ ಕಟ್ಟಡದ 2ನೇ ಮಹಡಿಯ ಮನೆಯಲ್ಲಿ ಆರೋಪಿಗಳು ವಾಸವಿದ್ದರು. ಅದೇ ಮನೆ ಮೇಲೆ ದಾಳಿ ಮಾಡಿ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದೂ ಮಾಹಿತಿ ನೀಡಿದರು.

‘ನಗರದಲ್ಲಿ ತಮ್ಮದೇ ಜಾಲ ಸೃಷ್ಟಿಸಿಕೊಂಡಿದ್ದ ಆರೋಪಿಗಳು, ಅದರ ಮೂಲಕ ಗಾಂಜಾ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು, ಕೆಲ ಕಾರ್ಮಿಕರು ಗ್ರಾಹಕರಾಗಿದ್ದರು’ ಎಂದೂ ಪೊಲೀಸರು ಹೇಳಿದರು.

ಮಾಲೀಕರ ವಿರುದ್ಧವೂ ಕ್ರಮ; ‘ಮನೆ ಮಾಲೀಕ, ಆರೋಪಿಗಳ ವೀಸಾ ಹಾಗೂ ಪಾಸ್‌ಪೋರ್ಟ್ ದಾಖಲೆಗಳನ್ನು ಪರಿಶೀಲಿಸದೇ ಬಾಡಿಗೆ ನೀಡಿದ್ದಾರೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

‘ವಿದೇಶಿ ಪ್ರಜೆಗಳಿಗೆ ಬಾಡಿಗೆ ನೀಡುವ ಮುನ್ನ ದಾಖಲೆಗಳನ್ನು ಪರಿಶೀಲಿಸುವುದು ಕಡ್ಡಾಯ. ಜೊತೆಗೆ, ಅಂಥವರ ಬಗ್ಗೆ ಸ್ಥಳೀಯ ಠಾಣೆಗೆ ಮಾಹಿತಿ ನೀಡಬೇಕು’ ಎಂದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಗಾಂಜಾ ತುಂಬಿದ್ದ ಚೀಲಗಳು

PUBLIC NOTICE

It is hereby notified that my clients have agreed to purchase the Schedule property from the Owner, a multinational company, having its registered Office at Sy.No.78/10, A2, Chikkajala Village, Bellary Road, Bengaluru-562157.

Any person/shaving any manner of right, title and or interest or claim or charge or lien over the Schedule property or otherwise have any lawful objection/s for sale of the Schedule Property, they are hereby called upon to file their objection/s in writing, along with the photocopies of documents on which they rely, with the undersigned, **within 10 days** from the date of publication of this notice. Objection/s received thereafter will not be binding on my clients.

SCHEDULE

All that piece and parcel of the immovable property being non-agricultural land (i) measuring **1 Acre 26.5 Guntas in Sy. No.48/1**; (ii) **14.5 Guntas in Sy. No. 48/2** and (iii) **1 Acre 1 Gunta in Sy.No.43/30**, together with a Commercial building measuring about 2000 Sq.Mtrs, bearing Village Panchayathi Khatha No. 600/594/48/1, 48/2, 43/30, 12, situated at **Mysore Road, Kambipura Village**, Kengeri Hobli, Bengaluru South Taluk, Bengaluru Urban District and bounded as follows:

East by : Nala
West by : Bengaluru- Mysore Highway
North by : Remaining land in Sy.Nos.48/1 and 48/2
South by : Remaining land in Sy.No.43/30.

Sd/- S.F. Goutam Chand,
Advocate
Goutam Associates
No.60, 2nd Floor, Kanakapura Road,
Basavanagudi, Bengaluru – 560 004.

ಅಪಘಾತ: 9 ವರ್ಷಗಳ ನಂತರ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ಪರಾರಿಯಾಗಿದ್ದ ಆರೋಪಿ ಆಂಥೋನಿ ರಾಜ್ (44) ಎಂಬಾತ, ಒಂಬತ್ತು ವರ್ಷಗಳ ನಂತರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

‘2012ರಲ್ಲಿ ಅಪಘಾತ ಸಂಭವಿಸಿತ್ತು. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಆಂಥೋನಿ ರಾಜ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಜೊತೆಗೆ, ಆತನಿಗೆ 10 ತಿಂಗಳ ಜೈಲು ಶಿಕ್ಷೆಯೂ ಆಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣದಲ್ಲಿ ಜಾಮೀನು ಪಡೆದಿದ್ದ ಆರೋಪಿ, ತಲೆಮರೆಸಿಕೊಂಡಿದ್ದ. ಶಿಕ್ಷೆಯನ್ನೂ ಅನುಭವಿಸಿರಲಿಲ್ಲ. ಆತನ ಬಗ್ಗೆ ಮಾಹಿತಿ ಕಲೆಹಾಕಿ, ಸೋಮವಾರ ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ’ ಎಂದೂ ತಿಳಿಸಿವೆ.

ಮೆಜೆಸ್ಟಿಕ್: ₹ 1.75 ಲಕ್ಷ ಕದ್ದಿದ್ದವರ ಸೆರೆ

ಬೆಂಗಳೂರು: ಮೆಜೆಸ್ಟಿಕ್ ಟಿ.ಬಿ. ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಹರೀಶ್ ಎಂಬುವರ ಬಳಿಯ ₹ 1.75 ಲಕ್ಷ ದೋಚಿಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

‘ಮೂಡಲಪಾಳ್ಯದ ಅರವಿಂದ್ ಮತ್ತು ಸೋಮಶೇಖರ್ ಬಂಧಿತರು. ಇಬ್ಬರಿಂದಲೂ ₹ 1.50 ಲಕ್ಷ ನಗದು ಹಾಗೂ ₹ 4.80 ಲಕ್ಷ ಮೌಲ್ಯದ 120 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು

‘ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ನಿವಾಸಿ ಹರೀಶ್, ಸೆಕೆಂಡ್ ಹ್ಯಾಂಡ್ ಕಾರು ಖರೀದಿ ಮಾಡಲು ಬೆಂಗಳೂರಿಗೆ ಬಸ್ಸಿನಲ್ಲಿ ಆ. 30ರಂದು ಬಂದಿದ್ದರು. ಅವರ ಬ್ಯಾಗ್‌ನಲ್ಲಿ ₹ 1.75 ಲಕ್ಷ ಹಣವಿತ್ತು. ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಇಳಿದಿದ್ದ ಅವರು, ನಡೆದುಕೊಂಡು ಹೊರಟಿದ್ದರು.’ ‘ಹರೀಶ್ ಅವರನ್ನು ಬೈಕ್‌ನಲ್ಲಿ ಹಿಂಬಾಲಿಸಿದ್ದ ಆರೋಪಿಗಳು, ಬ್ಯಾಗ್ ಕಸಿದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಠಾಣೆಯಲ್ಲಿ ದೂರು ದಾಖಲಾಗಿತ್ತು. ತನಿಖೆ ಕೈಗೊಂಡು ಇದೀಗ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಪ್ರಯಾಣಿಕರೇ ಗುರಿ: ‘ಬಂಧಿತ ಅರವಿಂದ್ ಹಾಗೂ ಸೋಮಶೇಖರ್, ಅಪರಾಧ ಹಿನ್ನೆಲೆಯುಳ್ಳವರು. ಕಳ್ಳತನ, ಸುಲಿಗೆ ಪ್ರಕರಣದಲ್ಲಿ ಅವರಿಬ್ಬರ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ವಿವರಿಸಿದರು.

‘ಹೊರ ಜಿಲ್ಲೆ, ಹೊರ ರಾಜ್ಯದಿಂದ ಬಸ್ ಹಾಗೂ ರೈಲಿನಲ್ಲಿ ಬೆಂಗಳೂರಿಗೆ ಬರುತ್ತಿದ್ದ ಪ್ರಯಾಣಿಕರು, ಮೆಜೆಸ್ಟಿಕ್ ನಿಲ್ದಾಣದಲ್ಲಿ ಇಳಿಯುತ್ತಿದ್ದರು. ಅಂಥವರನ್ನು ಗುರುತಿಸಿ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಚಿನ್ನಾಭರಣ, ಮೊಬೈಲ್, ನಗದು ದೋಚುತ್ತಿದ್ದರು’ ಎಂದೂ ಹೇಳಿದರು.

ಸುಲಿಗೆ: ಮಾಜಿ ದಲಾಯತ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ (ಸರಕು ಮತ್ತು ಸೇವೆಗಳ ತೆರಿಗೆ) ಅಧಿಕಾರಿಗಳ ಸೋಗಿನಲ್ಲಿ ಲಾರಿ ಮಾಲೀಕರನ್ನು ಸುಲಿಗೆ ಮಾಡುತ್ತಿದ್ದ ಆರೋಪದಡಿ ಚನ್ನಪ್ಪ (52) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ರಾಜಾಜಿನಗರದ ಚನ್ನಪ್ಪ ಅಲಿಯಾಸ್ ಚಂದ್ರೇಗೌಡ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಈ ಹಿಂದೆ ಗುತ್ತಿಗೆ ಆಧಾರದಲ್ಲಿ ದಲಾಯತ್ ಆಗಿ ಕೆಲಸ ಮಾಡುತ್ತಿದ್ದನೆಂದು ಗೊತ್ತಾಗಿದೆ. ಕೃತ್ಯದಿಂದ ಗಳಿಸಿದ್ದ ಹಣದಲ್ಲಿ ಖರೀದಿಸಿದ್ದ ಕಾರನ್ನು ಆತನಿಂದ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ಇಲಾಖೆಯ ಜಂಟಿ ಆಯುಕ್ತ ಬಸವರಾಜು, ಆರೋಪಿಯ ಕೃತ್ಯದ ಬಗ್ಗೆ ಕೋರಮಂಗಲ ಠಾಣೆಗೆ ಇತ್ತೀಚೆಗೆ ದೂರು ನೀಡಿದ್ದರು. ಅದರನ್ವಯ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು. ವಿಶೇಷ ತಂಡವು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ಆತನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದೂ ತಿಳಿಸಿದರು.

ಚೆಕ್‌ಪೋಸ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ: ‘ಜಿಎಸ್‌ಟಿ ಜಾರಿಯಾಗುವ ಮುನ್ನ ನಗರದ ಹಲವೆಡೆ ವಾಣಿಜ್ಯ ತೆರಿಗೆ ಇಲಾಖೆಯಿಂದ ಚೆಕ್‌ಪೋಸ್ಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು. ವಾಹನಗಳನ್ನು ತಡೆದು ಪರಿಶೀಲನೆ ನಡೆಸುತ್ತಿದ್ದ ಅಧಿಕಾರಿಗಳು, ವಸ್ತುಗಳ ಅಕ್ರಮ ಸಾಗಣೆ ಪತ್ತೆ ಮಾಡಿ ಪ್ರಕರಣ ದಾಖಲಿಸುತ್ತಿದ್ದರು. ಅಂಥ ಚೆಕ್‌ಪೋಸ್ಟ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಚನ್ನಪ್ಪ ಕೆಲಸ ಮಾಡುತ್ತಿದ್ದ’ ಎಂದೂ ಅಧಿಕಾರಿ ವಿವರಿಸಿದರು.

‘ಅಧಿಕಾರಿಗಳ ಜೊತೆ ಆರೋಪಿಯೂ ವಾಹನ ತಡೆಯುತ್ತಿದ್ದ. ಎಲ್ಲ ಪ್ರಕ್ರಿಯೆ ಬಗ್ಗೆ ತಿಳಿದುಕೊಂಡಿದ್ದ. ಜಿಎಸ್‌ಟಿ ಜಾರಿಯಾದ ಮೇಲೆ ಚೆಕ್‌ಪೋಸ್ಟ್‌ಗಳನ್ನು ಬಂದ್ ಮಾಡಲಾಗಿತ್ತು. ಚನ್ನಪ್ಪನ ಕೆಲಸವೂ ಹೋಗಿತ್ತು.’

‘ಬೇರೆಡೆ ಕೆಲಸಕ್ಕಾಗಿ ಆರೋಪಿ ಹುಡುಕಾಟ ನಡೆಸಿದ್ದ. ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಅಕ್ರಮ ಹಣ ಸಂಪಾದಿಸಲು ಮುಂದಾಗಿದ್ದ ಆತ, ಜಿಎಸ್‌ಟಿ ಅಧಿಕಾರಿ ಎಂಬುದಾಗಿ ಹೇಳಿಕೊಂಡು ಲಾರಿ ಮಾಲೀಕರ ಸುಲಿಗೆಗೆ ಇಳಿದಿದ್ದ’ ಎಂದೂ ಹೇಳಿದರು.

‘ನಗರದ ಹೊರವಲಯದಲ್ಲಿ ತನ್ನ ಕಾರಿನ ಜೊತೆ ನಿಲ್ಲುತ್ತಿದ್ದ ಆರೋಪಿ, ರಸ್ತೆಯಲ್ಲಿ ಹೋಗುತ್ತಿದ್ದ ಲಾರಿಗಳನ್ನು ಅಡ್ಡಗಟ್ಟುತ್ತಿದ್ದ. ತಪಾಸಣೆ ಮಾಡಬೇಕೆಂದು ದಾಖಲೆಗಳನ್ನು ಕೇಳುತ್ತಿದ್ದ. ನಂತರ, ಲಾರಿ ಬಿಡಲು ಹಣಕ್ಕೆ ಬೇಡಿಕೆ ಇರಿಸುತ್ತಿದ್ದ. ಇದೇ ರೀತಿ ಹಲವರ ಬಳಿ ಹಣ ಸುಲಿಗೆ ಮಾಡಿದ್ದಾನೆ. ಈ ಸಂಗತಿ ಇತ್ತೀಚೆಗೆ ಜಂಟಿ ಆಯುಕ್ತ ಬಸವರಾಜು ಅವರಿಗೆ ಗೊತ್ತಾಗಿತ್ತು’ ಎಂದೂ ಅಧಿಕಾರಿ ವಿವರಿಸಿದರು.

‘ಆರೋಪಿ ಬಳಿ ಗುರುತಿನ ಚೀಟಿ ಇರುವ ಮಾಹಿತಿ ಇದೆ. ಆ ಬಗ್ಗೆ ಪರಿಶೀಲಿಸಬೇಕಿದೆ’ ಎಂದೂ ಹೇಳಿದರು.

‘30ಗಳಿಗೆ ₹1 ಲಕ್ಷ ಹಫ್ತಾ ಕೇಳಿದ್ದ’

‘ಪ್ರಣವ್ ಟ್ರಾನ್ಸ್‌ಪೋರ್ಟ್ ಕಂಪನಿಯ ಮಾಲೀಕ ಪ್ರಮೋದ್ ಸಾಳುಂಕೆ ಅವರಿಗೆ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಲಾರಿಗಳು ಅತ್ತಿಬೆಲೆ, ಹುಬ್ಬಳ್ಳಿ ಹಾಗೂ ತುಮಕೂರಿನಲ್ಲಿ ಓಡಾಡುತ್ತವೆ. ತಪಾಸಣೆ ಮಾಡಬಾರದೆಂದರೆ ತಿಂಗಳಿಗೆ ₹ 1 ಲಕ್ಷ ನೀಡಬೇಕು’ ಎಂದಿದ್ದ. ಅದಕ್ಕ ಒಪ್ಪದ ಪ್ರಮೋದ್, ಜಂಟಿ ಆಯುಕ್ತ ಬಸವರಾಜು ಅವರಿಗೆ ಸೆ. 2ರಂದು ದೂರು ನೀಡಿದ್ದರು’ ಎಂದೂ ತಿಳಿಸಿದರು.

‘ಅತ್ತಿಬೆಲೆ ಚೆಕ್‌ಪೋಸ್ಟ್ ಬಳಿ ಆ. 27ರಂದು ಪ್ರಣವ್ ಟ್ರಾನ್ಸ್‌ಪೋರ್ಟ್ ಲಾರಿ ಅಡ್ಡಗಟ್ಟಿದ್ದ ಆರೋಪಿ, ₹ 50 ಸಾವಿರಕ್ಕೆ ಬೇಡಿಕೆ ಇಟ್ಟಿದ್ದ. ಚಾಲಕ, ₹1,000 ಕೊಟ್ಟು ಸ್ಥಳದಿಂದ ಹೊರಟು ಹೋಗಿದ್ದ. ಕಡಿಮೆ ಹಣ ಕೊಟ್ಟಿದ್ದಕ್ಕೆ ಸಿಟ್ಟಾಗಿದ್ದ ಆರೋಪಿ, ಲಾರಿ ಫೋಟೊ ತೆಗೆದು ಜಿಎಸ್‌ಟಿ ಸಿಬ್ಬಂದಿಗೆ ಕಳುಹಿಸಿದ್ದ.’

‘ತುಮಕೂರು ಬಳಿ ಜಿಎಸ್‌ಟಿ ಅಧಿಕಾರಿಗಳು ಲಾರಿ ಜಪ್ತಿ ಮಾಡಿದ್ದರು. ಪ್ರಮೋದ್ ಅವರ ಆಪ್ತ ಸಹಾಯಕ ಬಸಂತಕುಮಾರ್, ಚನ್ನಪ್ಪಗೆ ಕರೆ ಮಾಡಿ ಲಾರಿ ಬಿಡುಗಡೆ ಮಾಡಲು ಕೋರಿದ್ದ. ತುಮಕೂರಿಗೆ ಹೋಗಿ ಲಾರಿ ಬಿಡಿಸಿಕೊಳ್ಳಿ ಎಂಬುದಾಗಿ ಆತ ಹೇಳಿದ್ದ. ಸ್ಥಳಕ್ಕೆ ಹೋದಾಗ, ಚನ್ನಪ್ಪ ಎಂಬ ಅಧಿಕಾರಿಯೇ ಇಲ್ಲವೆಂಬ ಸಂಗತಿ ಗೊತ್ತಾಗಿತ್ತು. ಇದನ್ನೇ ಪ್ರಮೋದ್ ದೂರಿನಲ್ಲಿ ಉಲ್ಲೇಖಿಸಿದ್ದರು’ ಎಂದೂ ಸಿಸಿಬಿ ಅಧಿಕಾರಿ ಹೇಳಿದರು.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ

ಸಂಖ್ಯೆ:ಚಿ.ನ.ಅ.ಪ್ರಾ/ಭೂ.ಉ.ಬ./01/2021–22/308 ದಿನಾಂಕ:24.09.2021

ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ: ನಅಇ 61 ಬೆಂರೂಪ್ರಾ 2004 ಬೆಂಗಳೂರು, ದಿನಾಂಕ: 28.04.2004ರಂತೆ ಚಿಕ್ಕಬಳ್ಳಾಪುರ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಸ್ಥೂಲಾಭಿವೃದ್ಧಿ ಯೋಜನೆಗೆ ಕೆ.ಟಿ.ಸಿ.ಪಿ.ಕಾಯ್ದೆ 1961 ಕಲಂ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡಲಾಗಿರುತ್ತದೆ. ಸದರಿ ಸ್ಥೂಲಾಭಿವೃದ್ಧಿ ಯೋಜನೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ಗಂಗನಮಿದ್ದೆ ಗ್ರಾಮದ ಸ.ನಂ.178/1ರಲ್ಲಿ 01ಎಕರೆ–21ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದ್ದು, ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2005ರ ಕಲಂ 69(2)ರನ್ವಯ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಇ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2005ರ ಕಲಂ 69 ರನ್ವಯ ಈ ಕೆಳಕಂಡಂತೆ 'ವಸತಿ' ಭೂ ಉಪಯೋಗವನ್ನು ನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ ಸದರಿ ಕಲಂ 69(4)ರ ಅಡಿಯಲ್ಲಿ 'ವಸತಿ' ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

(1) ಅರ್ಜಿದಾರರ ಹೆಸರು: (1) ಚೌರಮ್ಮ ಕೋಂ ಲೇ॥ ಸಿ.ಜೆ. ರಾಯಪ್ಪ, (2) ಶೈಲೇಂದ್ರ ಅನಿಲ್ ಸಿ.ಆರ್. ಬಿನ್ ಲೇ॥ ಸಿ.ಜೆ. ರಾಯಪ್ಪ, (3) ಸ್ಯಾಮುವೇಲ್ ಸುನಿಲ್ ಸಿ.ಆರ್. ಬಿನ್ ಲೇ॥ ಸಿ.ಜೆ. ರಾಯಪ್ಪ. **ತಾಲ್ಲೂಕು:** ಚಿಕ್ಕಬಳ್ಳಾಪುರ. **ಹೋಬಳಿ:** ಕಸಬಾ. **ಗ್ರಾಮ:** ಗಂಗನಮಿದ್ದೆ, **ಸ.ನಂ.:** 178/1, **ವಿಸ್ತೀರ್ಣ:** 01ಎಕರೆ–21ಗು. **ಸ್ಥೂಲಾಭಿವೃದ್ಧಿ ಯೋಜನೆಯಂತೆ ಭೂ ಉಪಯೋಗ:** ಉದ್ಯಾನವನ. ಬದಲಾವಣೆ ಕೋರಿರುವ ಭೂ ಉಪಯೋಗ: **ವಸತಿ.**

ಸಹಿ/- (ಡಾ॥ ಭಾಸ್ಕರ್.ಎನ್) ಆಯುಕ್ತರು,
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 185/ಎಂಸಿಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಫಾರಂ–ಎ
ಸಾರ್ವಜನಿಕ ಪ್ರಕಟಣೆ
[ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]
ಮೆಸರ್ಸ್ ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಕ್ರೆಡಿಟರುಗಳ (ಸಾಲ ನೀಡಿದವರ) ಗಮನಕ್ಕೆ

ಸಂಬಂಧಪಟ್ಟ ವಿವರಗಳು

1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್
2.	ಸಾಲಗಾರ ಸಂಸ್ಥೆ ರಚನೆಯಾದ ದಿನಾಂಕ	16 ಮಾರ್ಚ್ 2007
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯ ರಚನೆಯಾಗಿದೆ/ ನೋಂದಾವಣಿಯಾಗಿದೆ	ROC- ಬೆಂಗಳೂರು
4.	ಸಾಲಗಾರ ಸಂಸ್ಥೆಯ ಕಾರ್ಪೊರೇಟ್ ಗುರುತಿನ ಸಂಖ್ಯೆ/ ಸೀಮಿತ ಹೊಣೆಗಾರಿಕೆ ಗುರುತಿನ ಸಂಖ್ಯೆ	U85110KA2007PTC068050
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	2371/3, ಎಚ್.ಎ.ಎಲ್. ಏರ್ಪೋರ್ಟ್ – ವರ್ತೂರು ಮುಖ್ಯ ರಸ್ತೆ, ಮುನ್ನೆ ಕೊಳಲು, ಮಾರತಹಳ್ಳಿ ಅಂಚೆ, ಬೆಂಗಳೂರು– 560037.
6.	ಸಾಲಗಾರ ಸಂಸ್ಥೆಯ ದಿವಾಳಿತನ ಪ್ರಕ್ರಿಯೆ ಆರಂಭವಾದ ದಿನಾಂಕ	16 ಮಾರ್ಚ್ 2021
7.	ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	29 ಡಿಸೆಂಬರ್ 2021
8.	ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ	ಶ್ರೀ ರವೀಂದ್ರ ಬೆಳೆಯೂರ್ ಐಬಿಬಿಐ/ಐಪಿಎ–001/ಐಪಿ–ಪಿ00189/2017–2018/10368
9.	ಮಂಡಳಿಯಲ್ಲಿ ನೋಂದಣಿಯಾದಂತೆ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್.	ಶ್ರೀ ರವೀಂದ್ರ ಬೆಳೆಯೂರ್ 'ಶ್ರೀವತ್ಸ',428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011. ಇಮೇಲ್:ravi@beleyur.com
10.	ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್,	ಶ್ರೀ ರವೀಂದ್ರ ಬೆಳೆಯೂರ್ ಮಧ್ಯಂತರ ನಿರ್ಣಯ ವೃತ್ತಿಪರರು, 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್:rp.yashomati@beleyur.com
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	14 ಅಕ್ಟೋಬರ್ 2021
12.	ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	ವೆಬ್ ಲಿಂಕ್: https://www.ibbi.gov.in/home/downloads ಭೌತಿಕ ವಿಳಾಸ: ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣವು 16ನೇ ಮಾರ್ಚ್ 2021 ದಿನಾಂಕದ ತನ್ನ ಆದೇಶದ ಮೂಲಕ ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಮಧ್ಯಂತರ ಪರಿಹಾರ ವೃತ್ತಿಪರರ (ಐ.ಆರ್.ಪಿ) ಬದಲಿಗೆ ಇಲ್ಲಿ ಕೆಳಗೆ ಸಹಿ ಮಾಡಿರುವವರನ್ನು 6ನೇ ಆಗಸ್ಟ್ 2021 ರ ಆದೇಶದಂತೆ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. ಐಆರ್‌ಪಿ ಅವರು 19ನೇ ಮಾರ್ಚ್ 2021 ರಂದು ನೀಡಿದ್ದ ಸಾರ್ವಜನಿಕ ಪ್ರಕಟಣೆಯು ಸಿಐಆರ್‌ಪಿ ನಿಬಂಧನೆಗಳು 2016ರ ನಿಬಂಧನೆ 6(ಬಿ) ಪ್ರಕಾರ ವ್ಯಾಪಕವಾದ ಓದುಗರನ್ನು ಹೊಂದಿರುವ ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾಗಿರಲಿಲ್ಲವಾಗಿ ಸದರಿ ಪರಿಹಾರ ವೃತ್ತಿಪರರು ಈ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್ ಗೆ ಸಾಲನೀಡಿದವರು 14ನೇ ಅಕ್ಟೋಬರ್ 2021ರಂದು ಅಥವಾ ಅದರ ಒಳಗೆ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಪರಿಹಾರ ವೃತ್ತಿಪರರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಸಿಐಆರ್‌ಪಿ ಪ್ರಕ್ರಿಯೆಯ ಕಾಲಮಿತಿಗಳನ್ನು ಗಮನದಲ್ಲಿಟ್ಟುಕೊಂಡು 14ನೇ ಅಕ್ಟೋಬರ್ 2021ರ ನಂತರ ಬಂದ ಯಾವುದೇ ಕ್ಲೇಮನ್ನು ಪರಿಹಾರ ವೃತ್ತಿಪರರು ಪರಿಗಣಿಸಲು ಸಾಧ್ಯವಾಗುವುದಿಲ್ಲ.

ಹಣಕಾಸು ಸಾಲನೀಡಿದ ಎಲ್ಲರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ಮಾದರಿಯಲ್ಲಷ್ಟೇ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
ರವೀಂದ್ರ ಬೆಳೆಯೂರ್
ಪರಿಹಾರ ವೃತ್ತಿಪರರು
ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್, ಸಿಐಆರ್‌ಪಿ ಅಡಿಯಲ್ಲಿ

ದಿನಾಂಕ: 28ನೇ ಸೆಪ್ಟೆಂಬರ್, 2021
ಸ್ಥಳ: ಬೆಂಗಳೂರು

ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳ ಏರಿಕೆಗೆ ಖಂಡನೆ

ಮಹಿಳಾ ಆಯೋಗದ ಕಚೇರಿಗೆ ಬೀಗ ಹಾಕಿ ಎಎಪಿ ಪ್ರತಿಭಟನೆ

ಬೆಂಗಳೂರು: ‘ರಾಜ್ಯದಲ್ಲಿ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ನಿರಂತರವಾಗಿ ಹೆಚ್ಚುತ್ತಿವೆ. 2018ರ ಜನವರಿಯಿಂದ 2021ರ ಜುಲೈವರೆಗೆ 1,759 ಅತ್ಯಾಚಾರ ಪ್ರಕರಣಗಳು ನಡೆದಿವೆ. ಹೀಗಿದ್ದರೂ ಮಹಿಳಾ ಆಯೋಗ ಕಣ್ಣುಮುಚ್ಚಿ ಕುಳಿತಿದೆ’ ಎಂದು ಆಮ್ ಆದ್ಮಿ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಕುಶಲಾ ಸ್ವಾಮಿ ಟೀಕಿಸಿದರು.

ಮಹಿಳಾ ಆಯೋಗ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿ ಪಕ್ಷದ ವತಿಯಿಂದ ಆಯೋಗದ ಕಚೇರಿಗೆ ಬೀಗ ಹಾಕಿ ಮಂಗಳವಾರ ಪ್ರತಿಭಟಿಸಲಾಯಿತು. ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಅವರನ್ನು ವಜಾಗೊಳಿಸಬೇಕೆಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ರಾಜ್ಯದಲ್ಲಿ ತಿಂಗಳಿಗೆ ಸರಾಸರಿ 42 ಅತ್ಯಾಚಾರ ನಡೆಯುತ್ತಿವೆ. ಈ ವರ್ಷದ ಮೊದಲ 7 ತಿಂಗಳಿನಲ್ಲಿ 307 ಅತ್ಯಾಚಾರ ನಡೆದಿವೆ. 1,300 ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದರೂ 6 ಮಂದಿಗಷ್ಟೇ ಶಿಕ್ಷೆಯಾಗಿದೆ. 178 ಮಂದಿ ವರದಕ್ಷಿಣೆ ಕಿರುಕುಳಕ್ಕೆ ಬಲಿಯಾಗಿದ್ದಾರೆ. ಮಾನಸಿಕ ಕಿರುಕುಳ ಹಾಗೂ ಬೆದರಿಕೆಗೆ ಹೆದರಿ 263 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 6 ಜನರ ಮೇಲೆ ಆ್ಯಸಿಡ್ ದಾಳಿ ನಡೆದಿದೆ. ಈ ಪೈಕಿ ಮಹಿಳಾ ಆಯೋಗದ ಅಧ್ಯಕ್ಷರು ಎಷ್ಟು ಸಂತ್ರಸ್ತರನ್ನು ಭೇಟಿಯಾಗಿದ್ದಾರೆ’ ಎಂದು ಪ್ರಶ್ನಿಸಿದರು.

ಉಷಾ ಮೋಹನ್, ‘ಪ್ರಮೀಳಾ ನಾಯ್ಡು ಆಯೋಗದ ಅಧ್ಯಕ್ಷರೊ ಅಥವಾ ಬಿಜೆಪಿಯ ಏಜೆಂಟರೂ ಎಂಬ ಅನುಮಾನ ಕಾಡುತ್ತಿದೆ. ಮಹಿಳಾ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದರೆ, ಪ್ರಕರಣಗಳು ಜನರ ಗಮನಕ್ಕೆ ಬಂದು ಸರ್ಕಾರದ ಮಾನ ಬೀದಿ ಪಾಲಾಗುತ್ತದೆ ಎಂಬ ಕಾರಣಕ್ಕೆ ಅವರು ನಿಷ್ಕ್ರಿಯರಾಗಿದ್ದಾರೆ’ ಎಂದು ದೂರಿದರು.

ಎಎಪಿಯ ರಾಜ್ಯ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ, ‘ರಮೇಶ್ ಜಾರಕಿಹೊಳಿ ಪ್ರಕರಣದಲ್ಲಿ ಸರ್ಕಾರವು ಸಂತ್ರಸ್ತ ಯುವತಿಯ ಬದಲು ಆರೋಪಿಯ ಬೆನ್ನಿಗೆ ನಿಂತಿರುವುದು ವಿಪರ್ಯಾಸ’ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಪುಷ್ಪಾ ಕೇಶವ್, ರಾಜಶೇಖರ್ ದೊಡ್ಡಣ್ಣ, ಯೋಗಿತಾ ರೆಡ್ಡಿ, ಪ್ರಶಾಂತಿ, ಅಶೋಕ್ ಮೃತ್ಯುಂಜಯ, ಶಾಶಾವಲಿ, ಫಿರೋಜ್ ಖಾನ್ ಇದ್ದರು.

ಆಮ್ ಆದ್ಮಿ ಪಕ್ಷದ ಮಹಿಳಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು

ನಿಧನ ವಾರ್ತೆ

ರಮೇಶ್ ಎನ್. ಜೋಷಿ



ಬೆಂಗಳೂರು: ಕನಕಪುರ ರಸ್ತೆಯ ಪ್ರೆಸ್ಟೀಜ್ ಫಾಲ್ಕನ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ರಮೇಶ್ ಎನ್. ಜೋಷಿ (73) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಯ ರಾಜಕೀಯ ವಿಭಾಗದ ಮುಖ್ಯಸ್ಥ ಭರತ್ ಜೋಷಿ ಸೇರಿ ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಬನಶಂಕರಿ ಸ್ಮಶಾನದಲ್ಲಿ ನಡೆಯಿತು.

ಎನ್. ಶಿವಕುಮಾರ್



ಬೆಂಗಳೂರು: ನಗರದ ಉದ್ಯಮಿ ಎನ್. ಶಿವಕುಮಾರ್ (59) ಅವರು ಮಂಗಳವಾರ ನಿಧನರಾದರು.

ಇವರು, ಬಿಜೆಪಿ ಮುಖಂಡ ಕೆ.ಎನ್. ಚಕ್ರಪಾಣಿ ಅವರ ಸಹೋದರ. ಶಿವಕುಮಾರ್ ಅವರಿಗೆ ಪತ್ನಿ, ತಾಯಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಕೊಡಿಗೇಹಳ್ಳಿ ಸಮೀಪದ ವಿರೂಪಾಕ್ಷಪುರದಲ್ಲಿರುವ ಜಮೀನಿನಲ್ಲಿ ಬುಧವಾರ (ಸೆ. 29) ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಸಾಕುನಾಯಿಗಳ ರಕ್ಷಣೆ • ಭದ್ರತಾ ಸಿಬ್ಬಂದಿ, ನಿವಾಸಿಗಳ ಸಮಯ ಪ್ರಜ್ಞೆಯಿಂದ ತಪ್ಪಿದ ಅನಾಹುತ

‘ಬಮೂಲ್’ ಕ್ವಾರ್ಟರ್ಸ್ ಕಟ್ಟಡದ ಭಾಗ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಮೂಲ್ (ಬೆಂಗಳೂರು ಹಾಲು ಒಕ್ಕೂಟ) ಆವರಣದಲ್ಲಿದ್ದ ಎರಡು ಅಂತಸ್ತಿನ ಕಟ್ಟಡದ ಒಂದು ಭಾಗ ಮಂಗಳವಾರ ಕುಸಿದಿದ್ದು, ಭದ್ರತಾ ಸಿಬ್ಬಂದಿ ಹಾಗೂ ನಿವಾಸಿಗಳ ಸಮಯ ಪ್ರಜ್ಞೆಯಿಂದ ದೊಡ್ಡ ಅನಾಹುತ ತಪ್ಪಿದೆ.

ಬಮೂಲ್ ಉದ್ಯೋಗಿಗಳ ಕುಟುಂಬದವರ ವಾಸಕ್ಕಾಗಿ 50 ವರ್ಷಗಳ ಹಿಂದೆ ಕ್ವಾರ್ಟರ್ಸ್ ನಿರ್ಮಿಸಲಾಗಿತ್ತು. ಇದರಲ್ಲಿ 18 ಮನೆಗಳು ಇದ್ದವು. 40ಕ್ಕೂ ಹೆಚ್ಚು ಮಂದಿ ವಾಸವಿದ್ದರು. ಮಂಗಳವಾರ ಬೆಳಿಗ್ಗೆ ಕಟ್ಟಡದ ಮಧ್ಯಭಾಗದ ಅಡಿಪಾಯದಲ್ಲಿ ನೆಲ ಕುಸಿದು, ಅದರ ಜೊತೆಯಲ್ಲಿ ಕಟ್ಟಡವೂ ಕುಸಿದಿದೆ.

ಕುಸಿತದ ವೇಳೆ ಕಟ್ಟಡದ ಮನೆಗಳಲ್ಲಿ ನಿವಾಸಿಗಳು ಇರಲಿಲ್ಲ. ಹೀಗಾಗಿ, ಯಾವುದೇ ಅನಾಹುತ ಸಂಭವಿಸಿಲ್ಲ.

ನಿವಾಸಿಗಳ ಸ್ಥಳಾಂತರ: ‘ಹಳೆಯ ಕಟ್ಟಡವಾಗಿದ್ದರಿಂದ, ಮಳೆ ಬಂದಾಗ ಹಲವೆಡೆ ಸೋರುತ್ತಿತ್ತು. 2016ರಲ್ಲಿ ಕಟ್ಟಡದ ಪರಿಶೀಲನೆ ನಡೆಸಿದ್ದ ಎಂಜಿನಿಯರ್‌ಗಳ ತಂಡ, ‘ಕಟ್ಟಡವು 10 ವರ್ಷ ವಾಸಕ್ಕೆ ಯೋಗ್ಯವಾಗಿದೆ’ ಎಂದು ಪ್ರಮಾಣಪತ್ರ ನೀಡಿದ್ದರು. ಹೀಗಾಗಿ, ಕಟ್ಟಡ ಕುಸಿಯುವ ಬಗ್ಗೆ ಅಧಿಕಾರಿಗಳಿಗೆ ಯಾವುದೇ ಸುಳಿವು ಇರಲಿಲ್ಲ’ ಎಂದೂ ಅಧಿಕಾರಿ ವಿವರಿಸಿದರು.

‘ಸೋಮವಾರ ರಾತ್ರಿ ಕಟ್ಟಡದ ಒಂದು ಭಾಗದಲ್ಲಿ ಬಿರುಕು ಕಾಣಿಸಿಕೊಂಡು, ಇಟ್ಟಿಗೆಯೊಂದು ಕಳಚಿ ಬಿದ್ದಿತ್ತು. ಅದನ್ನು ಗಮನಿಸಿದ್ದ ಭದ್ರತಾ ಸಿಬ್ಬಂದಿ ಹಾಗೂ ನಿವಾಸಿಗಳು, ಬಮೂಲ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ರಾತ್ರಿಯೇ ಕೆಲ ನಿವಾಸಿಗಳನ್ನು ಮನೆಯಿಂದ ಸ್ಥಳಾಂತರ ಮಾಡಲಾಗಿತ್ತು.’

‘ಮಂಗಳವಾರ ಬೆಳಿಗ್ಗೆ ಕಟ್ಟಡದ ಒಂದು ಭಾಗ ನಿಧಾನವಾಗಿ ವಾಲುತ್ತಿತ್ತು. ಇದೇ ಸಂದರ್ಭದಲ್ಲಿ ಕೆಲ ನಿವಾಸಿಗಳು ಹೊರಗೆ ಓಡಿಬಂದು ದೂರದಲ್ಲಿ ನಿಂತಿದ್ದರು. ಕಟ್ಟಡದ ಭಾಗ ಕುಸಿಯುತ್ತಿದ್ದಂತೆ ನಿವಾಸಿಗಳು, ಮತ್ತಷ್ಟು ದೂರಕ್ಕೆ ಓಡಿ ಹೋಗಿದ್ದರು. ಇದೇ ವೇಳೆಯೇ ಆಯತಪ್ಪಿ ಬಿದ್ದು ನಾಲ್ವರಿಗೆ ಸಣ್ಣಪುಟ್ಟ ಗಾಯವಾಗಿದೆ’ ಎಂದೂ ಅಧಿಕಾರಿ ಹೇಳಿದರು.

ಸಾಕುನಾಯಿ ರಕ್ಷಣೆ: ‘ಕಟ್ಟಡ ಕುಸಿಯುವ ಆತಂಕದಲ್ಲಿ ನಿವಾಸಿಗಳು ಹೊರಗೆ ಓಡಿ ಬಂದಿದ್ದರು. ಸಾಕುನಾಯಿಗಳು ಮನೆಯಲ್ಲೇ ಉಳಿದುಕೊಂಡಿದ್ದವು. ಕಟ್ಟಡ ಕುಸಿಯುತ್ತಿದ್ದಂತೆ, ಅವಶೇಷಗಳಡಿ ಸಿಲುಕಿ ಬೊಗಳುತ್ತಿದ್ದವು’ ಎಂದೂ ಅಧಿಕಾರಿ ತಿಳಿಸಿದರು.

‘ಕಾರ್ಯಾಚರಣೆ ನಡೆಸಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ನಾಲ್ಕು ನಾಯಿಗಳನ್ನು ಸುರಕ್ಷಿತವಾಗಿ ರಕ್ಷಿಸಿ ಹೊರಗೆ ತಂದರು’ ಎಂದೂ ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿದ್ದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ‘ಕಟ್ಟಡದಲ್ಲಿದ್ದವರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದ್ದು, ಅವರ ವಾಸಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು. ಕಟ್ಟಡ ಕುಸಿದಿರುವ ಬಗ್ಗೆ ಪರಿಶೀಲನೆ ವರದಿ ಸಿದ್ಧಪಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ, ‘ಬಮೂಲ್ ಆವರಣದಲ್ಲಿರುವ 6 ಬ್ಲಾಕ್‌ಗಳ 186 ಮನೆಗಳನ್ನು ಪರಿಶೀಲಿಸಲಾಗುವುದು. ನಂತರವೇ, ನೆಲಸಮದ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ತಿಳಿಸಿದರು.

ಬಮೂಲ್ ಆವರಣದಲ್ಲಿರುವ ಕ್ವಾರ್ಟರ್ಸ್ ಕಟ್ಟಡದ ಒಂದು ಭಾಗ ಕುಸಿದಿರುವುದು – ಪ್ರಜಾವಾಣಿ ಚಿತ್ರ

ದುಸ್ಥಿತಿಯಲ್ಲಿದ್ದ 178 ಕಟ್ಟಡ ಗುರುತಿಸಿದ್ದ ಬಿಬಿಎಂಪಿ

ಬೆಂಗಳೂರು: ಜೆ.ಪಿ.ನಗರದಲ್ಲಿ 30 ವರ್ಷದ ಹಳೆಯ ಕಟ್ಟಡ 2019ರಲ್ಲಿ ಕುಸಿದ ಬಳಿಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ನಗರದಾದ್ಯಂತ ದುಸ್ಥಿತಿಯಲ್ಲಿರುವ ಕಟ್ಟಡಗಳ ಸಮೀಕ್ಷೆ ಕೈಗೊಂಡಿತ್ತು.

ಈ ಸಮೀಕ್ಷೆಯ ಸಂದರ್ಭದಲ್ಲಿ ದುಸ್ಥಿತಿಯಲ್ಲಿರುವ 178 ಕಟ್ಟಡಗಳನ್ನು ನಗರದ ವಿವಿಧ ಭಾಗಗಳಲ್ಲಿ ಗುರುತಿಸಿತ್ತು. ಇವುಗಳಲ್ಲಿ 77 ಕಟ್ಟಡಗಳ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಆದರೆ, ನೋಟಿಸ್ ಜಾರಿ ನೀಡಿದ ಬಳಿಕ ಈ ಮಾಲೀಕರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈ ಬಗ್ಗೆ ಅಧಿಕಾರಿಗಳ ಬಳಿಯೂ ಮಾಹಿತಿ ಇಲ್ಲ. 77ರಲ್ಲಿ ದಕ್ಷಿಣ ಮತ್ತು ಪೂರ್ವ ವಲಯದಲ್ಲಿ 33 ಕಟ್ಟಡಗಳಿದ್ದವು.

ಮಾಲೀಕರ ವಿರುದ್ಧ ಯಾವುದೇ ರೀತಿ ಕ್ರಮಕೈಗೊಳ್ಳದ ಕಾರಣದಿಂದಾಗಿಯೇ ಸೋಮವಾರ ಲಕ್ಕಸಂದ್ರನಲ್ಲಿನ ಮೂರು ಅಂತಸ್ತಿನ ಕಟ್ಟಡ ಕುಸಿಯಲು ಕಾರಣವಾಯಿತು ಎನ್ನುವ ದೂರುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿವೆ.

‘ಸಮೀಕ್ಷೆಯ ಸಂದರ್ಭದಲ್ಲಿ ಲಕ್ಕಸಂದ್ರದಲ್ಲಿನ ಕಟ್ಟಡವನ್ನು ಗುರುತಿಸಿರುವ ಬಗ್ಗೆ ಮಾಹಿತಿಯನ್ನು ಪರಿಶೀಲಿಸಬೇಕಾಗಿದೆ. ಇನ್ನು ಮುಂದೆ ಪ್ರತಿ ವರ್ಷವೂ ಕಟ್ಟಡಗಳ ಸಮೀಕ್ಷೆ ಕೈಗೊಳ್ಳುವ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಪ್ರಸ್ತಾವ ಸಲ್ಲಿಸಲಾಗುವುದು. ಇದರಿಂದ, ಹಳೆಯ ಮತ್ತು ದುಸ್ಥಿತಿಯಲ್ಲಿರುವ ಕಟ್ಟಡಗಳ ಮೇಲೆ ನಿಗಾವಹಿಸಲು ಸಾಧ್ಯವಾಗಲಿದೆ’ ಎಂದು ಬಿಬಿಎಂಪಿ ದಕ್ಷಿಣ ವಲಯದ ಜಂಟಿ ಆಯುಕ್ತ ವೀರಭದ್ರಸ್ವಾಮಿ ತಿಳಿಸಿದ್ದಾರೆ.

‘ಇಂದಿನ ಆಧುನಿಕ ಕಟ್ಟಡಗಳನ್ನು 25 ವರ್ಷಗಳ ಬಳಿಕ ಪ್ರತಿ ಐದು ವರ್ಷಗಳಿಗೊಮ್ಮೆ ಪರಿಶೀಲಿಸಬೇಕು. ಆದರೆ, ಬಿಬಿಎಂಪಿ ಇಂತಹ ಕಟ್ಟಡಗಳ ಮೇಲೆ ನಿಗಾವಹಿಸಿಲ್ಲ’ ಎಂದು ಬೆಂಗಳೂರು ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಕೇಂದ್ರದ (ಎಸಿಸಿಇ) ಅಧ್ಯಕ್ಷ ಶ್ರೀಕಾಂತ್ ಚನ್ನಾಳ್ ಅಭಿಪ್ರಾಯಪಟ್ಟಿದ್ದಾರೆ.

ಶಿಥಿಲಾವಸ್ಥೆ ಕಟ್ಟಡ ಸರ್ವೆ: ವರದಿ ಕೇಳಿದ ಮುಖ್ಯ ಆಯುಕ್ತ

ಬೆಂಗಳೂರು: ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಬಗ್ಗೆ ಸರ್ವೆ ನಡೆಸಲು ಎಲ್ಲ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

‘ಎರಡು ವರ್ಷಗಳ ಹಿಂದೆಯೇ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಸರ್ವೆ ನಡೆಸಲಾಗಿದೆ. ಅದನ್ನು ಆಧರಿಸಿ ಕೈಗೊಂಡಿರುವ ಕ್ರಮಗಳೇನು ಎಂಬುದರ ಕುರಿತು ಎರಡು ದಿನಗಳಲ್ಲಿ ವರದಿ ಸಲ್ಲಿಸುವಂತೆ ತಿಳಿಸಲಾಗಿದೆ’ ಎಂದು ಅವರು ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

‘ಈ ಹಿಂದೆ ನಡೆಸಿರುವ ಸರ್ವೆ ಆಧರಿಸಿಯೇ ಜನರನ್ನು ಸ್ಥಳಾಂತರ ಮಾಡಬೇಕಿತ್ತು. ಅದು ಆಗಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಂಡು ಅಂಕಿ–ಅಂಶ ಸಹಿತ ವರದಿ ನೀಡಲು ತಿಳಿಸಿದ್ದೇನೆ. ಅಗತ್ಯ ಇರುವ ಕಡೆ ಹೊಸದಾಗಿ ಸರ್ವೆ ನಡೆಯಲಿದೆ’ ಎಂದರು.

ಗೌರವ್ ಗುಪ್ತ

‘ವಾಸಕ್ಕೆ ಯೋಗ್ಯ ಇಲ್ಲದ ಬೀಳುವ ಸ್ಥಿತಿಯಲ್ಲಿರುವ ಕಟ್ಟಡಗಳಲ್ಲಿ ಜನರು ನೆಲೆಸಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು. ಈ ಸಂಬಂಧ ಜಂಟಿ ಆಯುಕ್ತರ ನೇತೃತ್ವದಲ್ಲಿ ವಲಯವಾರು ಸಮಿತಿ ರಚನೆಯಾಗಲಿದೆ. ವಿಶೇಷವಾಗಿ ದಕ್ಷಿಣ ವಲಯದಲ್ಲಿ ಹೊಸ ಸರ್ವೆಯನ್ನು 30 ದಿನಗಳಲ್ಲಿ ಪೂರ್ಣಗೊಳಿಸಿ ವರದಿ ನೀಡಲು ತಿಳಿಸಲಾಗಿದೆ’ ಎಂದು ಹೇಳಿದರು.

‘ಕಟ್ಟಡ ಮತ್ತು ಅಗ್ನಿ ದುರಂತ ನಡೆದಿರುವ ಸ್ಥಳಗಳಿಗೆ ಮುಖ್ಯ ಆಯುಕ್ತರೇ ಹೋಗಬೇಕಿಲ್ಲ. ವಿಕೇಂದ್ರೀಕರಣ ವ್ಯವಸ್ಥೆ ಇದೆ. ಅವಶ್ಯಕತೆ ಇದೆ ಎನಿಸಿದರೆ ಸ್ಥಳಕ್ಕೆ ಹೋಗುತ್ತೇನೆ’ ಎಂದು ಸ್ಪಷ್ಟಪಡಿಸಿದರು.

‘ದೂರು ದಾಖಲಿಸುವ ಅಗತ್ಯವಿಲ್ಲ’

‘ಕಟ್ಟಡ ವಾಸಕ್ಕೆ ಯೋಗ್ಯವಾಗಿದ್ದ ಬಗ್ಗೆ ಎಂಜಿನಿಯರ್‌ಗಳು ಪ್ರಮಾಣ ಪತ್ರ ನೀಡಿದ್ದರು. ಜೊತೆಗೆ, ಇಡೀ ಕಟ್ಟಡ ಕುಸಿದಿಲ್ಲ. ಒಂದು ಭಾಗ ಮಾತ್ರ ಕುಸಿದಿದೆ. ಇದಕ್ಕೆ ಯಾರೊಬ್ಬರ ನಿರ್ಲಕ್ಷ್ಯವೂ ಕಾರಣವಲ್ಲ. ಹೀಗಾಗಿ, ಸದ್ಯಕ್ಕೆ ದೂರು ದಾಖಲಿಸಿಕೊಂಡಿಲ್ಲ’ ಎಂದು ಪೊಲೀಸರು ಹೇಳಿದರು.

‘ನೆಲ ಕುಸಿತದಿದ್ದರಿಂದ ಈ ಅವಘಡ ಸಂಭವಿಸಿರುವ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬಮೂಲ್ ಅವರೇ ಎಲ್ಲ ನಿವಾಸಿಗಳನ್ನು ಸ್ಥಳಾಂತರಿಸಿ ರಕ್ಷಿಸಿದ್ದಾರೆ’ ಎಂದೂ ತಿಳಿಸಿದರು.

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ? . . .
ನಿಮ್ಮ ಅಹವಾಲುಗಳಿಗೆ ‘ಪ್ರಜಾವಾಣಿ’ ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.
ಸಮಸ್ಯೆಗಳನ್ನು ವಾಟ್ಸ್ ಆ್ಯಪ್ **(9606038256)** ಸಹ ಮಾಡಬಹುದು.

ರಘುವನಹಳ್ಳಿಯಲ್ಲಿ ಪುನುಗು ಬೆಕ್ಕು

ಬೆಂಗಳೂರು: ‘ಹೆಮ್ಮಿಗೆಪುರ ವಾರ್ಡ್‌ನ ರಘುವನಹಳ್ಳಿಯ ಸಮೀಪ ಮಂಗಳವಾರ ಬೆಳಿಗ್ಗೆ ಕಾಣಿಸಿಕೊಂಡಿರುವ ಪ್ರಾಣಿಯು ಚಿರತೆಯಲ್ಲ. ಅದು ಪುನುಗು ಬೆಕ್ಕು. ಅದರಿಂದ ಯಾವುದೇ ಅಪಾಯವಿಲ್ಲ. ಯಾರೂ ಆತಂಕಕ್ಕೆ ಒಳಗಾಗಬಾರದು’ ಎಂದು ಕಗ್ಗಲಿಪುರ ಆರ್‌ಎಫ್‌ಒ ಗೋಪಾಲ್ ಹೇಳಿದರು.

‘ಚಿರತೆ ಕಾಣಿಸಿಕೊಂಡಿದೆ ಎಂದು ಸ್ಥಳೀಯರು ದೂರು ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅಲ್ಲಿ ಚಿರತೆ ಓಡಾಡಿರುವ ಯಾವ ಕುರುಹೂ ಪತ್ತೆಯಾಗಿಲ್ಲ. ಮಂಗಳವಾರ ಬೆಳಿಗ್ಗೆ ಸ್ಥಳೀಯರೊಬ್ಬರು ಪ್ರಾಣಿಯೊಂದು ಓಡಾಡುತ್ತಿರುವ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ನಮಗೆ ಕಳುಹಿಸಿದ್ದರು. ಅದು ಪುನುಗು ಬೆಕ್ಕು ಎಂಬುದು ಖಾತರಿಯಾಗಿದೆ. ಈ ಬೆಕ್ಕು ಚಿರತೆಯ ರೀತಿಯಲ್ಲೇ ಕಾಣುತ್ತದೆ. ಹೀಗಾಗಿ ಜನ ಗಾಬರಿಗೊಂಡಿದ್ದರು’ ಎಂದರು.

‘ಒಂದೊಮ್ಮೆ ಚಿರತೆ ಬಂದಿದ್ದರೆ ನಾಯಿ ಅಥವಾ ಇತರ ಪ್ರಾಣಿಗಳನ್ನು ಬೇಟೆಯಾಡಿರುತ್ತದೆ. ಸುತ್ತಲಿನ ಪ್ರದೇಶಗಳಲ್ಲಿ ನಾಯಿ ಅಥವಾ ಸಾಕು ಪ್ರಾಣಿಗಳು ಕಾಣೆಯಾಗಿರುವ ಬಗ್ಗೆ ವರದಿಯಾಗಿಲ್ಲ. ಚಿರತೆಯ ಚಲನವಲನ ಕಂಡುಬಂದರೆ ಮಾಹಿತಿ ರವಾನಿಸುವಂತೆ ಸ್ಥಳೀಯರಿಗೆ ತಿಳಿಸಿದ್ದೇವೆ’ ಎಂದರು.

‘ಮೂರು ವಾರಗಳ ಹಿಂದೆ ಬಡಾವಣೆಯ 1ನೇ ಮುಖ್ಯರಸ್ತೆಯ ಸಮೀಪ ಚಿರತೆಯನ್ನೇ ಹೋಲುವ ಪ್ರಾಣಿಯೊಂದು ಕಾಣಿಸಿಕೊಂಡಿತ್ತು. ಮಂಗಳವಾರ ಬೆಳಿಗ್ಗೆ ಮತ್ತೆ ಕಾಣಿಸಿಕೊಂಡಿದೆ. ಅದು ಚಿರತೆಯೇ ಇರಬಹುದೆಂದು ನಾವೆಲ್ಲಾ ಹೆದರಿದ್ದೆವು. ವಾಟ್ಸ್ಆ್ಯಪ್ ಮೂಲಕ ನಿವಾಸಿಗಳಿಗೆಲ್ಲಾ ಈ ಮಾಹಿತಿ ರವಾನಿಸಿದ್ದೆವು. ಬಡಾವಣೆಯ ಸನಿಹದಲ್ಲೇ ತುರಹಳ್ಳಿ ಅರಣ್ಯವಿದೆ. ಅಲ್ಲಿಂದ ಅದು ಬಂದಿರಬಹುದು’ ಎಂದು ಸ್ಥಳೀಯ ನಿವಾಸಿ ಶ್ರೀಹರ್ಷ ಸುಬ್ಬಕೃಷ್ಣ ತಿಳಿಸಿದರು.

30ಕ್ಕೆ ‘ಐಇಇಇ’ ಸಮ್ಮೇಳನ

ಬೆಂಗಳೂರು: ನಗರದಲ್ಲಿ ಸೆ.30ರಿಂದ ಅ.2ರವರೆಗೆ ‘ಐಇಇಇ ಏಷ್ಯಾ ಪೆಸಿಫಿಕ್ ಪ್ರಾದೇಶಿಕ ತಂತ್ರಜ್ಞಾನ’ ಸಮ್ಮೇಳನ ನಡೆಯಲಿದೆ.

‘ಐಇಇಇ’ ಬೆಂಗಳೂರು ವಿಭಾಗ ಈ ಸಮ್ಮೇಳನವನ್ನು ಆಯೋಜಿಸಿದೆ. ವಿವಿಧ ದೇಶಗಳಲ್ಲಿ ವಾರ್ಷಿಕ ಸಮ್ಮೇಳನಗಳು ನಡೆದಿದ್ದು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ನಿರ್ವಹಣೆ (ಎಸ್‌ಟಿಇಎಂ) ವಿಷಯಗಳ ಕುರಿತು ಚರ್ಚಿಸಲಾಗಿದೆ. ಸಮ್ಮೇಳನದಲ್ಲಿ ಅಮೆರಿಕ, ಬ್ರಿಟನ್, ಜಪಾನ್, ಮಲೇಷ್ಯಾ ಸೇರಿ 700 ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಐಇಇಇ ಬೆಂಗಳೂರು ವಿಭಾಗದ ಅಧ್ಯಕ್ಷ ಬಾಪು ಎಸ್. ಬಿಂಧುಮಾಧವ್ ತಿಳಿಸಿದ್ದಾರೆ.

1.57 ಲಕ್ಷ ಚದರ ಮೀಟರ್ ಗುಂಡಿ ಮುಚ್ಚಿದ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಂದು ತಿಂಗಳ ಅವಧಿಯಲ್ಲಿ 1.57 ಲಕ್ಷ ಚದರ ಮೀಟರ್ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಮುಖ್ಯ ರಸ್ತೆ, ಉಪಮುಖ್ಯ ರಸ್ತೆ ಮತ್ತು ವಾರ್ಡ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ನಿರಂತರವಾಗಿ ಮುಚ್ಚಲಾಗುತ್ತಿದೆ. ಗುಂಡಿ ಮುಚ್ಚಲು 490 ಲಾರಿ ಲೋಡ್ ಡಾಂಬರ್ ಬಳಸಲಾಗಿದೆ. ಅದಲ್ಲದೇ, 101 ಲೋಡ್ ವೆಟ್ ಮಿಕ್ಸ್(ಜಲ್ಲಿ ಮಿಶ್ರಿತ ಸಿಮೆಂಟ್) ಬಳಸಿ 10 ಸಾವಿರ ಚದರ ಮೀಟರ್‌ನಷ್ಟು ಗುಂಡಿಗಳನ್ನು ಮುಚ್ಚಲಾಗಿದೆ ಎಂದರು.

ಎಂಟೂ ವಲಯಗಳ ಮುಖ್ಯ ಎಂಜಿನಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯದಲ್ಲಿ ನಿರಂತರವಾಗಿ ಕಾರ್ಯಪ್ರವೃತ್ತರಾಗಿದ್ದಾರೆ. ವಿವಿಧ ಡಾಂಬರೀಕಣ ಯೋಜನೆಗೆ ಗುತ್ತಿಗೆ ಪಡೆದ ಗುತ್ತಿಗೆದಾರರಿಂದಲೂ ಆಯಾ ವಲಯ ಮತ್ತು ವಿಭಾಗಗಳಲ್ಲಿ ಗುಂಡಿ ಮುಚ್ಚಲು ಸೂಚಿಸಲಾಗಿದೆ ಎಂದು ತಿಳಿಸಿದೆ.

ಬೆಸ್ಕಾಂ, ಕೆಪಿಟಿಸಿಎಲ್, ಜಲಮಂಡಳಿ ಹಾಗೂ ಒಎಫ್‌ಸಿ ಸಂಸ್ಥೆಗಳು ಮುಖ್ಯ ರಸ್ತೆಗಳನ್ನು ಅಗೆಯುತ್ತಿದ್ದು, ಮಳೆಗಾಲ ಇರುವುದರಿಂದ ಅತೀ ಅವಶ್ಯಕ ಕಾಮಗಾರಿ ಇದ್ದರೆ ಮಾತ್ರ ಪಾಲಿಕೆಗೆ ತಿಳಿಸಿ ಅಗೆಯಲು ತಿಳಿಸಲಾಗಿದೆ ಎಂದು ಹೇಳಿದೆ.

ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಪರಿಶೀಲಿಸಿದರು

ಕಾಮಗಾರಿ ಪರಿಶೀಲನೆ

ಗಾಂಧಿನಗರ ವಾರ್ಡ್ ವ್ಯಾಪ್ತಿಯ ಎಸ್.ಸಿ. ರಸ್ತೆಯ ಮೊದಲನೇ ಕ್ರಾಸ್‌ನಲ್ಲಿ ರಸ್ತೆ ಗುಂಡಿ ಮುಚ್ಚುವ ಸ್ಥಳಕ್ಕೆ ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಪರಿಶೀಲನೆ ನಡೆಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ರಸ್ತೆಗುಂಡಿಗಳು ಬಿದ್ದಿವೆ ಎಂಬುದನ್ನು ಗುರುತಿಸಿ ಮುಚ್ಚುವ ಮೂಲಕ ಸುಗಮ ವಾಹನ ಸಂಚಾರಕ್ಕೆ ಅನುಕೂಲ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನವೀಕರಿಸಬಹುದಾದ ಇಂಧನ ನೀತಿ ಜಾರಿ: ಸರ್ಕಾರದ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ನವೀಕರಿಸಬಹುದಾದ ಇಂಧನ ನೀತಿ ಜಾರಿಗೊಳಿಸುವ ಕುರಿತು ಇಂಧನ ಇಲಾಖೆ ಗಂಭೀರ ಚಿಂತನೆ ನಡೆಸಿದೆ.

ಇಂಧನ ಸಚಿವ ವಿ. ಸುನಿಲ್ ಕುಮಾರ್ ಸೇರಿದಂತೆ ಇಲಾಖೆಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ನಡೆಸಿದ ಸಭೆಯಲ್ಲಿ ಈ ನೀತಿ ಬಗ್ಗೆ ವಿಸ್ತೃತ ಚರ್ಚೆ ನಡೆದಿದೆ.

‘ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ತೇಜನ, ಉದ್ಯೋಗ ಅವಕಾಶ ಸೃಷ್ಟಿಸುವ ಜೊತೆಗೆ ಹಸಿರು ಇಂಧನದ ಉತ್ಪಾದನೆ, ಬಳಕೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ನೀತಿ ರೂಪಿಸುವ ಬಗ್ಗೆ ಚರ್ಚೆ ನಡೆಯಿತು. ಇದರಿಂದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅವಲಂಬನೆ ಪ್ರಮಾಣ ತಗ್ಗಿಸಲು ಕೂಡಾ ಸಭೆಯಲ್ಲಿ ವಿಚಾರ ವಿನಿಮಯ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಸಚಿವರಾಗಿ ಅಧಿಕಾರ ವಹಿಸಿಕೊಂಡ ಆರಂಭದ 100 ದಿನದಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ಯೋಜನೆ, ಕಾರ್ಯಕ್ರಮಗಳ ಬಗ್ಗೆ ಮುಖ್ಯಮಂತ್ರಿಗೆ ಸಚಿವ ಸುನಿಲ್ ಕುಮಾರ್ ಮಾಹಿತಿ ನೀಡಿದರು. ಹಂತ ಹಂತವಾಗಿ ಇಂಧನ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಿ ಪರಿಣಾಮಕಾರಿಯಾಗಿ ವಿದ್ಯುತ್ ನಿರ್ವಹಣೆಗೆ ಕ್ರಮ ವಹಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ್ ಸಭೆಯಲ್ಲಿ ಇದ್ದರು.

ಕಟ್ಟಡ ಕುಸಿತ; ಮಾಲೀಕ ಬಂಧನ

ಬೆಂಗಳೂರು: ಲಕ್ಕಸಂದ್ರದ ಕಟ್ಟಡ ಕುಸಿತ ಪ್ರಕರಣದಲ್ಲಿ ಮಾಲೀಕ ಸುರೇಶ್ ಅವರನ್ನು ಆಡುಗೋಡಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘50 ವರ್ಷ ಹಿಂದೆ ನಿರ್ಮಿಸಿದ್ದ ಕಟ್ಟಡ ಸೋಮವಾರ ಕುಸಿದು ಬಿದ್ದಿತ್ತು. ಕಟ್ಟಡ ಶಿಥಿಲವಾಗಿರುವುದು ಗೊತ್ತಿದ್ದರೂ ಮಾಲೀಕ ಸುರೇಶ್ ನಿರ್ಲಕ್ಷ್ಯ ವಹಿಸಿದ್ದರು. ಬಿಬಿಎಂಪಿ ಅಧಿಕಾರಿಗಳು ನೀಡಿದ್ದ ದೂರು ಆಧರಿಸಿ ಸುರೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಮಾಲೀಕನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು’ ಎಂದೂ ತಿಳಿಸಿದರು.

advt.

ಕೆ.ಎ.ಎಸ್, ಪಿ.ಎಸ್.ಐ, ಎಫ್.ಡಿ.ಎ. ಪರೀಕ್ಷೆಗಳಿಗೆ ಉಚಿತ ತರಬೇತಿ

ಬೆಂಗಳೂರು : ಬೆಂಗಳೂರಿನ ವಿಜಯನಗರದಲ್ಲಿರುವ ಎನ್ ಲೈಟ್ ಅಕಾಡೆಮಿ ವತಿಯಿಂದ ಗ್ರಾಮೀಣ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ 4 ತಿಂಗಳವರೆಗೆ ಕೆ.ಎ.ಎಸ್., ಪಿ.ಎಸ್.ಐ, ಎಫ್.ಡಿ.ಎ., ಪಿ.ಡಿ.ಓ., ಸಿ.ಗ್ರೂಪ್ ಹಾಗೂ ಪಿ.ಸಿ. ಹುದ್ದೆಗಳಿಗೆ ಉಚಿತವಾಗಿ ತರಬೇತಿ ಆಯೋಜಿಸಿದೆ. ಈ ತರಬೇತಿ ಆಕ್ಟೋಬರ್, 06 ರಿಂದ ಆರಂಭವಾಗಲಿದೆ. ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಂಸ್ಥೆಯ ನಿರ್ದೇಶಕರಾದ ಸಿದ್ಧಾರ್ಥ ಮತ್ತು ರವೀಂದ್ರರವರು ತಿಳಿಸಿದರು.
ವಿಳಾಸ : ಎನ್ ಲೈಟ್ ಅಕಾಡೆಮಿ ವಿಜಯನಗರ 9ನೇ ಮೈನ್, ಮೆಟ್ರೋ ನಿಲ್ದಾಣದ ಹತ್ತಿರ, ಬೆಂಗಳೂರು–40
ಹೆಚ್ಚಿನ ಮಾಹಿತಿಗಾಗಿ :
7892585422 / 7892935570

ನಗರದಲ್ಲಿ ಇಂದು

ಪವಿತ್ರವಸ್ತ್ರ ಅಭಿಯಾನ @ಬೆಂಗಳೂರು: ಕರಕುಶಲ ಹಾಗೂ ಕೈಮಗ್ಗದ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ, ಆಯೋಜನೆ: ಚರಕ ಮತ್ತು ದೇಸಿ ಸಂಸ್ಥೆ, ಸ್ಥಳ: ದೀಪ್ತಿ ದೇಸಾಯಿಯವರ ನಿವಾಸ, #231, 15ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

ರಂಜನಿ ರಾಘವನ್ ಅವರ ‘ಕತೆ ಡಬ್ಬಿ’ ಕಥಾಸಂಕಲನ ಬಿಡುಗಡೆ: ಜೋಗಿ, ಜಯತೀರ್ಥ, ರಿಷಿ, ಚೇತನಾ ತೀರ್ಥಹಳ್ಳಿ, ಆಯೋಜನೆ ಹಾಗೂ ಸ್ಥಳ: ಬಹುರೂಪಿ ಬುಕ್ ಹೌಸ್, ಸಂಜಯನಗರ, ಬೆಳಿಗ್ಗೆ 11

ರಂಜನಿ ರಾಘವನ್

ಖಾಸಗಿ ಅನುದಾನ ರಹಿತ ಶಾಲಾ ಶಿಕ್ಷಕರಿಗೆ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಿ.ಸಿ. ನಾಗೇಶ್, ಮುಖ್ಯ ಅತಿಥಿಗಳು: ಎಸ್.ಟಿ. ಸೋಮಶೇಖರ್, ಶಿವಶಂಕರಪ್ಪ ಎಸ್. ಸಾಹುಕಾರ್, ವಿಶೇಷ ಆಹ್ವಾನಿತರು: ಪುಟ್ಟಣ್ಣ, ಎಸ್.ವಿ. ಸಂಕನೂರು, ವೈ.ಎ. ನಾರಾಯಣಸ್ವಾಮಿ, ಅಧ್ಯಕ್ಷತೆ: ಸಿ.ಎನ್. ಭಂಡಾರೆ, ಉಪಸ್ಥಿತಿ: ಲೋಕೇಶ್ ತಾಳಿಕಟ್ಟೆ, ಆಯೋಜನೆ: ರುಪ್ಸ ಕರ್ನಾಟಕ, ಸ್ಥಳ: ಸಾಂದೀಪಿನಿ ಹೈಟೆಕ್ ಸ್ಕೂಲ್, ನಾಗದೇವನಹಳ್ಳಿ, ಬೆಳಿಗ್ಗೆ 11

ಕರ್ನಾಟಕ ಹಾಲು ಮಹಾಮಂಡಳದ ನೂತನ ಯೋಜನೆಗಳ ಸಾಮೂಹಿಕ ಉದ್ಘಾಟನಾ ಸಮಾರಂಭ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು: ಪ್ರಹ್ಲಾದ್ ಜೋಶಿ, ನಿರ್ಮಲಾ ಸೀತಾರಾಮನ್, ಎಂ. ರಾಜೀವ್ ಚಂದ್ರಶೇಖರ್, ಎಚ್.ಡಿ. ದೇವೇಗೌಡ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ನಂದಿನಿ’ ಹೊಸ ಉತ್ಪನ್ನಗಳ ಬಿಡುಗಡೆ: ಎಸ್.ಟಿ. ಸೋಮಶೇಖರ್, ‘ನಂದಿನಿ’ ಎಮ್ಮೆ–ಪಶು ಆಹಾರ ಬಿಡುಗಡೆ: ಪ್ರಭು ಚವ್ಹಾಣ್, ಉಪಸ್ಥಿತಿ: ಬಾಲಚಂದ್ರ ಜಾರಕಿಹೊಳಿ, ಆಯೋಜನೆ: ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ (ಕೆಎಂಎಫ್), ಸ್ಥಳ: ವೈಟ್ ಪೆಟಲ್ಸ್, ಅರಮನೆ ಮೈದಾನ, ಬೆಳಿಗ್ಗೆ 11.30

40ರ ಸಂಭ್ರಮಾಚರಣೆ, ಲಾಂಛನ ಬಿಡುಗಡೆ ಹಾಗೂ ‘ಕ್ಲಬ್ ಹೌಸ್’ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಸದಾಶಿವ ಶೆಣೈ, ಉಪಸ್ಥಿತಿ: ಎನ್. ಮಂಜುನಾಥ ಪ್ರಸಾದ್, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾ, ಸಂಜೆ 4

ಅತ್ಯುತ್ತಮ ಶಿಕ್ಷಕರಿಗೆ ‘ರುಪ್ಸ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ ಉತ್ತಮ ಶಿಕ್ಷಕರನ್ನು ಪ್ರತಿವರ್ಷ ಗುರುತಿಸಿ ‘ಶಿಕ್ಷಕ ದಿನ’ದಂದು (ಸೆ. 5) ರಾಜ್ಯ ಸರ್ಕಾರ ಸನ್ಮಾನಿಸುತ್ತದೆ. ಆದರೆ, ಖಾಸಗಿ ಶಾಲೆಗಳ ಶಿಕ್ಷಕರಿಗೆ ಆ ಭಾಗ್ಯ ಇಲ್ಲ. ಈ ತಾರತಮ್ಯ ನಿವಾರಿಸಲು ನೋಂದಾಯಿತ ಖಾಸಗಿ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ರುಪ್ಸ) ತೀರ್ಮಾನಿಸಿದೆ.

ರಾಜ್ಯದ ಎಲ್ಲ ಶೈಕ್ಷಣಿಕ ಜಿಲ್ಲೆಗಳಿಂದ ಒಬ್ಬ ಅರ್ಹ ಶಿಕ್ಷಕನನ್ನು ಗುರುತಿಸಿ ‘ರುಪ್ಸ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ’ ನೀಡಿ ಸನ್ಮಾನಿಸಲು ಸಂಘಟನೆ ಮುಂದಾಗಿದೆ. ನಾಗದೇವನಹಳ್ಳಿಯಲ್ಲಿರುವ ಸಾಂದೀಪನಿ ಹೈಟೆಕ್ ಶಾಲೆಯಲ್ಲಿ ಇದೇ 29ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮತ್ತು ಸಹಕಾರ ಸಚಿವ ಎಸ್. ಟಿ. ಸೋಮಶೇಖರ್ ಈ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಖಾಸಗಿ ಶಾಲೆಗಳ ಶಿಕ್ಷಕರನ್ನೂ ಪ್ರಶಸ್ತಿಗೆ ಪರಿಗಣಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಹೀಗಾಗಿ, ನಾವು ಪ್ರಶಸ್ತಿ ನೀಡುತ್ತಿದ್ದೇವೆ

ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸ

ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರು: ಜಯಂತಿ ಫಣಿರಾಜ್ (ಬೆಂಗಳೂರು ಉತ್ತರ), ಫ್ರಾನ್ಸಿಸ್ ಅಂಥೋಣಿ (ಬೆಂಗಳೂರು ದಕ್ಷಿಣ), ಪ್ರಕಾಶ್ (ತುಮಕೂರು), ಟಿ. ಮುತ್ತುಸ್ವಾಮಿ (ರಾಮನಗರ), ಟಿ.ಎನ್. ಪದ್ಮಾವತಿ (ಕೋಲಾರ), ಎನ್.ಆರ್. ಗೋಪಿನಾಥ್ (ಚಿಕ್ಕಬಳ್ಳಾಪುರ), ಯು.ಎನ್. ಸವಿತಾ (ಮಂಡ್ಯ), ಕೆ.ಎಂ. ಗೋಪಿನಾಥ್ (ಮೈಸೂರು), ರಮೇಶ್ (ಚಾಮರಾಜನಗರ), ಕೆ.ಎಸ್. ಪ್ರಭುದಾಸ್ (ದಾವಣಗೆರೆ), ವಿನ್ಸೆಂಟ್ ಡಿ ಕೋಸ್ಟಾ (ಮಂಗಳೂರು), ಭಾಸ್ಕರ್ (ಉಡುಪಿ), ಪೂಜಾ ಉಲ್ಪಾಕರ್ (ಉತ್ತರ ಕನ್ನಡ), ಜಿ.ಎಸ್. ದೇಸಾಯಿ (ಹಾವೇರಿ), ಬಿ.ಆರ್. ಸಂತೋಷ್ (ಶಿವಮೊಗ್ಗ), ಆರ್. ಮೈಲುಸ್ವಾಮಿ (ಚಿತ್ರದುರ್ಗ), ಇಂದುಮತಿ ಬಿ. ಅಂಗಡಿ (ಗದಗ), ಮಂಜುನಾಥ್ ಎಸ್. ಪೂಜಾರಿ (ವಿಜಯಪುರ), ವೀರೇಶ್ ನಿಂಗಪ್ಪ ಗಾಣಿಗೇರ (ಧಾರವಾಡ), ಟಿ. ಇ. ಸುಲೇಹತ್ (ಕೊಡಗು), ವಿಮಲಾ ಡಿ ನಾಯಕ್ (ಬೆಳಗಾವಿ–1), ಚೇತನಾ ಎಸ್. ಪಾಟೀಲ (ಬೆಳಗಾವಿ–2), ಎಂ. ರಾಜು ನಾಯಕ್ (ವಿಜಯನಗರ), ಬಿ.ಎನ್. ರಮೇಶ್ ಬೋಂಗಲೆ (ಚಿಕ್ಕಮಗಳೂರು), ಎಸ್. ಎಂ. ಮಲ್ಲಿಕಾರ್ಜುನ (ಹೊಸಪೇಟೆ), ಜಾತಪ್ಪ ತಲಕಲ್ಲು (ರಾಯಚೂರು), ಮಹಾಲಕ್ಷ್ಮಿ ಪಾಟೀಲ ಮತ್ತು ಗುತ್ತಯ್ಯ (ಯಾದಗಿರಿ), ಸವಿತಾ (ಕಲಬುರ್ಗಿ), ರವೀಂದ್ರ (ಬೀದರ್), ಸಂತೋಷ್ ಚನ್ನಪ್ಪ ಬಿರಾದಾರ (ಶಿರಸಿ), ಎಸ್.ಎಸ್.ಚೌಗಲ (ಬಾಗಲಕೋಟೆ).

ಕೃಷ್ಣಾ ಮೇಲ್ದಂಡೆ: ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ

₹ 2,500 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆ ಆಗಲಿರುವ 20 ಗ್ರಾಮಗಳಲ್ಲಿನ ಕಟ್ಟಡ ಹಾಗೂ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಸಕ್ತ ಸಾಲಿನಲ್ಲಿ ₹ 2,500 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶಿಸಿದ್ದಾರೆ.

ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ಮಂಗಳವಾರ ಉನ್ನತಮಟ್ಟದ ಸಭೆ ನಡೆಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು ಈ ವಿಷಯ ಪ್ರಕಟಿಸಿದರು.



ಬಸವರಾಜ ಬೊಮ್ಮಾಯಿ

‘ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ಕಾರ್ಯ ಸ್ಥಗಿತಗೊಂಡಿದೆ. ಈ ಕೆಲಸವನ್ನು ಪುನರಾರಂಭಿಸುವಂತೆ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿಗೆ ₹ 2,500 ಕೋಟಿ ಅನುದಾನ ಬಿಡುಗಡೆಗೆ ಆದೇಶಿಸಿದ್ದೇನೆ’ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವುದಕ್ಕೆ ಪೂರಕವಾಗಿ ಕಾನೂನು ಸಲಹೆಗಾರರನ್ನು ನೇಮಿಸಬೇಕು. ಹೈಕೋರ್ಟ್‌ನ ಧಾರವಾಡ ಮತ್ತು ಕಲಬುರ್ಗಿ ಪೀಠಗಳಲ್ಲಿ ಬಾಕಿ ಇರುವ ಪ್ರಕರಣಗಳಿಗೆ ವಿಶೇಷ ವಕೀಲರನ್ನು ನೇಮಿಸಬೇಕು. ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲು ಭೂಮಾಪನ ಕೆಲಸಕ್ಕೆ ಡ್ರೋನ್‌ಗಳನ್ನು ಬಳಸಿಕೊಳ್ಳಬೇಕು ಎಂಬ ನಿರ್ದೇಶನಗಳನ್ನೂ ಮುಖ್ಯಮಂತ್ರಿ ನೀಡಿದ್ದಾರೆ.

ಜಲ ಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಕೃಷ್ಣಾ ಮೇಲ್ದಂಡೆ ಯೋಜನೆ ಪರಿಹಾರ ಮತ್ತು ಪುನರ್ವಸತಿ ಆಯುಕ್ತ ಶಿವಯೋಗಿ ಕಳಸದ, ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಲಕ್ಷ್ಮಣ್ ರಾವ್ ಪೇಶ್ವೆ, ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಭಾಕರ ಚಿಣಿ ಸಭೆಯಲ್ಲಿದ್ದರು.

ಎಲ್‌ಐಸಿ, ಅಂಚೆ ಇಲಾಖೆ ನಡುವೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಜೀವ ವಿಮೆ ಪಾಲಿಸಿ ಖರೀದಿಸುವವರಿಗೆ ನೀಡುವ ಪುಸ್ತಿಕೆಯನ್ನು ಮುದ್ರಿಸಿ, ಅದನ್ನು ರವಾನೆ ಮಾಡುವ ಹೊಣೆಯನ್ನು ಅಂಚೆ ಇಲಾಖೆ ವಹಿಸಿಕೊಂಡಿದೆ.

ಈ ವಿಚಾರವಾಗಿ ಎಲ್‌ಐಸಿ ಮತ್ತು ಅಂಚೆ ಇಲಾಖೆ ನಡುವೆ ಒಪ್ಪಂದ ಆಗಿದೆ. ಎಲ್‌ಐಸಿ ಅಧ್ಯಕ್ಷ ಎಂ.ಆರ್. ಕುಮಾರ್, ಇತರ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಎಲ್‌ಐಸಿ ಪ್ರಕಟಣೆ ತಿಳಿಸಿದೆ.

ಶಾಸಕ ಕೃಷ್ಣ ಬೈರೇಗೌಡ ಮಾತನಾಡಿದರು. ರಾಜ್ಯ ಒಕ್ಕಲಿಗರ ಸಂಘದ ಆಸ್ತಿ ಉಳಿವಿನ ಹೋರಾಟ ಸಮಿತಿ ಸಂಚಾಲಕ ಕೆ.ನ.ಲಿ. ಗೌಡ, ಪ್ರೊ. ಮಲ್ಲಯ್ಯ, ಮಾಜಿ ಸಚಿವ ಎನ್‌.ಚೆಲುವರಾಯ ಸ್ವಾಮಿ, ಚಕ್ಕಲೂರು ಕೃಷ್ಣಪ್ಪ, ಬೆಂಗಳೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಘುವೀರ್ ಎಸ್‌.ಗೌಡ, ಗೋವಿಂದೇಗೌಡ, ವೈ.ಡಿ.ರವಿಶಂಕರ್, ಎಂ.ಗೋಪಾಲ್ ಇದ್ದಾರೆ

‘ಒಕ್ಕಲಿಗರ ಸಂಘದ ಆಸ್ತಿ ಉಳಿಸಲು ಹೋರಾಟ’

ರಾಜರಾಜೇಶ್ವರಿನಗರ: ‘ಎಲ್ಲ ಸಮುದಾಯಗಳನ್ನು ಸರಿಸಮಾನವಾಗಿ ಕಾಣುವ ಮೂಲಕ ಆ ಸಮಾಜ ಮತ್ತು ಸಂಘಸಂಸ್ಥೆಗಳ ಅಭಿವೃದ್ಧಿಗೂ ಸಂಪನ್ಮೂಲ ಒದಗಿಸಿ, ಸರ್ಕಾರ ಸಮಾನ ಹಕ್ಕನ್ನು ಒಕ್ಕಲಿಗರ ಸಂಘಕ್ಕೂ ನೀಡಬೇಕು. ಶಿಕ್ಷಣಕ್ಕಾಗಿ ಇಲ್ಲಿಯೇ ಜಾಗ ಮಂಜೂರು ಮಾಡಿಕೊಡಬೇಕು’ ಎಂದು ಶಾಸಕ ಕೃಷ್ಣಬೈರೇಗೌಡ ಒತ್ತಾಯಿಸಿದರು.

ಮಾಗಡಿ ರಸ್ತೆಯ ಶ್ರೀಗಂಧಕಾವಲ್ ಒಕ್ಕಲಿಗರ ಸಂಘಕ್ಕೆ ನೀಡಿರುವ ಭೂಮಿಯನ್ನು ಉಳಿಸುವಂತೆ ಒತ್ತಾಯಿಸಿ ಹಮ್ಮಿಕೊಂಡಿರುವ 50ನೇ ದಿನದ ಹೋರಾಟ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ‘ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳು ಒಗ್ಗೂಡಿ ಆಸ್ತಿಯನ್ನು ಉಳಿಸಲು, ಎಲ್ಲ ರೀತಿಯ ಹೋರಾಟಕ್ಕೂ ಸಿದ್ದರಾಗಬೇಕು’ ಎಂದರು.

ಕಾಂಗ್ರೆಸ್ ಮುಖಂಡ ಎನ್.ಚೆಲುವರಾಯಸ್ವಾಮಿ ಅವರು, ‘ಸಮುದಾಯದ ವಿಷಯಕ್ಕೆ ಧಕ್ಕೆ ಬಂದಾಗ, ಎಲ್ಲರೂ ಒಂದಾಗಿ ನಿಲ್ಲಬೇಕು’ ಎಂದರು.

ರಾಜ್ಯ ಒಕ್ಕಲಿಗರ ಸಂಘದ ಆಸ್ತಿ ಉಳಿವಿನ ಹೋರಾಟ ಸಮಿತಿ ಸಂಚಾಲಕ ಕೆ.ನ.ಲಿ.ಗೌಡ ಮಾತನಾಡಿ, ‘ಒಕ್ಕಲಿಗ ಜನಾಂಗಕ್ಕೆ ಮೀಸಲಾತಿ, ಸೌಲಭ್ಯ,ಶಿಕ್ಷಣ, ಉದ್ಯೋಗದಲ್ಲಿಯೂ ಅನ್ಯಾಯವಾಗುತ್ತಿದೆ. ಜನಾಂಗದ ಕೆಲವರು ಸ್ವಾರ್ಥಕ್ಕೋಸ್ಕರ ಸಂಘವನ್ನು ಛಿದ್ರಮಾಡುತ್ತಿದ್ದಾರೆ’ ಎಂದರು.

ಬೆಂಗಳೂರು ನಗರ ಜಿಲ್ಲಾ ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಘುವೀರ್ ಎಸ್.ಗೌಡ, ಜಿಲ್ಲಾ ಪರಿಷತ್ ಮಾಜಿ ಸದಸ್ಯ ಹನುಮಂತರಾಯಪ್ಪ, ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಪ್ರೊ. ಎಂ.ಮಲ್ಲಯ್ಯ, ಎಂ.ಎ. ಆನಂದ್, ಕನ್ನಡ ಪರಿಚಾರಕ ಎಂ.ಪ್ರಕಾಶ್ ಮೂರ್ತಿ ಇದ್ದರು.

ಸಾಯಿಸುತೆ, ರೇಖಾ ಕಾಖಂಡಕಿಗೆ ‘ವರ್ಷದ ಲೇಖಕಿ ಪುರಸ್ಕಾರ’

ಸಾಯಿಸುತೆ

ರೇಖಾ ಕಾಖಂಡಕಿ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 2020 ಮತ್ತು 2021ನೇ ಸಾಲಿನ ‘ವರ್ಷದ ಲೇಖಕಿ–ಅಂಕಿತ ಪುಸ್ತಕ ಪುರಸ್ಕಾರ’ ಪ್ರಕಟವಾಗಿದ್ದು, ಲೇಖಕಿಯರಾದ ಸಾಯಿಸುತೆ ಹಾಗೂ ರೇಖಾ ಕಾಖಂಡಕಿ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 35 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅ.4ರಂದು ಬೆಂಗಳೂರಿನ ಎನ್.ಆರ್. ಕಾಲೋನಿಯ ಬಿ.ಎಂ.ಶ್ರೀ. ಪ್ರತಿಷ್ಠಾನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕವಿ ಜಯಂತ ಕಾಯ್ಕಿಣಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಡಾ.ಎಲ್.ಜಿ. ಮೀರಾ ಅವರು ಅಭಿನಂದನಾ ನುಡಿ ನುಡಿಯಲಿದ್ದಾರೆ. ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಲ್ಲಿ ಉಪಸ್ಥಿತರಿರುತ್ತಾರೆ ಎಂದು ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಲೆ ಆರೋಪಿ ಬಂಧನ

ರಾಮನಗರ: ಜೊತೆಗಿದ್ದವನನ್ನೇ ಕೊಲೆ ಮಾಡಿ ಅಸ್ಸಾಂಗೆ ಪರಾರಿಯಾಗಿದ್ದ ಆರೋಪಿಯನ್ನು ಕುಂಬಳಗೂಡು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂನ ಸೋನಿತ್‌ಪುರ್ ಜಿಲ್ಲೆಯ ನಿವಾಸಿ ಫಸರ್ ಅಲಿ (26) ಬಂಧಿತ ಆರೋಪಿ. ಅಸ್ಸಾಂನವರೇ ಆದ ಕಮಲ್ ಹುಸೇನ್ (18) ಹತ್ಯೆಗೀಡಾದ ಯುವಕ. ಒಂದೇ ಊರಿನವರಾದ ಈ ಇಬ್ಬರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಇದ್ದರು. ಕ್ಷುಲ್ಲಕ ಕಾರಣಕ್ಕೆ ಕಮಲ್‌ನನ್ನು ಹತ್ಯೆ ಮಾಡಿದ್ದ ಆರೋಪಿಯು, ಮೃತದೇಹವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿ ಕುಂಬಳಗೂಡು ನಿಸರ್ಗ ಡಾಬಾ ಸಮೀಪ ಮನೆಯೊಂದರ ಹಿಂಭಾಗದ ಕಸದ ರಾಶಿಯಲ್ಲಿ ಎಸೆದು ಪರಾರಿಯಾಗಿದ್ದ. ಸ್ಥಳೀಯರು ನೀಡಿದ್ದ ದೂರು ಆಧರಿಸಿ ಪೊಲೀಸರು ತನಿಖೆ ಕೈಗೊಂಡಿದ್ದರು. ಆರೋಪಿಯ ಜಾಡು ಹಿಡಿದು ಅಸ್ಸಾಂನ ನಾಗೋನ್ ನಗರಕ್ಕೆ ತೆರಳಿ ಬಂಧಿಸಿದ್ದಾರೆ.

ಪಕ್ಷಕ್ಕೆ ದುಡಿಯುವ ಯುವಕರಿಗೆ ಆದ್ಯತೆ: ಡಿಕೆಶಿ

‘ಕಾಂಗ್ರೆಸ್: ದಸರಾಗೆ ಮುನ್ನ ಪದಾಧಿಕಾರಿಗಳ ನೇಮಕ’

ಪ್ರಜಾವಾಣಿ ವಾರ್ತೆ

ಶಿವಕುಮಾರ್

ನವದೆಹಲಿ: ಪಕ್ಷದ ರಾಜ್ಯ ಘಟಕದ ಹಾಗೂ ಆಯಾ ಜಿಲ್ಲಾ ಘಟಕಗಳ ಪದಾಧಿಕಾರಿಗಳ ನೇಮಕ ಪ್ರಕ್ರಿಯೆಯನ್ನು ದಸರಾ ಹಬ್ಬಕ್ಕೆ ಮೊದಲೇ ಪೂರ್ಣಗೊಳಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪದಾಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದ ಪಟ್ಟಿಯ ಕುರಿತು ಪಕ್ಷದಲ್ಲಿ ಯಾರ ವಿರೋಧವೂ ಇಲ್ಲ. ಈ ಸಂಬಂಧ ವಿಳಂಬವೂ ಆಗಿಲ್ಲ. ಅಧಿಕಾರದ ಆಕಾಂಕ್ಷೆ ಇಲ್ಲದ, ಪಕ್ಷಕ್ಕೆ ಪೂರ್ಣಾವಧಿ ಸೇವೆ ಸಲ್ಲಿಸುವ ಯುವ ಮುಖಂಡರಿಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ. ದಸರಾ ಹಬ್ಬಕ್ಕೆ ಮೊದಲೇ ನೇಮಕದ ಆದೇಶ ಹೊರಬೀಳಲಿದೆ ಎಂದರು.

ಮುಖ್ಯಾಂಶಗಳು

- ‘ಪದಾಧಿಕಾರಿಗಳ ಪಟ್ಟಿಗೆ ಯಾರ ವಿರೋಧವೂ ಇಲ್ಲ’
- ‘ಆಪರೇಷನ್ ಹಸ್ತ ಕುರಿತು ಯೋಚನೆ ಮಾಡಿಲ್ಲ’

ಹೈಕಮಾಂಡ್ ನಿರ್ಧಾರ: ಸಿಂದಗಿ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಗೆ ಈಗಾಗಲೇ ಪಕ್ಷದ ವರಿಷ್ಠರು ಅಭ್ಯರ್ಥಿ ಅಂತಿಮಗೊಳಿಸಿದ್ದಾರೆ. ಹಾನಗಲ್ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತ ನಿರ್ಧಾರವನ್ನು ಹೈಕಮಾಂಡ್ ಶೀಘ್ರವೇ ಪ್ರಕಟಿಸಲಿದೆ ಎಂದು ಅವರು ಹೇಳಿದರು.

‘ಆಪರೇಷನ್ ಹಸ್ತದ ಕುರಿತು ಯೋಚನೆ ಮಾಡಿಲ್ಲ. ಪಕ್ಷದ ಸಿದ್ಧಾಂತದ ಬಗ್ಗೆ ಯಾರಿಗೆ ನಂಬಿಕೆ ಇದೆಯೋ, ಅವರೆಲ್ಲ ಬೇಷರತ್ತಾಗಿ ಪಕ್ಷ ಸೇರಬಹುದು. ಆದರೆ, ಕಾಂಗ್ರೆಸ್ ಶಾಸಕರನ್ನು ಸೆಳೆಯುವುದಾಗಿ ಬಿಜೆಪಿಯವರೇ ಹೇಳಿದ್ದಾರೆ. ನನ್ನನ್ನು ಹಾಗೂ ಸಿದ್ದರಾಮಯ್ಯ ಅವರನ್ನೂ ಸೇರಿಸಿಕೊಳ್ಳಲು ಅವರು ಪರಿಗಣಿಸಿರಬಹುದು’ ಎಂದು ಅವರು ವ್ಯಂಗ್ಯವಾಡಿದರು.

ಮುಂದಿನ ಚುನಾವಣೆಯಲ್ಲಿ 123 ಸ್ಥಾನ ಗೆಲ್ಲಲು ಶ್ರಮಿಸುವುದಾಗಿ ಜೆಡಿಎಸ್ ಮುಖಂಡರು ಹೇಳಿದ್ದಾರೆ. ಬಿಜೆಪಿ 150 ಸ್ಥಾನಗಳ ಗುರಿ ಇರಿಸಿಕೊಂಡಿದೆ. ಆದರೆ, ಕಾಂಗ್ರೆಸ್‌ನ ಗುರಿ 224 ಕ್ಷೇತ್ರಗಳು ಎಂದು ಅವರು ತಿಳಿಸಿದರು.

‘ಕಾಂಗ್ರೆಸ್ ಪಕ್ಷ ಒಂದು ಕುಟುಂಬ ಇದ್ದ ಹಾಗೆ. ನಮ್ಮ ಕುಟುಂಬದಲ್ಲಿ ಯಾವುದೇ ರೀತಿಯ ಕಲಹ ಇಲ್ಲ. ಮುಂದಿನ ಮುಖ್ಯಮಂತ್ರಿ ವಿಚಾರವಾಗಿ ಸಿದ್ದರಾಮಯ್ಯ ಯಾವ ಹೇಳಿಕೆ ನೀಡಿದ್ದಾರೆ ಎಂಬ ಕುರಿತು ಮಾಹಿತಿ ಇಲ್ಲ. ವರಿಷ್ಠರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ನಿರ್ಧಾರವೇ ಅಂತಿಮ’ ಎಂದು ಅವರು ಸ್ಪಷ್ಟಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TRILLIUM ISLAMIC SCHOOL & COLLEGE. R.T-Nagar, Bangalore-32 REQUIRE (1) COMPUTER LECTURER (2) ACADEMIC HEAD (3) VICE PRINCIPAL (4) MATHS TEACHER 9880194234 dzhussain@gmail.com

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
LECTURERS
for Degree Colleges at Bengaluru
• Commerce • Computer Science • English
Eligibility: Master's Degree in the relevant subject with at least 55% marks in the aggregate and at least two years teaching experience. **NET / KSET / Ph. D. desirable.**
• Physical Education Director
Eligibility: Graduate with M. P. Ed. at least 55% marks and two years experience
• Librarian
Eligibility: Master of Library & Information Science from a recognized University with 55% marks. Minimum 2 years experience preferred. Basic skills in using computer and software packages for library automation and networking essential
• Assistant Librarian
a) Degree in Library & Information Science from a recognized University. **b)** Minimum 1 year working experience in an academic Library. **c)** Knowledge of using computer and Library software for automation and networking essential.
Walk-in-Interview on Friday, 1st October 2021 at 9.30 a.m.
Venue: Seshadripuram Educational Trust Office, No. 27, Nagappa Street, Seshadripuram, Bengaluru-560 020
Eligible candidates should bring handwritten application along with resume, photos & copies of testimonials at the time of Interview
N. R. Pandith Aradhya, President — Dr. Wooday P. Krishna, Hon. General Secretary

"ENDEAVOUR'S INTERNATIONAL-SCHOOL," Mugalur,Sarjapura, Eligible Teachers Required. PHYSICS (Class 8-10), ENGLISH (Class 6-10) P.E, Affordable Salary and Accommodation can be provided. Mobile: 8722140020/ 9945058552

GURUKULA INTERNATIONAL School requires English, Maths, Hindi Teachers for Primary and Maths Teacher for High School, Near Magadi Road, Metro Station, Bangalore-23. 7829338292 7676676629

WANTED LADY Teacher's for Primary for all Subjects Coffee Board Layout, Hebbal. Contact: 9008981637/ 22330003

WANTED TEACHERS for the post of clerical work at Shubhamangala Education Society (Presidency Public School), Ittamadu, Bengaluru-85 Call: 8050056050, 6361690125

SHREE SHARADA EDUCATION CENTRE, Requires Science & Maths Teachers for Primary and High School, Contact :H.M, MC Layout,Vijayanagar, Bangalore. Phone -080-23113366 / 9980109803.

REQUIRED ECONOMICS Faculty (Part-time/Full-time)for A Reputed PU College Near Yelahanka. Contact: 9738719365 hrmvs1992@gmail.com

WANTED EXPERIENCED Teachers for High School Sanskrit, Kannada and Computers. Contact: Premier High School, Srirampuram, Ph: 080-23421020, 9060555588.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

***ELITE PUBLIC** SCHOOL* Kempegowda layout Laggere Bangalore* Requires teachers* English, D.Ed / B,Ed Science/ Mathematics, B.Ed 9980200444, 9972223344

ENGLISH AND-MATHS TEACHERS, FLORA ENGLISH SCHOOL Yellachenahalli. Candidates staying in nearby area preferred.7892630186

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belagum & Approved by AICTE, New Delhi)
Byranayakanahalli, Nelamangala Taluk, Bangalore Rural District - 562132
Website: www.drsmce.org
Email: recruitdrsmce2211@gmail.com
WALK-IN ON 7-10-2021 FOR FACULTY POSITIONS
Applications are invited for the posts of Professors, Associate Professors & Asst. Professors in the following Disciplines.
- Civil Engineering.
- Mechanical Engineering.
- Electrical & Electronics Engineering.
- Electronics & Communication Engineering.
- Computer Science & Engineering.
- Information Scicnce & Engineering
- Basic Science department: Physics, Chemistry and Mathematics.
- MBA (Marketing Finance, HR)
- Physical Education Director
- Librarian and Asst. Librarian

Non Teaching Posts
- Placement officer.
- Office Superintendent FDA , SDA, Accountants
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and Attenders in the above departments

Qualification and Pay Scale As per AICTE norms
Note : For the posts of Professor & Associate Professor, candidates having Ph.D are only eligible. Apply Via e-mail and hard copy so as to reach before 7 days from the date of advertisement along with your detailed CV & supporting documents.
Dr. H. D. Ramesh, Principal, Mob: 9880658861 — Sri D. C. Venugopal, Chairman

Om Sai Ram
NEW BALDWIN GROUP OF INSTITUTIONS
BANASWADI*MANDUR*TC PALYA*ANEKAL TOWN*CHANDAPURA*ANEKAL
SCHOOL
SOCIAL STUDIES, ENGLISH, TEACHERS
Candidates with qualification of Graduation /post Graduation having relevant experience of teaching in reputed schools for the same subjects ,can apply immediately. (Junior school / High school).
COLLEGE
BIO,PHY,CHEM,COMP LECTURERS
Candidates Possessing excellent academic record worked as subject lecturer in CBSE 11+ / PUC at Reputed institution.
LECTURERS - JEE/CET/NEET
Having experience in training Physics, Chemistry, Biology, Maths for Grade 11 & 12 PUC /CBSE in a reputed college, should be able to train students for JEE/CET/NEET examinations.
Remuneration: at par with experience and additional facilities like food,transport,etc.
APPLY IMMEDIATELY
Applying Candidates should clearly specify the position applied for, branch opted with updated resume.
Contact:9108062731 / 9008683601 / 080 25429441
mail us -hr.nbgi@gmail.com

SAMBHRAM INSTITUTIONS
Faculty required for Depts of
- Computer Science & Engineering
- BBA & MBA

Qualifications & Experience as per AICTE Norms
- Admission Counselors
- Accountants

Walk in interview on 30.09.2021 and 01.10.2021 between 10:00 am to 5:00 pm at
Sambhram Institute of Technology
Near M S Palya, Jalahalli East, Bangalore (2nd Floor IT Building)
email: bmraosambhram@yahoo.com / Mobile: 8884440056

Receptionist/ Secretary

NEED CANDIDATES with English fluency and Microsoft Office skills for IMPEX Company. (Female) Call: 8867663800

WANTED IMMEDIATELY Lady RECEPTIONIST, TELECALLERS, CUSTOMER ADVISORS. Good Salary, Ladies pick/drop. 'V&V', Bannerghatta Road: 9845015353

Multiple Vacancy

Construction Company Require Architects, Structural Engineers, Marketing Executives Whatsapp: 9008171111 Email: altisconstructions@gmail.com

Wanted

URGENTLY REQUIRED FACTORY SUPERVISOR at our Bangalore Factory Manufacturing Agrochemicals. Qualification: B.Sc. (Agri) Horticulture. Experience: 2-3 years. Please send your CV on email: westcoastfactbang@gmail.com or CONTACT & WHAT'SAPP: 9820025162.

OPPORTUNITY FOR Retd Officials,Bankers, VRS,NRI,Teachers, Professionals, CAs. Earn Salary+Incentives. Call: 8095301555

General

REQUIRED SUPERVISOR for reputed corporate travels to Manage Employee Transportation. Min Exp 2yrs. 8277585858, 7338585858

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
ನಂ.113, ಆರ್.ವಿ. ರಸ್ತೆ, ವಿ.ವಿ. ಪುರಂ, ಬೆಂಗಳೂರು – 560 004
Ph: 080-26601152 / 53
Website: www.sreenidhibank.com
SSSBN/HO/APT/592/2021-22 — ದಿನಾಂಕ : 28/09/2021
ನೇಮಕಾತಿ ಪ್ರಕಟಣೆ
ಬ್ಯಾಂಕಿನಲ್ಲಿ ನೇರ ಸಂದರ್ಶನದ ಮೂಲಕ ಆಂತರಿಕ ಲೆಕ್ಕ ಪರಿಶೋಧಕರು (Internal Auditor) ಮತ್ತು ವ್ಯವಸ್ಥಾಪಕರು–ಮಾಹಿತಿ ತಂತ್ರಜ್ಞಾನ (Manager-I.T) ಹುದ್ದೆಗಳಿಗೆ ಅನುಭವವಿರುವ ಅಭ್ಯರ್ಥಿಗಳಿಂದ ಮತ್ತು ಕಂಪ್ಯೂಟರ್ ಪ್ರೋಗ್ರಾಮರ್/ಡಿ.ಬಿ.ಎ, ಹಿರಿಯ ಸಹಾಯಕರು ಮತ್ತು ಕಿರಿಯ ಸಹಾಯಕರ ಹುದ್ದೆಗಳಿಗೆ ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆ, ವಿದ್ಯಾರ್ಹತೆ ಮತ್ತು ಇತರ ವಿವರಗಳು ಬ್ಯಾಂಕಿನ ವೆಬ್‌ಸೈಟ್ www.sreenidhibank.com ರಲ್ಲಿ ಲಭ್ಯವಿರುತ್ತವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 13/10/2021.
ಸಹಿ/– ಪ್ರಧಾನ ವ್ಯವಸ್ಥಾಪಕರು

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

Placement Bureaus/Consultants

PLACEMENT ASSISTANCE Provided For All Categories, Contact 23443555, 8183046799, anzconsultants@yahoo.co.in

Situation Required

REQUIRED
A reputed Construction firm operating PAN India required staff for following positions.
CIVIL ENGINEERS B.E. - 3 to 5 years exp.
ACCOUNTANTS B. Com - 3 to 5 years exp. with knowledge of Tally.
STOREKEEPERS B.A. - 3 to 5 years exp.
Interested candidates may please apply to:
beena@rayindia.co or rcl.ho@rayindia.co

Accounts & Finance

WANTED ACCOUNTANT with two years experience for reputed Advertising Agency based at K.R. Road, Shastrinagar, Bangalore. Phone: 7353354235/ 080-26768251/ 52, mail your Resume: streamlinead72@gmail.com

Marketing & Sales

Marketing Manager
- Require Marketing Manager with 6 to 7 years of Experience in Security Services Industry.
- Knowing English ,Hindi and Kannada languages.
- Candidates can come for a Walk in interview after fixing an appointment.
- Salary as per service Industry.

Candidate can send their resume our email id- ciss_blr@yahoo.com
Central Investigation & Security Services Ltd. Ph:080 25633116/ 41126352 /9945672555

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

WANTED EXPERIENCED Marketing Executives for Securities and Housekeeping Agency. Location Bangalore. Contact: 9901676595, 7026078650

AGSAR PAINTS PVT LTD., WANTED 'Sales Executives' Posting For Bangalore, Mangalore, Goa. EMail: bangalore@agsar.net Contact: 9535910010

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Security & Detectives

BRANCH HEAD Wanted for security company, Indiranagar Branch, Bangalore. Minimum 10 years experience in Private Security Industry. Age: below 50 yrs, Preferred Ex-servicemen. M: 9742240017, Email: admin@pvteye.in

Engg/ Production Technical

WANTED
Reputed company based in Bangalore needs Project/ Site Engineers with BE qualification preferably with Electrical/ Mechanical. With good Communication Skills Minimum 3-4 years project experience is preferred. Salary will be based upon experience. Respond to Email id: praveenkumarkalaaya@gmail.com Contact: 9845026794 9845029246.

CALIBRATION LABORATORY requires Technical Engineer / Manager, undergone Internal audit training, minimum experience 5 years ISO 17025. WhatsApp 9164036111

OFFERING- CIVIL DRAFTSMAN Minimum 3 yrs Experience at Vijayanagar salary 30,000 P/m, Contact: 9844027446

RENTAL PROPERTIES

Accommodation Available

Commercial

1550 SQFT OFFICE space, 1st floor with workstations, cabins, 2 toilets, Lift, parking space- most prime area, NehruNagar, KumaraPark, near Reddy Petrol Bunk, Contact 9972856142

REAL ESTATE BUYING

Sites

Hebbal

WANTED PLOTS/ houses/ Flats Arkavathy Layout, R.T.Nagar, Thanisandra, Hebbal Jakkur, HBR, Hennur, Yelahanka. “Spacelinks” 9845129934.

REAL ESTATE SELLING

Flat

Kanakapura Road

2-3-BHK FLAT Sale,Vastu Compliant, 41,00,000/- Onwards. Konankunte Near Junior Delhi Public School, Kanakapura Main Road. Contact:-9611144096/ 9343722162.

House

Nagarabhavi

40X43 EAST South Corner, Four Floor Building with all amenities, Nagarabhavi Near BDA Complex- 9448081380

Sarjapur Road

RENTAL INCOME 70,000/- per month, House for Sale, near Koramangala, Sarjapur Road, details, 8660514834, 9342410224.

BUSINESS

Business to Business

Finance

WE ARRANGE Housing, Purchase, Mortgage Loan for Commercial, Residential, Industrial Building & Sites for A Khata, B Khata, Gram Panchayat & 9/11 Khatas from Schedule Banks. Contact Jyothi 7019117364.

“URGENT BIG Loan Avail @ 3.5% p.a Personal, Business, Projects all types loan in 5 days. MARIGOLD FINANCE LTD. Call & whatsApp ::8826494700.”

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Dealers And Stockists

DEALERS WANTED every city in Karnataka for Electric Cycle and E-three wheeler cart with a showroom space of 500- 1500 sq.ft. Investment 3- 6 lakhs based on market size. Complete support provided to establish the business. Call |WhatsApp 9379794873 /9740449955/ E-mail: sales@urbanelectrek.com

Finance

NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

OTHERS

Furniture & Furnishings

NEEDED Second Hand Montessori Equipment and Furniture for Montessori School. Interested Parties Please Contact: 9845860751

EDUCATION CORNER

VIDYA NIKETAN SCHOOL
30, KEMPAPURA, HEBBAL, BANGALORE – 24
Vidya Niketan School, Hebbal is happy to announce the commencement of the **Pre-Primary** section [Prep I & II] from June 01, 2022.
Details regarding date of application will be available on the Vidya Niketan School website: www.vidyaniketanhebbal.org on 10th October 2021.

PERSONAL

Change of Name

I,RAJAKUMARI .K W/o Kamal residing at No.11, 8th Cross, 1st Main, Kenchenahalli, Rajarajeshwari Nagar, Bangalore-560098 here by declare that INDRA .K and RAJAKUMARI .K both names belongs to me only vide affidavit dated 28.09.2021 sworn before notary B.Rajashekhara, Bangalore-98. Henceforth I shall be called in future RAJAKUMARI .K only.

I, JOHN Poothingal Itteera, residing at J107, Brigade Gateway, 26/1, Dr. Rajkumar Road, Malleswaram West, Bangalore 560055, have changed my minor son's name from JOEL JOHN to JOEL P. JOHN, vide affidavit dated 28.09.2021 before Notary S. Samuel Solomon, Bangalore.

RAMITA DEVI W/o. 14826337X, HAV/MT, Mithilesh Kumar Pal Vill/Post/Teh: Bairia, Dist: Ballia, UP my name RAMITA DEVI to RAITA PAL notary Meer Hassan, Bangalore.

I FATHIMA ZOHARABE aged 46 years, wife of Ex-Army No. 14598775X, Havldhar, Nazar. M, Residing at #1137, Fish Line, Oorgaumpet, K.G.F.- 563121, have changed my name from FATHIMA ZOHARABE to FATHIMA ZOHRA vide affidavit dated 27/09/2021, before notary N. Srinivasa, K.G.F.

I, V.B. DHANYA residing at No.34/A, Viswam, Maruthi Layout, Kodagithirumalapura, Bangalore-560089 have changed my name to DHANYA .V vide affidavit dated 28/09/2021 sworn before notary Ambika.S, Bangalore.

I, SHRIHARI K. UDAY SHANKAR, residing at No. 874, 5th main, BHEL 2nd stage, Rajarajeshwarinagar, Pattanagere Post, Bangalore-560098, have changed my name to SHRIHARI JOIS, vide affidavit dated 28.09.2021, before Notary V. Rajashekhara, Bangalore.

I, R. SHIVA CHANDRAN, residing at No. 9, 6th cross, Salam Sab Compound, S.R. Nagar, Bangalore- 560027, have changed my name to MOHAMMED ALI R., vide affidavit dated 27.09.2021, before Notary L. Gopalakrishna, Bangalore.

JC681907H SUB Diwan Singh ASC Centre & College, daughter's name Service Record NAVITA KUMARI, instead of NAVITA, Notary KV Mani, Bangalore.

PUBLIC NOTICE

PUBLIC NOTICE
Whereas my client namely Sri Malkar Prathapa Rao, S/o Malkar Raja Rao, aged about 79 years, residing at No.24-94/1, 3rd Floor, Balaji Enclave, Street No.11, Near ADR Hospital, AnandBagh, Malkajgiri, KV Rangareddy, Hyderabad, Andhara Pradesh, is intending to purchase the schedule property from T. Ravi S/o Thayappa, aged about 52 years, residing at Anufelicity Layout, Surya Nagar, II Sector, C. Naganayakanahalli, Marsur post, Kasaba Hobli, Anekal Taluk, Bangalore Urban District. If any person or public have got any right, title, interest or possession over the schedule property may be pleased to send their detailed objections and documents to the under signed counsel within 10 days from the date of this public notice. If there are no objections from any person in respect of the schedule property, my client will purchase the schedule property from T.Ravi, as he is the absolute owner of the Schedule property.
SCHEDULE
All the piece and parcel of the land bearing Sy.No. 455, measuring 8 guntas situated at Marsur Village, Kasaba Hobli, Anekal Taluk, Bangalore Urban District and bounded as follows:
East by: Artha Developers Property, **West by:** Land of Doddachari, **North by:** Land of Thimmarayappa, **South by:** Artha Developers Property.
Sri Chandrashekar Reddy N.R., Advocate, No. 1, C Block, STB Complex, next to Court Premises, Attibele Road, Anekal Town, Bangalore Urban District.

Classifieds
Book Your Classifieds Ads
Online Log in to dhclassifieds.com
For More Details Call
9880856233 ■ 9886213331
Email: Santhoshkumar@deccanherald.co.in

ಟ್ವಿಟರ್‌ನಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ

‘ಮಂಗಳೂರಿನಲ್ಲಿ ತಾಲಿಬಾನ್ ಸರ್ಕಾರವಿದೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನಲ್ಲಿ ಇರುವುದು ಬಿಜೆಪಿ ಸರ್ಕಾರವೊ? ಅಥವಾ ತಾಲಿಬಾನ್ ಸರ್ಕಾರವೊ? ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ವಿಭಿನ್ನ ಧರ್ಮಗಳ ವಿದ್ಯಾರ್ಥಿಗಳು ಒಟ್ಟಿಗೆ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ನಡೆದ ದಾಳಿಯ ಕುರಿತ ಸುದ್ದಿಯ ತುಣುಕಿನೊಂದಿಗೆ ಟ್ವೀಟ್ ಮಾಡಿರುವ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಈ ಪ್ರಶ್ನೆ ಕೇಳಿದ್ದಾರೆ.

ಆರ್‌ಎಸ್‌ಎಸ್ ಕುರಿತೂ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿರುವ ಅವರು, ‘ಸಿ.ಟಿ. ರವಿ ಅವರೇ ಆರ್‌ಎಸ್‌ಎಸ್ ಹೆಸರು ಹೇಳಿದರೆ ಉರಿದು ಬೀಳುತ್ತೀರಿ. ಆರ್‌ಎಸ್‌ಎಸ್ ಎಂದರೆ ಏನು? ಅದರ ಜತೆ ಬಿಜೆಪಿಯ ಸಂಬಂಧವೇನು? ಆರ್‌ಎಸ್‌ಎಸ್ ಎಂದರೆ ಸಾಮಾಜಿಕ ಸೇವಾ ಸಂಘಟನೆಯೆ? ಸಾರ್ವಜನಿಕ ದತ್ತಿಯೇ? ಅಥವಾ ಬಿಜೆಪಿ ಎಂಬ ರಾಜಕೀಯ ಪಕ್ಷಕ್ಕೆ ನಾಯಕರನ್ನು ಉತ್ಪಾದಿಸಿ ಕೊಡುವ ಕಾರ್ಖಾನೆಯೆ’ ಎಂದು ಪ್ರಶ್ನೆ ಮಾಡಿದ್ದಾರೆ.

ಆರ್‌ಎಸ್‌ಎಸ್ ಹಿಂದೂಗಳ ಸಂಘಟನೆ ಎನ್ನುವುದಾದರೆ ಬಿಜೆಪಿ-ಯಲ್ಲಿರುವವರು ಮಾತ್ರ ಹಿಂದೂಗಳೆ? ಉಳಿದ ಪಕ್ಷಗಳಲ್ಲಿರುವವರು ಅಲ್ಲವೆ? ದೆಹಲಿಯಲ್ಲಿ ಹತ್ತು ತಿಂಗಳಿಂದ ಬೀದಿ-ಯಲ್ಲಿರುವವರು ಹಿಂದೂಗಳಲ್ಲವೆ? ಉತ್ತರ ಪ್ರದೇಶದಲ್ಲಿ ಅತ್ಯಾಚಾರಕ್ಕೀಡಾದ ಯುವತಿಯೂ ಹಿಂದೂ ಅಲ್ಲವೆ ಎಂದು ಸರಣಿ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ.

‘ಆರ್‌ಎಸ್‌ಎಸ್ ಸಾಂಸ್ಕೃತಿಕ ಸಂಘಟನೆ ಎಂದಾದರೆ ಅದರ ವ್ಯಾಖ್ಯಾನವೇನು? ಮಂಗಳೂರಿನಲ್ಲಿ ನಿಮ್ಮ ಪರಿವಾರದವರು ಅಮಾಯಕ ವಿದ್ಯಾರ್ಥಿಗಳ ಮೇಲೆ ನಡೆಸಿದ ದೌರ್ಜನ್ಯವೂ ಈ ಸಂಸ್ಕೃತಿಗೆ ಸೇರಿದೆಯೇ? ದೇಶ ಮತ್ತು ಹಿಂದೂಗಳ ರಕ್ಷಣೆಗೆ ಆರ್‌ಎಸ್‌ಎಸ್ ನಾಯಕರಿಗೆ ಗುತ್ತಿಗೆ ಕೊಟ್ಟವರು ಯಾರು? ಅವರೇನು ಚುನಾಯಿತ ಪ್ರತಿನಿಧಿಗಳೆ? ಅವರೇಕೆ ಚುನಾವಣೆಯಲ್ಲಿ ಸ್ಪರ್ಧಿಸಬಾರದು’ ಎಂದು ಸಿದ್ದರಾಮಯ್ಯ ಕೇಳಿದ್ದಾರೆ.

‘ನಾನು ಮತ್ತು ನನ್ನಂತಹ ಕೋಟ್ಯಂತರ ಜನರು ಡಾ.ಬಿ.ಆರ್. ಅಂಬೇಡ್ಕರ್ ಕೊಟ್ಟ ಸಂವಿಧಾನದಿಂದ ನಿರ್ಭೀತಿ ಮತ್ತು ಆತ್ಮ ಗೌರವದಿಂದ ಬದುಕುತ್ತಿದ್ದೇವೆ. ನಿಮ್ಮ ಪರಿವಾರದ ತಾಲಿಬಾನ್ ಗಿರಿಯನ್ನೂ ಇದೇ ಸಂವಿಧಾನದ ಬಲದಿಂದ ಹಿಮ್ಮೆಟ್ಟಿಸುತ್ತಿದ್ದೇವೆ’ ಎಂದು ಹೇಳಿದ್ದಾರೆ.

ಅನೈತಿಕ ಪೊಲೀಸ್ ಗಿರಿ: ಐವರ ಬಂಧನ

ಸುರತ್ಕಲ್: ಮಂಗಳೂರಿನ ವೈದ್ಯಕೀಯ ಕಾಲೇಜ್ ಒಂದರ ವಿದ್ಯಾರ್ಥಿಗಳು ಮಲ್ಪೆ ಬೀಚ್‌ಗೆ ಪ್ರವಾಸ ಹೋಗಿ ವಾಪಸ್ ಬರುತ್ತಿದ್ದ ವೇಳೆ ಬಜರಂಗ ದಳದ ಕಾರ್ಯಕರ್ತರು ಅವರ ವಾಹನ ತಡೆದು, ಒಳಗೆ ಕುಳಿತಿದ್ದವರ ಮೇಲೆ ಹಲ್ಲೆಗೆ ಯತ್ನಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಬೇರೆಬೇರೆ ಸಮುದಾಯಗಳ ವಿದ್ಯಾರ್ಥಿ– ವಿದ್ಯಾರ್ಥಿನಿಯರು ಈ ವಾಹನದಲ್ಲಿ ಇದ್ದರೆನ್ನಲಾಗಿದ್ದು, ಸುರತ್ಕಲ್ ಟೋಲ್‌ಗೇಟ್ ಬಳಿ ಭಾನುವಾರ ಸಂಜೆ ವೇಳೆಗೆ, ಬಜರಂಗ ದಳದ ಸ್ಥಳೀಯ ಕಾರ್ಯಕರ್ತರು ವಾಹನ ಅಡ್ಡಗಟ್ಟಿದ್ದಾರೆ. ಹಲ್ಲೆ ನಡೆಸಲು ಮುಂದಾದಾಗ ಸ್ಥಳದಲ್ಲಿ ಇದ್ದ ಮಂಗಳೂರು ಉತ್ತರ ಸಂಚಾರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಶರೀಫ್ ಅವರು ತಡೆದಿದ್ದರಿಂದ ವಿದ್ಯಾರ್ಥಿಗಳು ಪಾರಾಗಿದ್ದಾರೆ. ವಾಹನಕ್ಕೆ ಮುತ್ತಿಗೆ ಹಾಕಿದ ಕಾರ್ಯಕರ್ತರು ವಿದ್ಯಾರ್ಥಿಗಳನ್ನು ನಿಂದಿಸುತ್ತಿರುವ ದೃಶ್ಯದ ತುಣುಕು ವೈರಲ್ ಆಗಿರುವ ವಿಡಿಯೊದಲ್ಲಿದೆ.

ಘಟನೆ ಸಂಬಂಧ ಬಜರಂಗದ ದಳದ ಪ್ರಮುಖರಾದ ಪ್ರೀತಂ ಶೆಟ್ಟಿ, ಅರ್ಶಿತ್, ಶ್ರೀನಿವಾಸ್, ರಾಕೇಶ್, ಅಭಿಷೇಕ್ ಎಂಬುವವರನ್ನು ಮಂಗಳವಾರ ಬಂಧಿಸಿ, ಬಿಡುಗಡೆಗೊಳಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತೀಯ ಶಕ್ತಿಗಳ ಇಂತಹ ಗೂಂಡಾಗಿರಿ ಇದೇನು ಹೊಸತಲ್ಲ. ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಆರೋಪಿಗಳನ್ನು ವಶಕ್ಕೆ ಪಡೆದು ಪೊಲೀಸರು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಜಾಮೀನು ಸಿಗದ ಕಠಿಣ ಸೆಕ್ಷನ್ ದಾಖಲಿಸಿ, ಆರೋಪಿಗಳನ್ನು ಮತ್ತೆ ಬಂಧಿಸಬೇಕು ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಆಗ್ರಹಿಸಿದ್ದಾರೆ

‘ಕಣ್ಣಿನ ಪೊರೆಗೆ ಚಿಕಿತ್ಸೆ ಮಾಡಿಸಿಕೊಳ್ಳಿ’

ಸಿದ್ದರಾಮಯ್ಯ

‘ಕಣ್ಣಿಗೆ ಪೊರೆ ಬಂದವರು ಕತ್ತಲಲ್ಲಿ ಕಾರು ಓಡಿಸಬಾರದು. ಅಪಘಾತವಾಗಿ ಅಮಾಯಕರು ಜೀವ ಕಳೆದುಕೊಳ್ಳುತ್ತಾರೆ. ಪೊರೆ ಬಂದಿದ್ದರೆ ‘ಕ್ಯಾಟರಾಕ್ಟ್’ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಿ. ಸಾರ್ವಜನಿಕರ ಜೀವ ಮುಖ್ಯ’ ಎಂದು ಸಿದ್ದರಾಮಯ್ಯ ಅವರು ಸಿ.ಟಿ. ರವಿ ಅವರಿಗೆ ಟ್ವಿಟರ್‌ನಲ್ಲಿ ಸಲಹೆ ನೀಡಿದ್ದಾರೆ.

‘ನೀವು ರೈತನ ಮಗ ಎನ್ನುತ್ತೀರಿ. ನಾನು ಉಡುವ ರೈತ ಮಕ್ಕಳ ಪಂಚೆಯನ್ನು ಗೇಲಿ ಮಾಡುತ್ತೀರಿ. ನಿಮ್ಮ ತಂದೆ ಕೂಡ ಪಂಚೆ ಉಡುವವರು ಎಂದುಕೊಳ್ಳುತ್ತೇನೆ. ನಿಮ್ಮಂತಹ ಮಗನ ಬಗ್ಗೆ ಅವರೇನು ಎಂದುಕೊಳ್ಳುತ್ತಾರೆ ಯೋಚಿಸಿದ್ದೀರಾ? ಈ ರೀತಿ ನಾಲಗೆ ಸಡಿಲ ಬಿಟ್ಟು ಮನೆಗೆ ಹೋಗುವಾಗ ಹುಷಾರಾಗಿರಿ’ ಎಂದು ಹೇಳಿದ್ದಾರೆ.

ಡೆತ್‌ನೋಟ್ ಬರೆದಿಟ್ಟು ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ನಾಪತ್ತೆ

ಶಿವಮೊಗ್ಗ: ಕೆಲಸದ ಒತ್ತಡ, ಹಿರಿಯ ಅಧಿಕಾರಿಗಳ ಅಸಹಕಾರದಿಂದ ಬೇಸತ್ತ ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ಮಂಗಳವಾರ ನಾಪತ್ತೆಯಾಗಿದ್ದಾರೆ.

ಪ್ರಥಮ ದರ್ಜೆ ಸಹಾಯಕ ಗಿರಿರಾಜ್ (39) ಬೆಳಿಗ್ಗೆ ಮನೆಯಿಂದ ಹೊರಟವರು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಕಚೇರಿ ಸಹೋದ್ಯೋಗಿಗಳಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದಾರೆ. ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರ ನಿಧಿಯ ನಿರ್ವಹಣಾ ವಿಭಾಗ ನೋಡಿಕೊಳ್ಳುತ್ತಿದ್ದರು.

‘ನನ್ನನ್ನು ಯಾರೂ ಹುಡುಕುವ ಪ್ರಯತ್ನ ಮಾಡಬೇಡಿ. ನಾನು ಆತ್ಮಹತ್ಯೆ ಮಾಡಿಕೊಳ್ಳಲು ಹೋಗುತ್ತಿದ್ದೇನೆ. ನನ್ನ ಸಾವಿಗೆ ಐಎಎಸ್ ಅಧಿಕಾರಿ ಡಾ.ಶಾಲಿನಿ ರಜನೀಶ್ ನೇರ ಕಾರಣ’ ಎಂದು ವಾಟ್ಸ್‌ಆ್ಯಪ್ ಸಂದೇಶದಲ್ಲಿ ನಮೂದಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿನ ಕೆಲಸದ ಒತ್ತಡ, ಸರ್ಕಾರಿ ವ್ಯವಸ್ಥೆಯಲ್ಲಿನ ಲೋಪ, ಹಿರಿಯ ಅಧಿಕಾರಿಗಳ ಮಾರ್ಗದರ್ಶನದ ಕೊರತೆ, ಕೆಲಸದ ಒತ್ತಡಗಳ ಮಧ್ಯೆ ಕುಟುಂಬದ ಸದಸ್ಯರಿಗೆ ಸಮಯ ನೀಡಲು ಸಾಧ್ಯವಾಗದಿರುವುದು, ಕೆಳ ಹಂತದ ಅಧಿಕಾರಿಗಳನ್ನು ಹೇಗೆ ಬಲಿಪಶು ಮಾಡಲಾಗುತ್ತದೆ ಎಂಬ ಅಂಶಗಳನ್ನು ಸವಿಸ್ತಾರವಾಗಿ ಬರೆದಿದ್ದಾರೆ.

ಸಂದೇಶ ನೋಡಿದ ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ತಕ್ಷಣ ಜಯನಗರ ಠಾಣೆಗೆ ದೂರು ನೀಡಿದ್ದಾರೆ.

‘ಗಿರಿರಾಜ್ ಅವರ ಮೊಬೈಲ್ ಭದ್ರಾವತಿ ತಾಲ್ಲೂಕು ಯಡೇಹಳ್ಳಿ ಸಮೀಪ ಸ್ವಿಚ್ಡ್ ಆಫ್ ಆಗಿದೆ. ಪತ್ತೆಗೆ ಪೊಲೀಸರು, ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಮಾಹಿತಿ ನೀಡಿದರು.

‘8 ತಿಂಗಳಲ್ಲಿ 46,499 ಮನೆಗಳ ಹಂಚಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ’ ಅಡಿ ನಗರದ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿನ ಏಳು ಅಥವಾ ಎಂಟು ತಿಂಗಳಲ್ಲಿ 46,499 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುವುದಾಗಿ ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಇದಕ್ಕಾಗಿ ಈಗಾಗಲೇ 316 ಎಕರೆ ಪ್ರದೇಶದಲ್ಲಿ 46,499 ಮನೆಗಳ ನಿರ್ಮಾಣ ಕಾರ್ಯ ಆರಂಭಿಸಲಾಗಿದೆ ಎಂದು ಅವರು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹರಾಜಿಗೆ ಗುರುತಿಸಲಾಗಿದ್ದ ಜಮೀನುಗಳಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಮೂಲಸೌಕರ್ಯ ಒದಗಿಸಲು ಮುಖ್ಯಮಂತ್ರಿಯವರು ₹500 ಕೋಟಿ ಒದಗಿಸಿದ್ದಾರೆ. ಈ ಹಿಂದೆ ಫ್ಲ್ಯಾಟ್‌ಗೆ ₹6.50 ಲಕ್ಷದಿಂದ ₹7 ಲಕ್ಷ ಎಂದು ನಿಗದಿ ಮಾಡಲಾಗಿತ್ತು. ಆದರೆ, ಹೆಚ್ಚುವರಿ ಮಹಡಿಗಳ ವೆಚ್ಚ ಏರಿಕೆ ಆಗಿರುವುದರಿಂದ ₹9 ಲಕ್ಷ ನಿಗದಿ ಮಾಡಲು ಉದ್ದೇಶಿಸಿದ್ದು, ಮುಖ್ಯಮಂತ್ರಿಯವರ ಜತೆ ಚರ್ಚಿಸಿ ಬೆಲೆ ಅಂತಿಮಗೊಳಿಸಲಾಗುವುದು ಎಂದರು.

ಮನೆಗಳ ಹಂಚಿಕೆಯಲ್ಲಿ ಸ್ಥಳೀಯರಿಗೆ ಶೇ 50 ರಷ್ಟು ಕಾಯ್ದಿರಿಸಿ ಉಳಿದ ಮನೆಗಳನ್ನು ಕೋರಿಕೆ ಮೇರೆಗೆ ಹಂಚಿಕೆ ಮಾಡಲಾಗುವುದು. ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಪ್ರತಿ ತಿಂಗಳು ನಗರದ ಸಚಿವರು ಮತ್ತು ಶಾಸಕರ ಜತೆ ಸಭೆ ನಡೆಸಲಾಗುವುದು ಎಂದು ಸೋಮಣ್ಣ ಹೇಳಿದರು.

ವಿ.ಸೋಮಣ್ಣ

‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಗರದಲ್ಲಿ ₹3,800 ಕೋಟಿ ವೆಚ್ಚದಲ್ಲಿ 2.53 ಲಕ್ಷ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ್ದೇವೆ. ಅಲ್ಲದೆ, ಹುಬ್ಬಳ್ಳಿಯಲ್ಲಿ ಕೊಳೆಗೇರಿ ನಿವಾಸಿಗಳಿಗೆ 35,999 ಫಲಾನುಭವಿಗಳಿಗೆ ಸದ್ಯದಲ್ಲೇ ಹಕ್ಕು ಪತ್ರಗಳನ್ನು ವಿತರಿಸುತ್ತೇವೆ’ ಎಂದು ತಿಳಿಸಿದರು.

‘ವಸತಿ ನಿರ್ಮಾಣದ ವಿಚಾರಗಳಲ್ಲಿ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರಗಳು ಮಾಡಿಟ್ಟಿದ್ದ ಗೊಂದಲಗಳನ್ನು ನಮ್ಮ ಸರ್ಕಾರ ಪರಿಹರಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು 5 ಲಕ್ಷ ಮನೆಗಳನ್ನು ಮಂಜೂರು ಮಾಡಿದ್ದು, 4 ಲಕ್ಷ ಮನೆಗಳನ್ನು ಗ್ರಾಮಾಂತರ ಪ್ರದೇಶದಲ್ಲೂ, 1 ಲಕ್ಷ ನಗರ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗುವುದು. 3.50 ಲಕ್ಷ ಮನೆಗಳನ್ನು ಬಸವ ವಸತಿ ಯೋಜನೆಯಲ್ಲಿ ನಿರ್ಮಿಸಲಾಗುವುದು’ ಎಂದು ಹೇಳಿದರು.

‘ವಸತಿ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರದಿಂದ ಯಾವುದೇ ನೋಟಿಸ್ ಬಂದಿಲ್ಲ. ₹200 ಕೋಟಿ ಮೊತ್ತದ ಟೆಂಡರ್ ಏನಾಗಿದೆ ಎಂಬ ಮಾಹಿತಿಗಳನ್ನು ಕೇಳಿ ಪತ್ರ ಬಂದಿದೆ. ಟೆಂಡರ್ ಪ್ರಕ್ರಿಯೆ ನಡೆಸುತ್ತಿರುವುದು ಸರ್ಕಾರದ ಮುಖ್ಯ ಕಾರ್ಯದರ್ಶಿ ಇನ್ನೂ ಟೆಂಡರ್ ಪ್ರಕ್ರಿಯೆ ಮುಗಿದಿಲ್ಲ.ಕೆಲವರು ನನ್ನನ್ನು ಗುರಿಯಾಗಿಸಿ ಷಡ್ಯಂತ್ರ ನಡೆಸಿದ್ದಾರೆ’ ಎಂದು ಹೇಳಿದರು.

ಫ್ಲ್ಯಾಟ್ ಬೆಲೆ

- ಪರಿಷ್ಕೃತ ಬೆಲೆ–₹9 ಲಕ್ಷ

ಎಸ್‌ಸಿ/ಎಸ್‌ಟಿ ವರ್ಗ: ಕೇಂದ್ರ ಸರ್ಕಾರದಿಂದ ₹ 1.50 ಲಕ್ಷ, ರಾಜ್ಯ ಸರ್ಕಾರ ₹2 ಲಕ್ಷ, ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಿಂದ ತಲಾ ₹50 ಸಾವಿರ, ಫಲಾನುಭವಿಗಳು ಪಾವತಿಸಬೇಕಾಗಿದ್ದು ₹5 ಲಕ್ಷ. ಇದರಲ್ಲಿ ₹1 ಲಕ್ಷ ಕಟ್ಟಿದರೆ, ಉಳಿಯುವ ₹4 ಲಕ್ಷವನ್ನು ಬ್ಯಾಂಕ್‌ನಿಂದ ಸಾಲ ಸೌಲಭ್ಯ.

ಸಾಮಾನ್ಯ ವರ್ಗ: ಕೇಂದ್ರ ಸರ್ಕಾರದಿಂದ ₹1.50 ಲಕ್ಷ, ರಾಜ್ಯ ಸರ್ಕಾರ ₹1.20 ಲಕ್ಷ. ಫಲಾನುಭವಿ ಪಾವತಿಸಬೇಕಾದ ಮೊತ್ತ ₹5.50 ಲಕ್ಷ. ₹1 ಲಕ್ಷ ಠೇವಣಿ ಮಾಡಿದರೆ ಉಳಿದ ಮೊತ್ತಕ್ಕೆ ಬ್ಯಾಂಕ್ ಸಾಲ ಸೌಲಭ್ಯ.

ದ್ವಿಚಕ್ರ ವಾಹನಕ್ಕಾಗಿ ಲಂಚ: ಟೋಯಿಂಗ್ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳದಲ್ಲಿ ನಿಲುಗಡೆ ಮಾಡಿದ್ದ ಆರೋಪದ ಮೇಲೆ ವಶಕ್ಕೆ ಪಡೆದಿದ್ದ ದ್ವಿಚಕ್ರ ವಾಹನವನ್ನು ಅಧಿಕೃತವಾಗಿ ದಂಡ ಕಟ್ಟಿಸಿಕೊಳ್ಳದೇ ಹಿಂದಿರುಗಿಸಲು ₹ 800 ಲಂಚ ಪಡೆದ ಜಯನಗರ ಸಂಚಾರ ಪೊಲೀಸ್ ಠಾಣೆಯ ಟೋಯಿಂಗ್ ವಿಭಾಗದ ಖಾಸಗಿ ಸಿಬ್ಬಂದಿಯೊಬ್ಬರನ್ನು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

ಮಲ್ಲೇಶ್ವರ ನಿವಾಸಿಯೊಬ್ಬರು ಜೆ.ಪಿ. ನಗರದ ಶಾಂತಿ ಸಾಗರ್ ಹೋಟೆಲ್ ಮುಂಭಾಗದಲ್ಲಿ ಶನಿವಾರ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನವನ್ನು ಜಯನಗರ ಸಂಚಾರ ಪೊಲೀಸ್ ಠಾಣೆಯ ಟೋಯಿಂಗ್ ಸಿಬ್ಬಂದಿ ಎಳೆದೊಯ್ದಿದ್ದರು. ಟೋಯಿಂಗ್ ಸಿಬ್ಬಂದಿಯನ್ನು ಸಂಪರ್ಕಿಸಿದ್ದ ವಾಹನ ಮಾಲೀಕರು, ದ್ವಿಚಕ್ರ ವಾಹನವನ್ನು ಬಿಡುವಂತೆ ಮನವಿ ಮಾಡಿದ್ದರು. ‘₹1,150 ದಂಡ ಶುಲ್ಕವಿದೆ. ದಂಡವಿಲ್ಲದೇ ವಾಹನ ಬಿಟ್ಟುಕೊಡಲು ₹ 800 ಲಂಚ ನೀಡಬೇಕು’ ಎಂದು ಟೋಯಿಂಗ್ ಸಿಬ್ಬಂದಿ ಬೇಡಿಕೆ ಇಟ್ಟಿದ್ದರು. ಈ ಕುರಿತು ವಾಹನ ಮಾಲೀಕರು ಎಸಿಬಿಯ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಚೈತನ್ಯ ರೆಸಿಡೆನ್ಸಿಯಲ್ ಕಾಲೇಜು ಅ.20ರವರೆಗೆ ಬಂದ್

ಒಂದೇ ಕಾಲೇಜಿನ 60 ವಿದ್ಯಾರ್ಥಿಗಳಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಹುಸ್ಕೂರು ಸಮೀಪದ ಚೈತನ್ಯ ರೆಸಿಡೆನ್ಸಿಯಲ್ ಕಾಲೇಜಿನ 60 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದು, ಇನ್ನೂ 105 ವಿದ್ಯಾರ್ಥಿಗಳ ಪರೀಕ್ಷೆ ವರದಿ ಬರಬೇಕಿದೆ.

ಕಾಲೇಜಿನ ಹಾಸ್ಟೆಲ್‌ನಲ್ಲಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಭಾನುವಾರ ಜ್ವರ ಕಾಣಿಸಿಕೊಂಡಿತ್ತು. ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದಾಗ ಬಳ್ಳಾರಿಯ ವಿದ್ಯಾರ್ಥಿನಿಯೊಬ್ಬಳಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಹೀಗಾಗಿ, ಕಾಲೇಜಿನ ಎಲ್ಲ 400 ವಿದ್ಯಾರ್ಥಿಗಳಿಗೆ ಕೋವಿಡ್ ಆರ್‌ಟಿ–ಪಿಸಿಆರ್ ಹಾಗೂ ರ‍್ಯಾಟ್ ಮಾದರಿಯಲ್ಲಿ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 59 ಮಂದಿಗೆ ಸೋಂಕು ತಗುಲಿರುವುದು ಮಂಗಳವಾರ ದೃಢಪಟ್ಟಿದೆ. 105 ವಿದ್ಯಾರ್ಥಿಗಳ ಪರೀಕ್ಷಾ ವರದಿ ಬುಧವಾರ ಬರಲಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ದೃಢಪಟ್ಟಿರುವುದರಿಂದ ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್, ತಾಲ್ಲೂಕು ವೈದ್ಯಾಧಿಕಾರಿ ಡಾ.ವಿನಯ್ ನೇತೃತ್ವದ ಸಿಬ್ಬಂದಿ ತಂಡ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿತು. ಈ ಕಾಲೇಜಿನ ವಸತಿ ನಿಲಯದಲ್ಲಿ ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ಹೊರ ರಾಜ್ಯಗಳ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಕಾಲೇಜ್ ಬಂದ್: ಅಕ್ಟೋಬರ್ 20 ರವರೆಗೆ ಕಾಲೇಜ್ ಅನ್ನು ಬಂದ್ ಮಾಡಲಾಗಿದೆ. ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗೂ ಪರೀಕ್ಷೆ ನಡೆಸಲಾಗಿದ್ದು, ಅವರು ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟಿದೆ. ಬಹುತೇಕ ಕೋವಿಡ್ ಪೀಡಿತರಿಗೆ ಲಕ್ಷಣಗಳು ಬಹಿರಂಗವಾಗಿ ಗೋಚರಿಸದಿರುವುದರಿಂದ ವಸತಿ ನಿಲಯದಲ್ಲಿಯೇ ಆರೈಕೆಗೆ ವ್ಯವಸ್ಥೆ ಮಾಡಲಾಗಿದೆ.

‘ಎಲ್ಲ ವಿದ್ಯಾರ್ಥಿಗಳಿಗೂ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಕೆಲವರ ವರದಿ ಬರಬೇಕಿದೆ. ಸೋಂಕು ನಿವಾರಕ ದ್ರಾವಣದಿಂದ ಕಾಲೇಜನ್ನು ಸ್ವಚ್ಛಪಡಿಸಲಾಗಿದೆ. ಸಂಬಂಧಪಟ್ಟ ಜಿಲ್ಲೆಗಳಿಗೂ ಮಾಹಿತಿ ನೀಡಲಾಗಿದೆ’ ಎಂದು ಡಾ.ಜಿ. ಶ್ರೀನಿವಾಸ್ ತಿಳಿಸಿದರು.

‘ಪ್ರಾಥಮಿಕ ಸಂಪರ್ಕದಲ್ಲಿರುವ 58 ಮಂದಿಯನ್ನೂ ಪ್ರತ್ಯೇಕಿಸಿ ಕ್ವಾರಂಟೈನ್ ಮಾಡಲಾಗಿದೆ. ಈ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿ, ಪ್ರವೇಶ ನಿಷೇಧಿಸಲಾಗಿದೆ’ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವಿನಯ್ ತಿಳಿಸಿದರು.

ಕೋವಿಡ್ ಪ್ರಕರಣಗಳು ವರದಿಯಾದ ಚೈತನ್ಯ ರೆಸಿಡೆನ್ಸಿಯಲ್ ಕಾಲೇಜನ್ನು ಅಧಿಕಾರಿಗಳು ಪರಿಶೀಲಿಸಿದರು.



ಕೋವಿಡ್: ಪರೀಕ್ಷೆ 93 ಸಾವಿರಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ ನಡೆಸುವ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಮಂಗಳವಾರ 93 ಸಾವಿರಕ್ಕೆ ಇಳಿಕೆ ಮಾಡಲಾಗಿದೆ. ಹೊಸದಾಗಿ 629 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ತಿಂಗಳ ಕೆಲ ದಿನಗಳು 1.50 ಲಕ್ಷಕ್ಕೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು. ಆದರೆ, ಕಳೆದೊಂದು ವಾರದಿಂದ ಪರೀಕ್ಷೆಗಳ ಸಂಖ್ಯೆ ಇಳಿಮುಖ ಮಾಡಿದೆ. ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ ಶೇ 0.67 ರಷ್ಟು ದೃಢಪಟ್ಟಿದೆ. ಹೊಸ ಪ್ರಕರಣಗಳು 12 ಜಿಲ್ಲೆಗಳಲ್ಲಿ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಸೋಂಕಿತರಾದವರ ಒಟ್ಟು ಸಂಖ್ಯೆ 29.74 ಲಕ್ಷ ದಾಟಿದೆ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 96, ಮೈಸೂರಿನಲ್ಲಿ 58 ಹಾಗೂ ಕೊಡಗಿನಲ್ಲಿ 30 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 229 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 8 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 6, ಬೆಳಗಾವಿಯಲ್ಲಿ 3, ದಕ್ಷಿಣ ಕನ್ನಡ ಹಾಗೂ ಹಾಸನದಲ್ಲಿ ತಲಾ ಇಬ್ಬರು, ಉತ್ತರ ಕನ್ನಡ, ಕೋಲಾರ, ಚಿಕ್ಕಮಗಳೂರು ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.70 ರಷ್ಟು ವರದಿಯಾಗಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,763ಕ್ಕೆ ಏರಿಕೆಯಾಗಿದೆ.



ಬೆಂಗಳೂರು ಒನ್ ನೂತನ ಕಟ್ಟಡ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ನಾಗರಿಕ ಸೌಲಭ್ಯ ಒದಗಿಸುವ ಕಚೇರಿಗಳನ್ನು ಉತ್ಕೃಷ್ಟ ದರ್ಜೆಗೇರಿಸುವ ಉದ್ದೇಶದೊಂದಿಗೆ ಬೆಂಗಳೂರು ಒನ್ ಕಟ್ಟಡ ಕಾಮಗಾರಿ ಕೈಗೆತ್ತಿ ಕೊಳ್ಳಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಕೆಂಗೇರಿ ಉಪನಗರ ವ್ಯಾಪ್ತಿಯ ಎಸ್.ಜೆ.ಆರ್. ಶಾಲೆ ಪಕ್ಕದ ಪಾರ್ಕ್ ರಸ್ತೆ ಬಳಿ ಸುಮಾರು ₹1.5 ಕೋಟಿ ವೆಚ್ಚದ ಬಹುಮಹಡಿ ಕಟ್ಟಡಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರು ಒನ್ ನಂತಹ ಅಗತ್ಯ ಸೇವಾ ಕಚೇರಿಗಳಿಗೆ ಪ್ರತಿ ದಿನ ನೂರಾರು ಮಂದಿ ಭೇಟಿ ನೀಡುತ್ತಾರೆ. ಇಂತಹ ಕಚೇರಿಗಳನ್ನು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಉತ್ಕೃಷ್ಟ ಗುಣಮಟ್ಟದ ಕಚೇರಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಯಶವಂತಪುರ ಕ್ಷೇತ್ರದ ನಗರ ಮಂಡಲ ಅಧ್ಯಕ್ಷ ಅನಿಲ್ ಚಳಗೇರಿ, ಪಾಲಿಕೆ ಮಾಜಿ ಸದಸ್ಯ ರ. ಅಂಜನಪ್ಪ, ಸ್ಥಳೀಯ ಮುಖಂಡರಾದ ಕೆ.ಆರ್. ಮೂರ್ತಿ, ಹರೀಶ್, ಟಿ.ಪ್ರಭಾಕರ್, ಮಹೇಂದ್ರ ಕಿರಣ್, ಲಾವಣ್ಯ, ಡಾ.ಅನುಪಮಾ ಪಂಚಾಕ್ಷರಿ ಇದ್ದರು.

ಕಾಮಗಾರಿಗೆ ಸಚಿವ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು. ಮುಖಂಡರಾದ ಹರೀಶ್, ರಮೇಶ್, ಮಹೇಂದ್ರ ಕಿರಣ್, ಟಿ.ಪ್ರಭಾಕರ್, ಕೆ.ಆರ್.ಮೂರ್ತಿ ಇದ್ದಾರೆ

‘ಯುವಕರು ಏಕೆ ಹೃದಯಾಘಾತಕ್ಕೆ ಒಳಗಾಗುತ್ತಾರೆ’: ವೆಬಿನಾರ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವ ಹೃದಯ ದಿನದ ಅಂಗವಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’, ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ‘ಯುವಕರು ಏಕೆ ಹೃದಯಾಘಾತಕ್ಕೆ ಒಳಗಾಗುತ್ತಾರೆ’ ವಿಷಯದ ಕುರಿತು ವೆಬಿನಾರ್ ಹಮ್ಮಿಕೊಂಡಿದೆ.

ಇದೇ 29ರಂದು ಸಂಜೆ 5ರಿಂದ 6ರವರೆಗೆ ವೆಬಿನಾರ್ ನಿಗದಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಗೆ ಗುರಿಯಾಗುತ್ತಿರುವ ಯುವಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಇದಕ್ಕೆ ಕಾರಣವೇನು ಎಂಬುದರ ಕುರಿತು ತಜ್ಞ ವೈದ್ಯರು ಸಂವಾದ ನಡೆಸಲಿದ್ದಾರೆ. ಹೃದಯ ಸಂಬಂಧಿ ಕಾಯಿಲೆಗಳಿಂದ ಪಾರಾಗಲು ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತೂ ಸಲಹೆಗಳನ್ನು ನೀಡಲಿದ್ದಾರೆ.

ಹೆಬ್ಬಾಳದಲ್ಲಿರುವ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ವೈದ್ಯ ಡಾ.ಎಸ್. ಸುನಿಲ್ ಕುಮಾರ್, ಯಶವಂತಪುರದ ಕೊಲಂಬಿಯಾ ಏಷ್ಯಾ ರೆಫರಲ್ ಆಸ್ಪತ್ರೆಯ ವೈದ್ಯ ಡಾ.ಕಾರ್ತಿಕ್ ವಾಸುದೇವನ್, ಮಿಲ್ಲರ್ಸ್ ರಸ್ತೆಯಲ್ಲಿರುವ ವಿಕ್ರಂ ಆಸ್ಪತ್ರೆಯ ವೈದ್ಯ ಡಾ.ಸುನಿಲ್ ದ್ವಿವೇದಿ ಅವರು ಸಂವಾದದಲ್ಲಿ ಮಾತನಾಡಲಿದ್ದಾರೆ.

ವೈಟ್‌ಫೀಲ್ಡ್‌ನಲ್ಲಿರುವ ಮಣಿಪಾಲ್ ಆಸ್ಪತ್ರೆಯ ವೈದ್ಯ ಡಾ.ಪ್ರದೀಪ್ ಹಾರನಹಳ್ಳಿ, ಲೈವ್‌ಆ-ಲ್ಟ್‌ಲೈಫ್‌ನ ಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿವೇಕ್ ಸುಬ್ರಹ್ಮಣ್ಯಂ ಅವರೂ ಭಾಗವಹಿಸಲಿದ್ದಾರೆ.

ವೆಬಿನಾರ್‌ನಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು https://bit.ly/3EP0Xnz ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಸಚಿವ ವಿ. ಸುನೀಲ್ ಕುಮಾರ್ ಅಧ್ಯಕ್ಷತೆ

ರಾಜ್ಯೋತ್ಸವ ಪ್ರಶಸ್ತಿ: ಸಲಹಾ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ ‘ರಾಜ್ಯೋತ್ಸವ ಪ್ರಶಸ್ತಿ’ಗೆ ವಿವಿಧ ಕ್ಷೇತ್ರಗಳ ಗಣ್ಯರ ಆಯ್ಕೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ 30 ಸದಸ್ಯರನ್ನೊಳಗೊಂಡ ಸಲಹಾ ಸಮಿತಿ ರಚಿಸಲಾಗಿದೆ.

ಈ ವರ್ಷ 66 ಸಾಧಕರನ್ನು ಗುರುತಿಸಿ, ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ. ಈ ಸಂಬಂಧ ಸಾರ್ವಜನಿಕರಿಗೆ ಕೂಡ ಸಾಧಕರ ಹೆಸರನ್ನು ಆನ್‌ಲೈನ್ ವೇದಿಕೆಯ ಮೂಲಕ ಶಿಫಾರಸು ಮಾಡಲು ಅವಕಾಶ ನೀಡಲಾಗಿದೆ. ಅ.15 ಶಿಫಾರಸು ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ.

ಸಲಹಾ ಸಮಿತಿ ಸದಸ್ಯರು: ಎಸ್.ಎನ್. ಸೇತುರಾಂ (ರಂಗಭೂಮಿ, ಚಲನಚಿತ್ರ), ಕೆ.ವಿ. ಸುಬ್ರಹ್ಮಣ್ಯ (ಪತ್ರಿಕಾರಂಗ), ವಿ. ಮನೋಹರ್ (ಚಲನಚಿತ್ರ), ಟೈಗರ್ ಅಶೋಕ್ ಕುಮಾರ್ (ಪೊಲೀಸ್), ಡಾ. ಶಿವಲಿಂಗಯ್ಯ (ಶಿಕ್ಷಣ), ಅವಿನಾಶ್ (ಚಲನಚಿತ್ರ), ಡಾ. ಈರೇಶಿ (ಶಿಕ್ಷಣ), ಡಾ. ನೇಮಿಚಂದ್ರ (ವಿಜ್ಞಾನ), ಬಾಬುರಾವ್ ಮುಡಬಿ (ಸಾಮಾಜಿಕ), ವನಜಾ ಶ್ರೀರಾಮ್ (ಶಿಕ್ಷಣ) ಹಾಗೂ ಹರೀಶ್ ಶ್ರೀರಾಮ್ (ಕ್ರೀಡೆ) ಬೆಂಗಳೂರಿನವರು.

ಉಡುಪಿಯ ಡಾ. ಕೃಷ್ಣಪ್ರಸಾದ್ ಕೂಡ್ಲು (ವೈದ್ಯಕೀಯ), ಕಲಬುರ್ಗಿಯ ಪ್ರೊ.ಎಸ್.ಎ. ಪಾಟೀಲ (ಶಿಕ್ಷಣ), ಮೂಡುಬಿದಿರೆಯ ಎಂ. ಮೋಹನ ಆಳ್ವ (ಶಿಕ್ಷಣ, ಸಾಂಸ್ಕೃತಿಕ), ಕೊಡಗಿನ ಎಂ.ಪಿ. ಗಣೇಶ್ (ಕ್ರೀಡೆ), ಬೆಳಗಾವಿಬ್ರಿಗೇಡಿಯರ್ ಪೂರ್ವಿಮಠ (ಸೇನೆ),ಮೈಸೂರಿನ ಮಹೇಶ್ವರನ್ (ಕುಸ್ತಿ), ಬಳ್ಳಾರಿಯ ದಾದಾ ಖಲಂದರ್ (ಸಾಮಾಜಿಕ), ಹುಬ್ಬಳ್ಳಿಯ ಕೆ.ಎಸ್. ಜಯಂತ್ (ಸಾಮಾಜಿಕ), ಬಾಗಲಕೋಟೆಯ ಘನಶಾಮ್ ಭಾಂಡಗೆ (ಸಿನಿಮಾ, ಸಾಮಾಜಿಕ), ದಾವಣಗೆರೆಯ ಬಿ. ಶಂಭುಲಿಂಗಪ್ಪ (ಸಂಕೀರ್ಣ), ಶಿವಮೊಗ್ಗದ ಶಿವಣ್ಣ (ಸಾಹಿತ್ಯ), ಉತ್ತರ ಕನ್ನಡದ ನಾಗರಾಜ್ ನಾಯಕ್ (ಪರಿಸರ, ಸಾಹಿತ್ಯ), ಶಿವಮೊಗ್ಗದ ಇ. ಪ್ರೇಮಾ (ಸಾಮಾಜಿಕ) ಸದಸ್ಯರಾಗಿ ನೇಮಕರಾಗಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ಅವರೂ ಸಲಹಾ ಸಮಿತಿ ಸದಸ್ಯರು.

ಇನ್ಫೊಸಿಸ್ ಜತೆ ಸದ್ಯವೇ ಮೂರು ಒಪ್ಪಂದ

ಬೆಂಗಳೂರು: ವಿದ್ಯಾರ್ಥಿಗಳ ಕೌಶಲ ಕಲಿಕೆಗೆ ಒತ್ತು ನೀಡುವುದು ಸೇರಿ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಅನುಷ್ಠಾನಗೊಳಿಸುವುದಕ್ಕೆ ಪೂರಕವಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಇನ್ಫೊಸಿಸ್ ಸದ್ಯವೇ ಮೂರು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಲಿವೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಇನ್ಫೊಸಿಸ್ ಅಧಿಕಾರಿಗಳ ಜತೆಗೆ ಮಂಗಳವಾರ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಾಲೇಜು ವಿದ್ಯಾರ್ಥಿಗಳಿಗೆ ಕೌಶಲ ಕಲಿಸುವ ಮೂರು ಸಾವಿರಕ್ಕೂ ಹೆಚ್ಚು ಕೋರ್ಸ್‌ಗಳಿರುವ ‘ಇನ್ಫೊಸಿಸ್ ಸ್ಪ್ರಿಂಗ್ ಬೋರ್ಡ್’ ಬಳಕೆ, ಕಾಲೇಜು ಉಪನ್ಯಾಸಕರಿಗೆ ಡಿಜಿಟಲ್ ತರಬೇತಿ, ಉದ್ಯೋಗ ಸಂಬಂಧಿ ಮಾರ್ಗದರ್ಶನಕ್ಕಾಗಿ ‘ಕ್ಯಾಂಪಸ್ ಕನೆಕ್ಟ್’ ಹಾಗೂ ಉನ್ನತ ಶಿಕ್ಷಣ ಕಾಲೇಜುಗಳಿಗೆ ಇನ್ಫೊಸಿಸ್ ವತಿಯಿಂದ 15 ಸಾವಿರ ಡಿಬಾಂಡೆಡ್ ಕಂಪ್ಯೂಟರ್‌ಗಳ ಕೊಡುಗೆ ಇವು ಒಪ್ಪಂದದ ಭಾಗವಾಗಿರುತ್ತವೆ ಎಂದು ಅವರು ವಿವರಿಸಿದರು.

‘ಇನ್ಫೊಸಿಸ್ ಸ್ಪ್ರಿಂಗ್ ಬೋರ್ಡ್’ ಎಂಬುದು ಸಮಗ್ರ ಡಿಜಿಟಲ್ ಸಾಕ್ಷರತಾ ವೇದಿಕೆಯಾಗಿದ್ದು, ಪರಿಣಾಮಕಾರಿ ಡಿಜಿಟಲ್ ಕಲಿಕೆ, ತಾಂತ್ರಿಕತೆ ಆಧಾರಿತ ಜೀವನ ಕೌಶಲ ಕೋರ್ಸ್‌ಗಳು, ಗೇಮಿಫಿಕೇಷನ್, ಪ್ರತ್ಯಕ್ಷ ತರಗತಿಗಳು, ಉದ್ಯಮ ಪ್ರಮಾಣ ಪತ್ರ, ಮೇಕರ್ಸ್ ಲ್ಯಾಬ್, ವೃತ್ತಿ ಮಾರ್ಗದರ್ಶನವನ್ನು ಒಳಗೊಂಡಿರುತ್ತದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಸ್ಮಾರ್ಟ್ ಕ್ಲಾಸ್ ರೂಮ್‌ಗಳಿಗೆ ಗೆಸ್ಚರ್ ಕಂಪ್ಯೂಟಿಂಗ್, ಬಯೋಮೆಟ್ರಿಕ್ಸ್ ತಂತ್ರಜ್ಞಾನ ಅಳವಡಿಕೆ, ತರಬೇತಿಗಾಗಿ ವರ್ಚುಯಲ್ ರಿಯಾಲಿಟಿ, ಆಗ್ಮೆಂಟೆಡ್ ರಿಯಾಲಿಟಿ ತಾಂತ್ರಿಕ ಬಳಕೆ, ಕಲಿಕಾ ದತ್ತಾಂಶವನ್ನು ಸಾಧನೆಯ ಫಲಿತಾಂಶದ ಸಂಯೋಜನೆ, ಆರೋಗ್ಯಕರ ಸ್ಪರ್ಧಾ ಮನೋಭಾವ ಮೂಡಿಸಲು ಗೇಮಿಫಿಕೇಷನ್ ಮತ್ತು ಡಿಸೈನ್ ತತ್ವಗಳ ಬಳಕೆ, ಪಠ್ಯ ಸಾಮಗ್ರಿ ರೂಪಿಸಲು ಆಟೋಮೇಷನ್ ಹಾಗೂ ರೋಬಾಟಿಕ್ ಉಪಕರಣಗಳ ಬಳಕೆ ಇವು ಇದರ ಭಾಗವಾಗಿರುತ್ತವೆ ಎಂದೂ ಹೇಳಿದರು.

ಈ ಒಡಂಬಡಿಕೆಗಳ ಭಾಗವಾಗಿ ಸಂಸ್ಥೆಗಳ ನಡುವೆ ಉತ್ಕೃಷ್ಟ ಕ್ರಮಗಳ ವಿನಿಮಯಕ್ಕಾಗಿ ‘ಎನ್‌ಇಪಿ ಕಮ್ಯುನಿಟಿ’ಯನ್ನು ಸ್ಥಾಪಿಸಲಾಗುತ್ತದೆ. ಈ ಮೂಲಕ ಎನ್‌ಇಪಿ ರೂಪುರೇಷೆಗಳನ್ನು ಅನುಷ್ಠಾನಗೊಳಿಲು ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿಭಾವಂತರನ್ನು ಉತ್ತೇಜಿಸುವುದಕ್ಕಾಗಿ ಕೆಡಿಇಎಂ (ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್) ಹಾಗೂ ಇನ್ಫೊಸಿಸ್ ನಡುವೆ ಸಹಭಾಗಿತ್ವ ಏರ್ಪಡಲಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ.ಗೋಪಾಲಕೃಷ್ಣ ಜೋಷಿ, ಇನ್ಫೊಸಿಸ್‌ನ ಹಿರಿಯ ಉಪಾಧ್ಯಕ್ಷ ತಿರುಮಲ ಆರೋಹಿ, ಗುರುರಾಜ್ ದೇಶಪಾಂಡೆ, ಉಪಾಧ್ಯಕ್ಷ ಸತೀಶ್ ನಂಜಪ್ಪ ಮುಂತಾದವರು ಇದ್ದರು.

ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ಮಂತ್ರಿ ಪರಿಷತ್ ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಮಂತ್ರಿ ಪರಿಷತ್ ಸಭೆ ಮಂಗಳವಾರ ನಡೆಯಿತು.

ವಿವಿಧ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಹಾಗೂ ಮೇಲ್ವಿಚಾರಣೆ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.

ಜುಲೈ 7ರಂದು ಕೇಂದ್ರ ಸಚಿವ ಸಂಪುಟದ ಪುನರ್‌ರಚನೆ ಹಾಗೂ ವಿಸ್ತರಣೆ ನಂತರ ನಡೆಯುತ್ತಿರುವ ಮಂತ್ರಿ ಪರಿಷತ್‌ನ ನಾಲ್ಕನೇ ಸಭೆ ಇದಾಗಿದೆ.

ಸಚಿವರಾದ ಗಜೇಂದ್ರ ಶೆಖಾವತ್ ಹಾಗೂ ಪೀಯೂಷ್ ಗೋಯಲ್ ಅವರು ತಮ್ಮ ಸಚಿವಾಲಯಗಳ ಪ್ರಗತಿಯನ್ನು ಸಭೆಯ ಮುಂದಿಟ್ಟರು. ಸರ್ಕಾರದ ಘೋಷಣೆಗಳು, ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಮಾಹಿತಿ ನೀಡಿದರು ಎಂದು ಇವೇ ಮೂಲಗಳು ಹೇಳಿವೆ.

ಬಿಬಿಎಂಪಿ ಮುಖ್ಯ ಆಯುಕ್ತರ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

‘ಶೇ 6 ಕಮಿಷನ್ ಪಡೆದು ಗುತ್ತಿಗೆದಾರರಿಗೆ ಬಿಲ್ ಪಾವತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ನಿಯಮಗಳನ್ನು ಉಲ್ಲಂಘಿಸಿ, ಹಿರಿತನ ಕಾಪಾಡದೆಯೇ ತಮಗೆ ಬೇಕಾದ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿದ್ದಾರೆ ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ದೂರಿದರು.

‘ಸಾವಿರಾರು ಗುತ್ತಿಗೆದಾರರು ಕಳೆದ ಎರಡೂವರೆ ವರ್ಷಗಳಿಂದಲೂ ತಮ್ಮ ಪಾಲಿನ ಹಣ ಬಿಡುಗಡೆಗೆ ಸರದಿ ಸಾಲಿನಲ್ಲಿ ಜೇಷ್ಠತೆಯ ನಿಯಮಗಳಿಗೆ ಅನುಗುಣವಾಗಿ ಕಾಯುತ್ತಿದ್ದಾರೆ. ಆದರೆ, ಮುಖ್ಯ ಆಯುಕ್ತರು ಈ ಬಗ್ಗೆ ಗಮನಹರಿಸಿಲ್ಲ’ ಎಂದು ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ವಿಶೇಷ ಬಿಡುಗಡೆ’ ಅಥವಾ ‘ಆಯುಕ್ತರ ವಿಭಾಗ’ ಹೆಸರಿನಲ್ಲಿ ಶೇಕಡ 6ರಷ್ಟು ಕಮಿಷನ್ ಪಡೆದು ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ವೈದ್ಯಕೀಯ ಚಿಕಿತ್ಸೆಗಳಿಗೆ, ವಿವಾಹ ಕಾರ್ಯಗಳಿಗೆ, ಗುತ್ತಿಗೆದಾರರು ಅಕಾಲಿಕ ಮರಣವಾದ ಸಂದರ್ಭಗಳಲ್ಲಿ ಮತ್ತು ಗುತ್ತಿಗೆದಾರರ ಆಸ್ತಿಗಳನ್ನು ಸಾಲ ನೀಡಿರುವ ಬ್ಯಾಂಕ್ ಮುಟ್ಟುಗೋಲು ಹಾಕಿಕೊಳ್ಳಲು ನೋಟಿಸ್ ಜಾರಿಗೊಳಿಸಿದ ಸಂದರ್ಭದಲ್ಲಿ ಮಾತ್ರ ‘ವಿಶೇಷ ಹಣ ಬಿಡುಗಡೆ’ಗೆ ಅವಕಾಶವಿದೆ ಎಂದು ಹೇಳಿದರು.

ಆದರೆ, ಈ ಎಲ್ಲ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಒಬ್ಬನೇ ಗುತ್ತಿಗೆದಾರರಿಗೆ 15ಕ್ಕೂ ಹೆಚ್ಚು ಬಾರಿ ಹಣವನ್ನು ಬಿಡುಗಡೆ ಮಾಡಿರುವ ಉದಾಹರಣೆಗಳಿವೆ. ಜೇಷ್ಠತೆ ನಿಯಮಗಳನ್ನು ಉಲ್ಲಂಘಿಸಿ ಸುಮಾರು ₹69 ಕೋಟಿಯನ್ನು ಕಳೆದ ಮೂರೂವರೆ ತಿಂಗಳ ಅವಧಿಯಲ್ಲಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

‘ಹಿರಿತನದ ಅನ್ವಯವೇ ₹ 620.52 ಕೋಟಿ ಬಿಡುಗಡೆ’

ಬಿಬಿಎಂಪಿಯಲ್ಲಿ ಗುತ್ತಿಗೆದಾರರಿಗೆ ಸಕಾಲಕ್ಕೆ ಬಿಲ್ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. 2021ರ ಏಪ್ರಿಲ್‌ನಿಂದ ಇಲ್ಲಿಯವರೆಗೂ ₹ 620.52 ಕೋಟಿಗಳನ್ನು ಜೇಷ್ಠತೆಗೆ ಅನುಗುಣವಾಗಿಯೇ ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟನೆ ನೀಡಿದ್ದಾರೆ.

ಶೀಘ್ರ ಮತ್ತೆ ₹289 ಕೋಟಿ ಮೊತ್ತವನ್ನು ಜೇಷ್ಠತೆಗೆ ಅನುಗುಣವಾಗಿಯೇ ಬಿಡುಗಡೆ ಮಾಡಲಾಗುವುದು. ಇದರಿಂದ, ಒಟ್ಟಾರೆ 2021ರ ಏಪ್ರಿಲ್‌ನಿಂದ ಸೆಪ್ಟೆಂಬರ್ ಅಂತ್ಯದೊಳಗೆ ₹909.52 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿದಂತಾಗುತ್ತದೆ ಎಂದು ತಿಳಿಸಿದ್ದಾರೆ.

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಎಂದೂ ಸಹ ಇಷ್ಟು ಮೊತ್ತವನ್ನು ಆರು ತಿಂಗಳ ಅವಧಿಯಲ್ಲಿ ಬಿಡುಗಡೆಗೊಳಿಸಿರಲಿಲ್ಲ ಎಂದು ಅವರು ತಿಳಿಸಿದ್ದಾರೆ.

ವಿಶೇಷ ಪ್ರಕರಣಗಳಲ್ಲಿ ಗುತ್ತಿಗೆದಾರರಿಗೆ ಆದ್ಯತೆ ಮೇರೆಗೆ ಬಿಲ್ ಪಾವತಿಸಲು ಅವಕಾಶವಿದೆ. ಜತೆಗೆ, ಕೋವಿಡ್-19 ಸೋಂಕಿನ ಕಾರಣದಿಂದ ವಿದ್ಯುತ್ ಚಿತಾಗಾರದ ನಿರ್ವಹಣೆ ಕೆಲಸಗಳು, ಆಸ್ಪತ್ರೆ ಕಟ್ಟಡಗಳು, ಡಯಾಲಿಸಿಸ್ ಕೇಂದ್ರಗಳು, ಕೋವಿಡ್ ಆರೈಕೆ ಕೇಂದ್ರಗಳು ಮತ್ತು ಕುಡಿಯುವ ನೀರಿನ ನಿರ್ವಹಣೆ ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಬಿಲ್ ಪಾವತಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಎಸ್‌.ಕೆ. ಹಾಲ್ದಾರ್ ಮುಂದುವರಿಕೆ

ನವದೆಹಲಿ: ಕೇಂದ್ರ ಜಲ ಆಯೋಗದ ಅಧ್ಯಕ್ಷ ಸೌಮಿತ್ರ ಕುಮಾರ್ ಹಾಲ್ದಾರ್ ಅವರನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ 5 ವರ್ಷಗಳ ಅವಧಿಗೆ ಮುಂದುವರಿಸಲು ಕೇಂದ್ರದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ನವೆಂಬರ್ 30ರಂದು ಕೇಂದ್ರ ಜಲ ಆಯೋಗದ ಅಧ್ಯಕ್ಷ ಸ್ಥಾನದಿಂದ ಹಾಲ್ದಾರ್ ಅವರು ನಿವೃತ್ತರಾಗಲಿದ್ದು, ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಮುಂದುವರಿಸಿ ಈ ನೇಮಕ ಮಾಡಲಾಗಿದೆ.

ಕರ್ನಾಟಕ ಸರ್ಕಾರ
(ತೋಟಗಾರಿಕೆ ಇಲಾಖೆ)
ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ
(ರಾಜ್ಯ ವಲಯ) ಕೊಪ್ಪಳ. ತಾ // ಜಿ // ಕೊಪ್ಪಳ
Email ID:adhsskpl@gmail.com
ಕ.ಸಂ:ಸತೋನಿ:ರಾವ:ಕೊ:ಇಟೆಂಡರ್:2:2021-22/171 ದಿನಾಂಕ:23-09-2021.

ಇ-ಟೆಂಡರ್ ಪ್ರಕಟಣೆ

2021-22 ನೇ ಸಾಲಿನ KSHDA ಯೋಜನೆಯಡಿ ಕೊಪ್ಪಳ ಜಿಲ್ಲೆಯ ತೋಟಗಾರಿಕೆ ಕ್ಷೇತ್ರ ಹಾಗೂ ಸಸ್ಯಗಾರಗಳಲ್ಲಿ ಅವಶ್ಯವಿರುವ ತೋಟಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ- ಪ್ರೋಕ್ಯೂರಮೆಂಟ್ ವೆಬ್ ಸೈಟ್ (https://eproc.karnataka.gov.in) ನಲ್ಲಿ ದಿನಾಂಕ:25-09-2021 ರಿಂದ ಟೆಂಡರ್ ಸಲ್ಲಿಸಬಹುದು.

ಕಾಮಗಾರಿ: 2021-22 ನೇ ಸಾಲಿಗೆ ಕೊಪ್ಪಳ ಜಿಲ್ಲೆ ತೋಟಗಾರಿಕೆ ಇಲಾಖೆಯ ತೋಟಗಾರಿಕೆ ಕ್ಷೇತ್ರ/ಸಸ್ಯಾಗಾರಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಪಡೆಯುವ ಬಗ್ಗೆ. **ಅಂದಾಜು ಮೊತ್ತ (ಲಕ್ಷ)**: 25.00. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 22-10-2021ಸಂಜೆ:5-30. **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 25-10-2021ಬೆಳಿಗ್ಗೆ:10-30. **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 26-10-2021ಬೆಳಿಗ್ಗೆ:10-30

ಹೆಚ್ಚಿನ ಮಾಹಿತಿಗಳನ್ನು ಇ- ಪ್ರೋಕ್ಯೂರಮೆಂಟ್ ವೆಬ್ ಸೈಟ್ (https://eproc.karnataka.gov.in) ನಲ್ಲಿ ಪಡೆಯಬಹುದು ಅಥವಾ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ) ಕೊಪ್ಪಳ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂ:08539-231531 ಮೊ: 7406504120.

ಸಹಿ/-ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾ.ವ) ಕೊಪ್ಪಳ
ಡಿಐಪಿಆರ್/ಕೊಪ್ಪಳ/283/ಎಂಸಿಎ/2020-21

ಎಫ್‌ಸಿಐ ಉಗ್ರಾಣಗಳಿಂದ ಕಾಳಸಂತೆಗೆ ಕಳ್ಳಸಾಗಣೆ ಮಾಡುತ್ತಿದ್ದ ಬೃಹತ್ ಜಾಲ ಪತ್ತೆ

ಪಡಿತರಕ್ಕೆ ಕನ್ನ ಹಾಕಿದ ಸಾಗಣೆ ಗುತ್ತಿಗೆದಾರ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಬಡ ಕುಟುಂಬಗಳಿಗೆ ಉಚಿತವಾಗಿ ವಿತರಿಸುವುದಕ್ಕಾಗಿ ಹಂಚಿಕೆ ಮಾಡುತ್ತಿರುವ ಆಹಾರ ಧಾನ್ಯವನ್ನು ಅಧಿಕೃತ ಸಾಗಣೆ ಗುತ್ತಿಗೆದಾರನ ನೇತೃತ್ವದಲ್ಲೇ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಉಗ್ರಾಣಗಳಿಂದ ನೇರವಾಗಿ ಕಾಳಸಂತೆಗೆ ಕದ್ದೊಯ್ಯುತ್ತಿದ್ದ ಬೃಹತ್ ಜಾಲವೊಂದನ್ನು ಆಹಾರ ಇಲಾಖೆಯ ರಾಜ್ಯ ಮಟ್ಟದ ತನಿಖಾ ದಳ ಪತ್ತೆಹಚ್ಚಿದೆ.

ಪಡಿತರ ಧಾನ್ಯದ ಸಗಟು ಸಾಗಣೆಯ ಗುತ್ತಿಗೆ ಪಡೆದಿರುವವರು, ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ (ಕೆಎಫ್‌ಸಿಎಸ್‌ಸಿ) ಉಗ್ರಾಣಗಳ ವ್ಯವಸ್ಥಾಪಕರು, ಪಡಿತರ ವಿತರಣೆಯ ಉಸ್ತುವಾರಿ ಹೊಂದಿರುವ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸೊಸೈಟಿಯ ನೌಕರರು ಕಾಳಸಂತೆಕೋರರ ಜತೆ ಕೈಜೋಡಿಸಿ ಆಹಾರ ಧಾನ್ಯಗಳನ್ನು ಕಳ್ಳಸಾಗಣೆ ಮಾಡುತ್ತಿರುವುದು ಬಯಲಿಗೆ ಬಂದಿದೆ. ಹಲವು ವರ್ಷಗಳಿಂದ ಮೂರು ಜಿಲ್ಲೆಯಲ್ಲಿ ಪಡಿತರ ಸಾಗಣೆ ಗುತ್ತಿಗೆ ಪಡೆದಿರುವ ವ್ಯಕ್ತಿಯೇ ಈ ತಂಡದಲ್ಲಿದ್ದು, ಸಾವಿರಾರು ಟನ್‌ಗಳಷ್ಟು ಆಹಾರ ಧಾನ್ಯವನ್ನು ಕಳ್ಳಸಾಗಣೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ನಗರದ ವೈಟ್‌ಫೀಲ್ಡ್‌ನಲ್ಲಿರುವ ಎಫ್‌ಸಿಐ ಉಗ್ರಾಣದಿಂದ 550 ಚೀಲ ಅಕ್ಕಿಯನ್ನು ತುಂಬಿಕೊಂಡು ಬೊಮ್ಮನಹಳ್ಳಿಯ ಕೆಎಫ್‌ಸಿಎಸ್‌ಸಿ ಉಗ್ರಾಣಕ್ಕೆ ಶುಕ್ರವಾರ ಹೊರಟಿದ್ದ ಲಾರಿ ನೇರವಾಗಿ ಮಂಡ್ಯಕ್ಕೆ ಹೋಗಿತ್ತು. ಸ್ಥಳೀಯರ ಮಾಹಿತಿ ಆಧರಿಸಿ ಲಾರಿಯನ್ನು ವಶಕ್ಕೆ ಪಡೆದ ಅಲ್ಲಿನ ಪೊಲೀಸರು, ಆಹಾರ ಇಲಾಖೆಯ ತನಿಖಾ ದಳಕ್ಕೆ ಮಾಹಿತಿ ನೀಡಿದ್ದರು.

ರಾಜ್ಯಮಟ್ಟದ ತನಿಖಾ ದಳದ ಮುಖ್ಯಸ್ಥ ಹಾಗೂ ಆಹಾರ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ. ರಾಮೇಶ್ವರಪ್ಪ ನೇತೃತ್ವದಲ್ಲಿ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಲಾಗಿದೆ. ಆಹಾರ ಇಲಾಖೆಯ ಮಂಡ್ಯ ಜಿಲ್ಲಾ ಜಂಟಿ ನಿರ್ದೇಶಕಿ ಸೌಮ್ಯಾ ಎ.ಜಿ. ನೀಡಿರುವ ದೂರನ್ನು ಆಧರಿಸಿ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಿಸಲಾಗಿದೆ.

'ಮಂಡ್ಯದ ಸಾಂಜೋ ಆಸ್ಪತ್ರೆ ಬಳಿ ವಶಪಡಿಸಿಕೊಂಡ ಲಾರಿಯಲ್ಲಿ 264.14 ಕ್ವಿಂಟಲ್ ಪಡಿತರ ಅಕ್ಕಿ ಪತ್ತೆಯಾಗಿದೆ. ಇದನ್ನು ವೈಟ್‌ಫೀಲ್ಡ್ ಎಫ್‌ಸಿಐ ಉಗ್ರಾಣದಿಂದ ಕೆಎಫ್‌ಸಿಎಸ್‌ಸಿ ಬೊಮ್ಮನಹಳ್ಳಿಯ ಉಗ್ರಾಣಕ್ಕೆ ಬಿಲ್ ಮಾಡಲಾಗಿತ್ತು. ಆರೋಪಿಗಳು ಮಂಡ್ಯದ ಗಾಣದಾಳುವಿನಲ್ಲಿರುವ ಪರಮೇಶ್ವರ ರೈಸ್ ಮಿಲ್‌ನಲ್ಲಿ ಅಕ್ಕಿಯನ್ನು ಪಾಲಿಶ್ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರೆಂಬ ಮಾಹಿತಿ ಲಭಿಸಿತ್ತು. ಗಿರಣಿಯಲ್ಲೂ ತಪಾಸಣೆ ನಡೆಸಿದ್ದು, ಸತ್ಯನಾರಾಯಣ ಶೆಟ್ಟಿ, ಆದಿಮೂರ್ತಿ ಮತ್ತು ಭರತ್ ಅಕ್ಕಿ ಗಿರಣಿ ಮಾಲೀಕರ ಜತೆ ಒಪ್ಪಂದ ಮಾಡಿಕೊಂಡು ಅಕ್ಕಿಯನ್ನು ತಂದು ಪಾಲಿಶ್ ಮಾಡಿ ಮಾರಾಟ ಮಾಡುತ್ತಿದ್ದರು' ಎಂದು ದೂರಿನಲ್ಲಿದೆ.

ಮೂರು ಜಿಲ್ಲೆಗಳಲ್ಲಿ ಗುತ್ತಿಗೆದಾರ: ವಿಶ್ವನಾಥ್ ಕೆ.ಎಸ್. ಒಡೆತನದ ವಿನಾಯಕ ಟ್ರಾನ್ಸ್‌ಪೋರ್ಟ್ ಕಂಪನಿ ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪಡಿತರ ಧಾನ್ಯಗಳನ್ನು ಸಗಟು ಗೋದಾಮುಗಳಿಗೆ ಸಾಗಿಸುವ ಗುತ್ತಿಗೆ ಹೊಂದಿದೆ. ಸಾಮಾನ್ಯ ಅವಧಿಯಲ್ಲಿ ತಿಂಗಳಿಗೆ 40,000 ಕ್ವಿಂಟಲ್ ಮತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಅನ್ನ ಕಲ್ಯಾಣ ಯೋಜನೆಯ ಅವಧಿಯಲ್ಲಿ ತಿಂಗಳಿಗೆ 80,000 ಕ್ವಿಂಟಲ್ ಸಾಗಣೆ ಮಾಡುತ್ತಿದೆ. ಈ ಅವಧಿಯಲ್ಲಿ ಸಾವಿರಾರು ಕ್ವಿಂಟಲ್ ಅಕ್ಕಿಯನ್ನು ಕಾಳಸಂತೆಗೆ ಕೊಂಡೊಯ್ದಿರುವ ಶಂಕೆ ಇದೆ ಎಂದು ಆಹಾರ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಚಾಲಕನ ವಿರುದ್ಧ ದೂರು

ಪಡಿತರ ಅಕ್ಕಿ ತುಂಬಿದ್ದ ಕೆಎ–53, ಬಿ–9888 ನೋಂದಣಿ ಸಂಖ್ಯೆಯ ಲಾರಿಯನ್ನು ಶನಿವಾರ ಸಂಜೆ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದರು. ಇದೇ ಲಾರಿಯನ್ನು ಚಾಲಕ ನಾಗರಾಜ್ ಎಂಬಾತ ಕದ್ದೊಯ್ದಿದ್ದಾನೆ ಎಂದು ವಿನಾಯಕ ಟ್ರಾನ್ಸ್‌ಪೋರ್ಟ್ ಕಂಪನಿ ಮಾಲೀಕ ವಿಶ್ವನಾಥ್ ಬೆಂಗಳೂರಿನ ಕಾಡುಗೋಡಿ ಪೊಲೀಸ್ ಠಾಣೆಗೆ ಭಾನುವಾರ ದೂರು ನೀಡಿದ್ದು, ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಎರಡನೇ ಎಫ್‌ಐಆರ್

ವಿನಾಯಕ ಟ್ರಾನ್ಸ್‌ಪೋರ್ಟ್ ಕಂಪನಿಯ ಲಾರಿ ಕೆಎಫ್‌ಸಿಎಸ್‌ಸಿ ಉಗ್ರಾಣಕ್ಕೆ ಸಾಗಿಸಬೇಕಿದ್ದ ಪಡಿತರ ಗೋಧಿಯನ್ನು ಕಾಳಸಂತೆಕೋರ ಸತ್ಯನಾರಾಯಣ ಶೆಟ್ಟಿಗೆ ಸೇರಿದ ಖಾಸಗಿ ಉಗ್ರಾಣಕ್ಕೆ ಸಾಗಿಸುತ್ತಿದ್ದಾಗ ಆಗಸ್ಟ್ 17ರಂದು ಬೆಂಗಳೂರಿನ ವಿಶ್ವೇಶ್ವರಪುರ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದರು. ಈ ಸಂಬಂಧ ಎಫ್‌ಐಆರ್ ದಾಖಲಿಸಿ ಸತ್ಯನಾರಾಯಣ ಶೆಟ್ಟಿ ಸೇರಿದಂತೆ ಮೂವರನ್ನು ಬಂಧಿಸಲಾಗಿತ್ತು.

ಯಾರ ವಿರುದ್ಧ ಎಫ್‌ಐಆರ್

- ವಿಶ್ವನಾಥ್ ಕೆ.ಎಸ್., ವಿನಾಯಕ ಟ್ರಾನ್ಸ್‌ಪೋರ್ಟ್ ಮಾಲೀಕ
- ರಾಜು ವಿ.,ಕೆಎಫ್‌ಸಿಎಸ್‌ಸಿ ಬೊಮ್ಮನಹಳ್ಳಿ ಉಗ್ರಾಣದ ವ್ಯವಸ್ಥಾಪಕ
- ಪ್ರದೀಪ್ ಕುಮಾರ್ ಎಸ್.ಆರ್., ಲಾರಿ ಮಾಲೀಕ ಮಂಡ್ಯ,
- ಸತ್ಯನಾರಾಯಣ ಶೆಟ್ಟಿ ಅಲಿಯಾಸ್ ಸತ್ಯ,ಬೆಂಗಳೂರು
- ಆದಿಮೂರ್ತಿ, ಬೆಂಗಳೂರು ಉತ್ತರ ಟಿಎಪಿಸಿಎಂಎಸ್ ನೌಕರ ಮತ್ತು ಅವರ ಮಗ ಭರತ್

EMPLOYEES' PROVIDENT FUND ORGANISATION
BEFORE ASSISTANT PROVIDENT FUND COMMISSIONER (EPFO)
REGIONAL OFFICE, KR PURAM, No. F-28, NSU Block, ITI Campus, (Bengaluru Plant), DOORAVANI NAGAR, BENGALURU - 560 016. Ph: 080-25658003. E-mail: sro.krpuram@epfindia.gov.in

No. KN/RO/KRP/2021-22 Date: 29.09.2021

PUBLIC NOTICE

In the matter of proceedings under section 14B and the order for payment of interest under section 7Q of the Employees' Provident Fund and Miscellaneous Provision Act, 1952, whereas inquiry against the following establishments is ongoing before the undersigned for non-payment of the statutory dues.

And, whereas, the Department had sent the notices to the establishments, however the notices got undelivered. Now therefore, notice is hereby given to the employer(s) in relation to the below mentioned establishments and are directed to make their submission by post/email only with subject – "14B inquiry in respect of the establishment code and name, for example PYKRP1234567 and ABC ENTERPRISES" on or before **18.10.2021** at the address/Email address mentioned above.

Sl. No.	PF Code No.	Name of the Establishment	Amount of Damages (Rs.)	Amount of Interest (Rs.)	Assessing Officer
1	35574	Y.G. Muniyappa, Labour Contractor	1,676	4,019	Gaurav Meena, APFC
2	35440	Everse India Software Solutions	638	449	Gaurav Meena, APFC
3	45045	Conergy Energy (India) Pvt. Ltd.	24,533	26,188	Gaurav Meena, APFC
4	35550	Acme Facility Management Pvt. Ltd.	75,430	42,335	Gaurav Meena, APFC
5	52539	Serial Micro Electronics Pvt. Ltd.	5,404	12,968	Gaurav Meena, APFC
6	53376	Gurucharan Contractor	474769	250942	Shadakshara Gopal Reddy RPFC-II
7	35774	Camson Biotechnologies Ltd.	52712	27844	Shadakshara Gopal Reddy, RPFC-II
8	35562	M D Enterprises	18251	15859	Shadakshara Gopal Reddy, RPFC-II
9	1021725	Shakthi Vaishnavi Enterprises	34,484	16,552	Santosh Jaiswal, RPFC-II
10	16762	Sri Lakshmi Venkateshwara Enterprises	4265844	3397311	Santosh Jaiswal, RPFC-II

Further, any person having information about the whereabouts of the establishment and/or employer of the establishments mentioned above or having any evidence in their possession, may submit the information/evidence by post or by email to the Employees' Provident Fund Organisation at the address/email address mentioned above, on or before **18.10.2021** with subject as mentioned above to facilitate conclusion of the inquiry. In case no information is received or none appear to substantiate the remittances made in time, the above orders shall be issued ex-parte treating that the above said damages & interest are levied on the stipulated belated remittances and proceed to recover after the expiry of the prescribed period, under section 8 of the EPF & MP Act, 1952.

(SHADAKSHARA GOPALA REDDY)
REGIONAL PF COMMISSIONER-II (PD), RO KR PURAM.

ಭಾರಿ ಮಳೆಗೆ ಮನೆ ಕುಸಿತ; ಸಂಪರ್ಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆಗೆ ಹಲವು ಮನೆಗಳು ಕುಸಿದಿದ್ದು, ಸೇತುವೆ ಮೇಲೆ ಪ್ರವಾಹದ ನೀರು ಹರಿದಿದ್ದರಿಂದ ಕೆಲವೆಡೆ ಸಂಚಾರ ಸ್ಥಗಿತಗೊಂಡಿತ್ತು.

ಕಲಬುರ್ಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಬಳಿ ಕಾಗಿಣಾ ನದಿಗೆ ಪ್ರವಾಹ ಉಂಟಾಗಿ ಸೇತುವೆ ಮುಳುಗಿದ್ದರಿಂದ ಕಲಬುರ್ಗಿ-ಸೇಡಂ ಮಧ್ಯದ ಸಂಪರ್ಕ ಕಡಿತಗೊಂಡಿದೆ. ಸೇಡಂನ ಕಮಲಾವತಿ ನದಿಯೂ ಮೈದುಂಬಿ ಹರಿಯುತ್ತಿದೆ. ಭಾರಿ ಮಳೆ ಸುರಿದ ಪರಿಣಾಮ ಹಾಗೂ ನಾಗರಾಳ ಜಲಾಶಯದಿಂದ ನದಿಗೆ ನೀರು ಹರಿದು ಬಂದಿದ್ದರಿಂದ ಮಳಖೇಡ ಸೇತುವೆ ಮೇಲೆ ನೀರು ಹರಿಯುತ್ತಿದೆ.

ಚಿತ್ತಾಪುರ ತಾಲ್ಲೂಕಿನ ದಂಡೋತಿ ಗ್ರಾಮದ ಹತ್ತಿರ ಹರಿಯುವ ಕಾಗಿಣಾ ನದಿಯಲ್ಲಿ ಪ್ರವಾಹ ಉಕ್ಕಿ ಬಂದು ಸೇತುವೆ ಮುಳುಗಡೆಯಾಗಿದೆ. ಹೀಗಾಗಿ ಚಿತ್ತಾಪುರದಿಂದ ದಂಡೋತಿ ಮಾರ್ಗದ ಸಾರಿಗೆ ಸಂಚಾರ ಸ್ತಬ್ಧಗೊಂಡಿತ್ತು. ಜಿಲ್ಲಾ ಕೇಂದ್ರ ಕಲಬುರ್ಗಿ ಹಾಗೂ ಕಾಳಗಿ ತಾಲ್ಲೂಕುಗಳ ಸಂಪರ್ಕ ಕಡಿದುಕೊಂಡಿದೆ.

ಜಿಲ್ಲೆಯ ಸೊನ್ನ ಭೀಮಾ ಬ್ಯಾರೇಜ್‌ನ ಆರು ಗೇಟ್‌ಗಳ ಮೂಲಕ 49,614 ಕ್ಯುಸೆಕ್, ಬೆಣ್ಣೆತೊರಾ ಜಲಾಶಯದಿಂದ 10 ಸಾವಿರ ಕ್ಯುಸೆಕ್, ನಾಗರಾಳ ಜಲಾಶಯದಿಂದ 4500 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ.

ಬೀದರ್ ಜಿಲ್ಲೆಯ ಚಿಟಗುಪ್ಪದಲ್ಲಿ 6 ಮನೆಗಳ ಗೋಡೆಗಳು ಕುಸಿದಿವೆ. ಹುಲಸೂರು ತಾಲ್ಲೂಕಿನ ವಾಜರಖೇಡನಲ್ಲಿ ಸರ್ಕಾರಿ ಶಾಲೆಯ ಹಳೆಯ ಕಟ್ಟಡದ ಮೇಲ್ಛಾವಣಿ ಕುಸಿದಿದೆ. ತೂರಿ ಬಸವಣ್ಣ ದೇಗುಲ ಜಲಾವೃತಗೊಂಡಿದೆ.

ಔರಾದ್ ತಾಲ್ಲೂಕಿನ ಬೋರ್ಗಿ ಸಮೀಪ ಸಂತಪುರ-ಜಮಗಿ ನಡುವಿನ ಹಳ್ಳದ ಸೇತುವೆ ಕುಸಿದು ಸಂಚಾರಕ್ಕೆ ಸಮಸ್ಯೆಯಾಗಿದೆ. ಬಾಬಳಿ ಗ್ರಾಮದ ಬಳಿ ಸೇತುವೆ ಹಾಳಾಗಿದೆ. ಭಾಲ್ಕಿ ತಾಲ್ಲೂಕಿನ ದಾಡಗಿ ಸಮೀಪ ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನೆಲಮಟ್ಟದ ಸೇತುವೆ ಮುಳುಗಿದೆ. ಭಾಲ್ಕಿಯಲ್ಲಿ ಸ್ಮಶಾನಕ್ಕೆ ಹೋಗುವ ದಾರಿ ಹಾಳಾಗಿರುವ ಕಾರಣ ಶವ ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಕೆಸರಿನಲ್ಲಿ ಸಿಲುಕಿ ಶವಸಂಸ್ಕಾರಕ್ಕೆ ಹೊರಟಿದ್ದವರು ತೊಂದರೆ ಅನುಭವಿಸಿದರು.

ಕಾರವಾರದಲ್ಲಿ ಗಾಳಿ, ಮಳೆ: ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಮಂಗಳವಾರ ಉತ್ತಮ ಮಳೆಯಾಗಿದ್ದರೆ ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ಆಗಾಗ ಸಾಧಾರಣ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.35	4,633	7,741
ಹಾರಂಗಿ	2,859	2,857.69	940	1,450
ಕಬಿನಿ	2,284	2,281	1,400	3,500
ಹೇಮಾವತಿ	2,922	2,914.26	2,969	5,272
ಲಿಂಗನಮಕ್ಕಿ	1,819	1,815.75	3,703	-
ಸೂಪಾ (ಮೀ)	564	556.75	1,766	5,323
ಮಾಣಿ	594.36	587.70	786	-
ತುಂಗಭದ್ರಾ	1,633	1,632.80	8,931	10,593
ಮಲಪ್ರಭಾ	2,079.50	2,079.00	1,694	1,694
ಘಟಪ್ರಭಾ	2,175	2,175.00	500	500
ಭದ್ರಾ	186	184.11	2,167	3,370
ಆಲಮಟ್ಟಿ (ಮೀ)	519.60	519.59	16,512	18,549
ನಾರಾಯಣಪುರ (ಮೀ)	492.25	492.19	17,000	29,900

* ನೆಲಮಟ್ಟದಿಂದ

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಜೋಗ ಜಲಪಾತದ ಬಳಿ ಪರಿಸರ ಸೂಕ್ಷ್ಮವಲಯದಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಬಗ್ಗೆ ಅರಣ್ಯಭೂಮಿಯ ಪರಿವರ್ತನೆಗೆ ಪ್ರಸ್ತಾವ ಸಲ್ಲಿಸಿರುವುದು ಸರಿಯೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, Opp. S.J.P College, ಕೆ.ಆರ್.ಸರ್ಕಲ್, ಬೆಂಗಳೂರು–560001. ಮಿಂಚ್ ಅಂಚೆ: ad.kdlws@gmail.com, md.ksmscl@gmail.com
No: KSMSCL/EQPT/GHJ/TND/35/2021-22 Date: 28/09/2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: No: KSMSCL/EQPT/GHJ/TND/35/2021-22 (IND-845) dated 28/09/2021.

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಅಲ್ಪಾವಧಿ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

1. ಪಿ.ಐ.ಸಿ.ಯು ಉಪಕರಣಗಳನ್ನು ಸಾರ್ವಜನಿಕ ಆಸ್ಪತ್ರೆ ಜಯನಗರಕ್ಕೆ ಖರೀದಿಸಿ ಪೂರೈಸಲು ಅಲ್ಪಾವಧಿ ಇ-ಟೆಂಡರ್ ಕರೆಯುವ ಬಗ್ಗೆ. ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ **ದಿನಾಂಕ: 28.09.2021** ರಿಂದ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
ವಾಸಾಸಂಇ/ಬೆಂ.ನ./ಜಿಎ/1717/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಮಾಜ ಕಲ್ಯಾಣ ಇಲಾಖೆ
ಸಮಾಜ ಕಲ್ಯಾಣ ಆಯುಕ್ತರ ಕಛೇರಿ. 5ನೇ ಮಹಡಿ. ಬಹುಮಹಡಿಗಳ ಕಟ್ಟಡ. ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ಸಂಖ್ಯೆ:ಸಕನಿ/ಮೀ.ಜಾ.ಕೋ–3/ಸಿಆರ್–30/ವಿ.ವ.ನೇ/2020–21 ದಿನಾಂಕ: 28.09.2021

ಅಧಿಸೂಚನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ವಿರುದ್ಧ ಸರ್ಕಾರದ ಪರವಾಗಿ ನ್ಯಾಯಾಲಯಗಳಲ್ಲಿ / ಮೇಲ್ಮನವಿ ಪ್ರಾಧಿಕಾರಗಳಲ್ಲಿ ವಾದ ಮಂಡಿಸಲು ಅಡ್ವೋಕೇಟ್ ಪ್ಯಾನಲ್ ರಚಿಸುವ ಸಂಬಂಧ ಅರ್ಹ ವಕೀಲರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13.10.2021ರ ಸಂಜೆ 5:00 ಗಂಟೆ.

ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸುವ ವಿಧಾನ, ಇತರೆ ವಿವರಗಳನ್ನು sw.kar.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಆಯುಕ್ತರು,
ವಾಸಾಸಂಇ/ಬೆಂ.ನ/ಜಿಎ/1709/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಕಿ.ಇಂ.1/ಟೆಂಡರ/2021–22/1623 ದಿನಾಂಕ : 24–09–2021

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 1&2 [ಏಕಲಕೋಟೆ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1&2ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ 13 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ:2021–22ನೇ ಸಾಲಿನ ಜಿಲ್ಲಾ ಪಂಚಾಯತ 3054 ಸಿ.ಎಂ.ಜಿ.ಎಸ್.ವೈ ಯೋಜನೆ/2017–18ನೇ ಸಾಲಿನ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ ಅಡಿ ಪಂ.ರಾಜ್.ಇಂ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್, https://eproc.karnataka.gov.in ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಅ. ನಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ಇ–ಪೋರ್ಟಲ್ ಮುಖಾಂತರ)	ಕಾಮಗಾರಿ ಅವಧಿ (ಮಳೆಗಾಲ ಸೇರಿ)	ಗುತ್ತಿಗೆದಾರರ ದರ್ಜೆ
1	IMPROVEMENTS TO ROAD FROM BIDNAL TANDA TO BIDNAL IN MUNDARGI TALUK, GADAG DIST. UNDER 2021-22 ZP 3054 CMGSY **WORK_INDENT85850**	1337430.67	EMD Declaration	3 ತಿಂಗಳು	2 ನೇ ದರ್ಜೆ KW-1
2	IMPROVEMENTS TO ROAD FROM PETALUR VILLAGE TO YAKALASPUR VILLAGE IN MUNDARGI TALUK, GADAG DIST. (RESERVE TO ST)UNDER 2021-22 ZP 3054 CMGSY **WORK_INDENT85851**	1548670.06	EMD Declaration	3 ತಿಂಗಳು	2 ನೇ ದರ್ಜೆ KW-1
3	IMPROVEMENTS TO KALKALESHWAR-LAKKALKATTI(DINDUR CROSS) IN GAJENDRAGAD TALUK, GADAG DIST. UNDER ZP 3054 CMGSY **WORK_INDENT85862**	1805543.96	EMD Declaration	3 ತಿಂಗಳು	2 ನೇ ದರ್ಜೆ KW-1
4	REPAIRS TO HUNGUNDI TO BASARKOD ROAD IN RON TALUK, GADAG DIST. UNDER 3054 ZP CMGSY **WORK_INDENT85864**	1782754.13	EMD Declaration	3 ತಿಂಗಳು	2 ನೇ ದರ್ಜೆ KW-1
5	IMPROVEMENTS TO KABALAYATAKATTI VILLAGE TO MDR IMAM VENKATAPUR VILLAGE IN GADAG TALUK, GADAG DIST. (RESERVE TO SC)UNDER 2021-22 ZP 3054 CMGSY **WORK_INDENT85865**	2221719.3	EMD Declaration	3 ತಿಂಗಳು	1 ನೇ ದರ್ಜೆ KW-1
6	REPAIRS TO VASAN JOINING ROAD IN NARGUND TALUK, GADAG DIST. UNDER 2021-22 ZP 3054 CMGSY. **WORK_INDENT85870**	1069286.92	EMD Declaration	3 ತಿಂಗಳು	2 ನೇ ದರ್ಜೆ KW-1
7	REPAIRS TO KAPALI-BAILBASVESHWAR ROAD IN NARGUND TALUK, GADAG DIST. UNDER 2021-22 ZP 3054 CMGSY. **WORK_INDENT85871**	888201.38	EMD Declaration	3 ತಿಂಗಳು	3 ನೇ ದರ್ಜೆ KW-1
8	IMPROVEMENTS TO ROAD FROM SHIGLI CROSS VIA ULATTI SHYBAL LAXMESHWAR-DODDUR MAIN ROAD IN LAXMESHWAR TALUK, GADAG DIST. (RESERVE TO SC)UNDER 2021-22 ZP 3054 CMGSY. **WORK_INDENT85872**	1326458.89	EMD Declaration	3 ತಿಂಗಳು	2 ನೇ ದರ್ಜೆ KW-1
9	REPAIRS TO ROAD IN SELECTED REACHES FROM MUKTIMANDIR VIA GULGANJIKOPPA LAXMESHWAR-SAVANUR MAIN ROAD IN LAXMESHWAR TALUK, GADAG DIST. UNDER 2021-22 ZP 3054 CMGSY. **WORK_INDENT85873**	1057889.47	EMD Declaration	3 ತಿಂಗಳು	2 ನೇ ದರ್ಜೆ KW-1
10	REPAIRS TO SELECTED REACHES FROM VADAYERMALLAPUR LAXMESHWAR-SAVANUR MAIN ROAD IN LAXMESHWAR TALUK, GADAG DIST. UNDER 2021-22 ZP 3054 CMGSY. **WORK_INDENT85874**	532491.05	EMD Declaration	3 ತಿಂಗಳು	3 ನೇ ದರ್ಜೆ KW-1
11	REPAIRS TO BELAHATTI-SURANAGI MAIN ROAD UPTO BHUDHIHAL VILLAGE IN SHIRAHATTI TALUK, GADAG DIST. UNDER 2021-22 ZP 3054 CMGSY. **WORK_INDENT85877**	1901061.63	EMD Declaration	3 ತಿಂಗಳು	2 ನೇ ದರ್ಜೆ KW-1
12	REPAIRS TO NARGUND-MUGANNUR ROAD IN NARGUND TALUK, GADAG DIST. UNDER 2021-22 ZP 3054 CMGSY. **WORK_INDENT85876**	934677.36	EMD Declaration	3 ತಿಂಗಳು	3 ನೇ ದರ್ಜೆ KW-1
13	CONSTRUCTION OF SABHA BHAVAN IN KABALAYATAKATTI VILLAGE OF GADAG TALUKA OF GADAG DIST. **WORK_INDENT68054/CALL-7**	998427.95	EMD Declaration	3 ತಿಂಗಳು	3 ನೇ ದರ್ಜೆ KW-1

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: **27–09–2021** ರಿಂದ **11–10–2021**ರಂದು 16.00 ಗಂಟೆಗೆ ಗಂಟೆಯವರೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ : **13–10–2021** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/297/2021–22

ಪುರಸಭಾ ಕಾರ್ಯಾಲಯ, ಬೇಲೂರು–573115
www.belurtown.mrc.gov.in E-mail: itstaff_ulb_belur@yahoo.co.in, townmunicipal.belur@gmail.com Ph: 08177 – 222221
ಸಂಖ್ಯೆ:ಪು.ಬೇ/ಪ.ಅ/ಕು.ನೀ/51/2021–22 ದಿನಾಂಕ: 27–09–2021

ಟೆಂಡರ್ ಪ್ರಕಟಣೆ

ಬೇಲೂರು ಪುರಸಭೆಯ ನೀರು ಶುದ್ದೀಕರಣ ಘಟಕಕ್ಕೆ ಹೊಸದಾಗಿ ಸ್ಟಾಟರ್ ಪೂರೈಸಿ ಅಳವಡಿಸಲು ಆಸಕ್ತವುಳ್ಳ ಅಧಿಕೃತ ಸರಬರಾಜುದಾರರು/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಕೆ.ಜಿ–1 ದಸ್ತಾವೇಜಿನಲ್ಲಿ ಆಹ್ವಾನಿಸಲಾಗಿದೆ. ಕ್ರ.ಸಂ.1)ಕಾಮಗಾರಿ ವಿವರ: ನೀರು ಶುದ್ದೀಕರಣ ಘಟಕದಲ್ಲಿ 200Amps ನ ಒಂದು ಸಂಖ್ಯೆ (01) ಸ್ಟಾರ್ ಡೆಲ್ಟಾ ಕಂಟ್ರೋಲ್ ಪ್ಯಾನಲ್ ಸ್ಟಾಟರ್‌ನ್ನು (60 ಹೆಚ್.ಪಿ. ಮೋಟಾರ್ ಪಂಪ್‌ಗೆ ಹೊಂದುವಂತದ್ದು) ಸರಬರಾಜು ಮಾಡಿ ಅಳವಡಿಸಿ ಚಾಲ್ತಿಗೊಳಿಸುವುದು. ಅಂದಾಜು ಮೊತ್ತ ರೂ. 4.57 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ.11,500–00 1)ಟೆಂಡರ್ ಫಾರಂಗಳನ್ನು ಶುಲ್ಕ ರೂ. 550–00 ಗಳನ್ನು ಚಲನ್ ಪಡೆದು ಬ್ಯಾಂಕಿನಲ್ಲಿ ಪಾವತಿಸಿ ಪಡೆದುಕೊಳ್ಳುವುದು. 2)ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ: 14–10–2021 ಸಮಯ ಸಂಜೆ 5.00 ಗಂಟೆಗೆ 3)ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:15–10–2021 ಬೆಳಗ್ಗೆ 11.00 ಗಂಟೆಯೊಳಗೆ 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 15–10–2021 ಸಮಯ ಬೆಳಗ್ಗೆ 11.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ವೆಬ್‌ಸೈಟ್ ವಿಳಾಸ http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–(ಪ್ರತೀಕ್ ಭಾಯಲ್ ಐ.ಎ.ಎಸ್) ಆಡಳಿತಾಧಿಕಾರಿಗಳು, ಪುರಸಭೆ, ಬೇಲೂರು
ಸಹಿ/– (ಎಸ್.ಎಂ. ಸುಜಯ್ ಕುಮಾರ್) ಮುಖ್ಯಾಧಿಕಾರಿ, ಪುರಸಭೆ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/417/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗಾಂಧಿನಗರ ವಿಭಾಗ, ಬಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು-560 020.
ಸಂಖ್ಯೆ:ಕಾಅ(ಗಾನ)/ಇ-ಪ್ರೋ/006/2021-22 ದಿನಾಂಕ: 27-09-2021

ಟೆಂಡರ್‌ಗೆ ಆಹ್ವಾನ (ಅಲ್ಪಾವಧಿ ಟೆಂಡರ್‌ಗಳ ಆಹ್ವಾನ) (ದ್ವಿ ಲಕೋಟೆ ಪದ್ಧತಿ)
(ಕೆಡಬ್ಲ್ಯೂ-4) (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳತಿಳಿಸಿದ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಸೂಕ್ತ ದರ್ಜೆಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ)
1.	ವಾರ್ಡ್ ಸಂಖ್ಯೆ 94, 95 ಮತ್ತು 96ರಲ್ಲಿ ಸಮುದಾಯ ಭವನ, ಶೌಚಾಲಯ ಬ್ಲಾಕ್‌ಗಳ ಸಮಗ್ರ ಅಭಿವೃದ್ಧಿ ಮತ್ತು ಇತರೆ ಕಾಮಗಾರಿಗಳು.	3.20

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡಿಂಗ್ ಮಾಡುವ ದಿನಾಂಕ: 18-10-2021 ರಿಂದ. 2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 25-10-2021ರ ಸಂಜೆ 4:00 ಗಂಟೆಯೊಳಗೆ. 3) ಪೂರ್ವ ಬಿಡ್ ಸಭೆಯನ್ನು ದಿನಾಂಕ: 21-10-2021ರ ಸಂಜೆ 4:00 ಗಂಟೆಗೆ ಮುಖ್ಯ ಅಭಿಯಂತರರವರ ಕಚೇರಿ (ಪಶ್ಚಿಮ) ಇಲ್ಲಿ ನಡೆಸಲಾಗುವುದು. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 27-10-2021ರ ಮಧ್ಯಾಹ್ನ 12:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಭೇಟಿನೀಡಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಬಿಎಂಪಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23.
Phone No: 080-23295634, Email id: pdrch-hfws@karnataka.gov.in

ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

(1) Notification No. DD(MH)/23/2021-22 NRHM/2021-22/IND 260 Date: 23.09.2021
For Printing and Supply of Flipcharts, Posters, Logbooks and other materials concerning CCP under Mother Health Program, NHM.

(2) Notification No. DD(MH)/26/2021-22 NRHM/2021-22/IND 261 Date: 23.09.2021
For Printing and Supply of Protocols and Posters under Mother Health Program, NHM.

ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಅಧಿಸೂಚನೆ

(3) Notification No. HFW/UNIDO/43/2020-21 Date: 23.09.2021
For Supply of White Puncture Proof Containers and Color Coded Liners

ರಾಷ್ಟ್ರೀಯ ಆರೋಗ್ಯ ಅಭಿಯಾನದ ತಾಯಿ ಆರೋಗ್ಯ ಕಾರ್ಯಕ್ರಮದಡಿ ಮೇಲಿನವುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ 11:00 ರಿಂದ 17:30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್.)
DIPR/DDU/BCPL/1711/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ) ರವರ ಕಛೇರಿ ಕಾರ್ಯ ಮತ್ತು ಪಾಲನೆ ವೃತ್ತ, ಚಿಕ್ಕೋಡಿ–591201 ದೂ. ಸಂಖ್ಯೆ : 08338-275576, 08338-274576 ಇ–ಮೇಲ್ : seeckd.hescom@gmail.com,
Corporate Identity Number (CIN) : U31401KA2002SGC030437
ಕ್ರ.ಸಂ: ಚಿ/ಅಅ(ವಿ)/ಉಲೆನಿ/ಸಲೆ/ಸಿಸ(ಸಾ)/2021–22/2508 ದಿನಾಂಕ : 30.08.2021

ಪತ್ರಿಕಾ ಪ್ರಕಟಣೆ

ಶ್ರೀ ಎನ್. ಮಹಾಂತೇಶಕುಮಾರ, ದಫ್ತರಿ ಆದ ನೀವು ಹೆಸ್ಕಾಂ ಚಿಕ್ಕೋಡಿ ಕಾ ಮತ್ತು ಪಾ ಉಪ ವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ : 16.06.2020 ರಿಂದ ಕಛೇರಿ ಕೆಲಸಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ. ಅನಧಿಕೃತ ಗೈರು ಹಾಜರಾತಿ ಕುರಿತು ಕಛೇರಿ ಕರ್ತವ್ಯಕ್ಕೆ ಹಾಜರಾಗುವಂತೆ ಈ ಕಛೇರಿ ಪತ್ರ ಸಂಖ್ಯೆ: ಚಿ/ಅಅ(ವಿ)ಉಲೆನಿ/ಸಲೆ/ಸಿಸ/2021–22/2058–60 ದಿನಾಂಕ : 28.07.2021 ರಂದು ನೋಂದಣಿ ಅಂಚೆಯ ಮೂಲಕ ಕೆಲಸಕ್ಕೆ ಹಾಜರಾಗಲು ಜಾರಿ ಮಾಡಿದ ಅಂತಿಮ ನೋಟಿಸ್ ಪತ್ರವನ್ನು ನಿಮ್ಮ ಸೇವಾ ಪುಸ್ತಕದಲ್ಲಿ ನಮೂದಿಸಲಾದ **"ಮು/ಪೋ: S/o ಪಿ. ನಾಗಪ್ಪ #1.819/2, 3ನೇ ಅಡ್ಡರಸ್ತೆ, 1ನೇ 'ಎ' ಅಡ್ಡ ರಸ್ತೆ, ವಿನೋಬ ನಗರ, ದಾವಣಗೇರಿ ಜಿ: ದಾವಣಗೇರಿ"** ವಿಳಾಸಕ್ಕೆ ನೋಂದಾಯಿತ ಅಂಚೆ ಸ್ವೀಕೃತಿಯೊಂದಿಗೆ ಕಳುಹಿಸಲಾಗಿರುತ್ತದೆ. ಸದರಿ ನೋಟಿಸು ಅಂಚೆ ಇಲಾಖೆಯಿಂದ "No such addressee is found hence return to sender ಷರಾದೊಂದಿಗೆ ಈ ಕಛೇರಿಗೆ ಮರಳಿ ಬಂದಿರುತ್ತದೆ ಹಾಗೂ ಕರ್ತವ್ಯಕ್ಕೆ ಈ ವರೆಗೂ ಹಾಜರಾಗಿರುವುದಿಲ್ಲ.

ಆದ್ದರಿಂದ ನಿಮಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ಅಂತಿಮ ಅವಕಾಶವನ್ನು ನೀಡುತ್ತಾ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಈ ಕೆಳ ಸಹಿದಾರರಿಂದ ಉಲ್ಲೇಖಿತ ನೋಟಿಸ್ ಪತ್ರವನ್ನು ಪಡೆದು ಸದರಿ ನೋಟಿಸ್ ಪತ್ರದಲ್ಲಿನ ನಿಮ್ಮ ವಿರುದ್ಧದ ಆರೋಪಗಳಿಗೆ ನೀವು ಯಾವುದನ್ನು ಒಪ್ಪುತ್ತೀರಿ ಯಾವುದನ್ನು ನಿರಾಕರಿಸುತ್ತೀರಿ ಎಂಬುದಕ್ಕೆ ನಿಮ್ಮ ಸ್ಪಷ್ಟ ಲಿಖಿತ ಉತ್ತರವನ್ನು ಸಲ್ಲಿಸುವುದು. ತಪ್ಪಿದಲ್ಲಿ ನಿಮಗೆ ಕಂಪನಿ/ನಿಗಮದಲ್ಲಿ ಕಾರ್ಯನಿರ್ವಹಿಸಲು ಯಾವುದೇ ಆಸಕ್ತಿ ಇಲ್ಲವೆಂದು ಭಾವಿಸಿ ಪುನ: ಈ ಬಗ್ಗೆ ನಿಮಗೆ ಯಾವುದೇ ಸೂಚನೆ ನೀಡದೇ ನಿಮ್ಮ ಮೇಲೆ ಕ.ವಿ.ಪ್ರ.ನಿ.ನಿ. ನೌಕರರ (ವ.ಶಿ.ನಿ ಮತ್ತು ಮೇ) ನಿಯಮಗಳು 1987 ರ ನಿಬಂಧನೆ 11 ರನ್ವಯ ಸೇವೆಯಿಂದ ವಜಾಗೊಳಿಸಲು ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಸಹಿ/– ಅಧೀಕ್ಷಕ ಅಭಿಯಂತರರು (ವಿ)
ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ, ಚಿಕ್ಕೋಡಿ
ವಾಸಾಸಂಇ/ಧಾರವಾಡ/ಎಂಸಿಎ/541/2021–22

ತುರ್ತಾಗಿ ಕಸಿಗೆ ಎದುರು ನೋಡುತ್ತಿರುವವರ ಸಂಖ್ಯೆ ಏರುಗತಿ ● ಕೋವಿಡ್‌ನಿಂದ ಸಮರ್ಪಕವಾಗಿ ನಡೆಯದ ತಪಾಸಣೆ

ಹೃದಯಕ್ಕಾಗಿ ಮಿಡಿಯುತ್ತಿವೆ ನೂರಾರು ಜೀವ!

• ವರುಣ ಹೆಗಡೆ

ಬೆಂಗಳೂರು: ಒಂದೂವರೆ ವರ್ಷದಿಂದ ಅಂಗಾಂಗ ಕಸಿಗೆ ಕೋವಿಡ್ ಅಡ್ಡಿಪಡಿಸಿದ್ದು, ಹೃದಯ ಸಂಬಂಧಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಏರುಗತಿ ಪಡೆದಿದೆ. ತುರ್ತಾಗಿ 225 ಮಂದಿ ಹೃದಯ ಕಸಿಗೆ ಎದುರು ನೋಡುತ್ತಿದ್ದಾರೆ.

ರಾಜ್ಯ ಅಂಗಾಂಶ ಕಸಿ ಸಂಸ್ಥೆ (ಸೊಟೊ) ಅಡಿ 3 ಸಾವಿರಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಕಳೆದ ವರ್ಷ 8 ಮಂದಿಗೆ ಹಾಗೂ ಈ ವರ್ಷ ಒಂಬತ್ತು ತಿಂಗಳಲ್ಲಿ 13 ಮಂದಿಗೆ ಮಾತ್ರ ಹೃದಯ ಕಸಿ ಮಾಡಲಾಗಿದೆ. ಕೋವಿಡ್ ಪೂರ್ವದಲ್ಲಿ ಪ್ರತಿ ವರ್ಷ ನೂರಕ್ಕೂ ಅಧಿಕ ಮಂದಿಗೆ ಕಸಿ ಮಾಡಲಾಗುತ್ತಿತ್ತು.

ಕೋವಿಡ್ ಕಾಣಿಸಿಕೊಂಡ ಬಳಿಕ ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಇದರಿಂದ ಸೊಟೊ ಅಡಿ ತುರ್ತಾಗಿ ಹೃದಯಕ್ಕೆ ಹೆಸರು ನೋಂದಾಯಿಸಿದವರೂ ಹಲವು ತಿಂಗಳಿನಿಂದ ಕಸಿಗಾಗಿ ಕಾಯುತ್ತಿದ್ದಾರೆ.

ವಾಯುಮಾಲಿನ್ಯವೂ ಹೃದಯ ಸಮಸ್ಯೆ ಉಂಟುಮಾಡುತ್ತಿದೆ. ಪುರುಷರು 35 ಹಾಗೂ ಮಹಿಳೆಯರು 40 ವರ್ಷಗಳು ದಾಟಿದ ಬಳಿಕ ನಿಯಮಿತವಾಗಿ ಹೃದಯ ಪರೀಕ್ಷೆ ಮಾಡಿಸಿಕೊಳ್ಳಬೇಕು

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ನಿಯಮಿತ ವ್ಯಾಯಾಮ ಹಾಗೂ ಉತ್ತಮ ಜೀವನಶೈಲಿಯಿಂದ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಯುವಜನರಲ್ಲಿಯೂ ಹೆಚ್ಚಾಗಿ ಹೃದಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ

ಡಾ.ಕೆ.ಪಿ. ಶ್ರೀಹರಿ ದಾಸ್, ಮಣಿಪಾಲ್ ಆಸ್ಪತ್ರೆಯ ಹೃದ್ರೋಗ ತಜ್ಞ

ಹೃದ್ರೋಗ ಸೇರಿದಂತೆ ವಿವಿಧ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆ ಹಾಗೂ ಚಿಕಿತ್ಸೆಗೆ ರಾಜ್ಯದಲ್ಲಿ 273 ಸಾಂಕ್ರಾಮಿಕವಲ್ಲದ ರೋಗ ಕ್ಲಿನಿಕ್‌ಗಳು (ಎನ್‌ಸಿಡಿ) ಕಾರ್ಯನಿರ್ವಹಿಸುತ್ತಿವೆ. ಕೋವಿಡ್ ಪೂರ್ವದಲ್ಲಿ ಪ್ರತಿ ವರ್ಷ ಈ ಕ್ಲಿನಿಕ್‌ಗಳಲ್ಲಿ 30 ಲಕ್ಷಕ್ಕೂ ಅಧಿಕ ಮಂದಿಗೆ ತಪಾಸಣೆ ನಡೆಸಿ, ರೋಗ ಪತ್ತೆ ಮಾಡಲಾಗಿತ್ತು.

ಕೋವಿಡ್ ಕಾಣಿಸಿಕೊಂಡ ಬಳಿಕ ಈ ಕ್ಲಿನಿಕ್‌ಗಳಿಗೆ ಬರುವವರ ಸಂಖ್ಯೆ ಶೇ 50ರಷ್ಟು ಇಳಿಕೆಯಾಗಿದೆ.

ಲಾಕ್‌ಡೌನ್ ಅವಧಿಯಲ್ಲಿ ಪರೀಕ್ಷೆ ಹಾಗೂ ತಪಾಸಣೆ ನಡೆದಿಲ್ಲ. ಇದರಿಂದಾಗಿ ಚಿಕಿತ್ಸೆ ಪಡೆದವರ ಸಮಗ್ರ ಮಾಹಿತಿ ಆರೋಗ್ಯ ಇಲಾಖೆ ಬಳಿ ಇಲ್ಲದಂತಾಗಿದೆ.

ಹೃದಯ ಸಮಸ್ಯೆ ಪತ್ತೆ: ಕೋವಿಡ್‌ನಿಂದ ಮೃತಪಟ್ಟವರಲ್ಲಿ ಶೇ 80ಕ್ಕೂ ಅಧಿಕ ಮಂದಿ ಹೃದಯ, ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ವಿವಿಧ ಸಾಂಕ್ರಾಮಿಕವಲ್ಲದ ರೋಗಗಳನ್ನು ಎದುರಿಸುತ್ತಿದ್ದವರಾಗಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕವೂ ವೈರಾಣು ಈ ಮೊದಲು ಉಂಟುಮಾಡಿದ ನಕಾರಾತ್ಮಕ ಪರಿಣಾಮಗಳಿಂದ ಕೆಲವರಿಗೆ ರಕ್ತವು ಹೆಪ್ಪುಗಟ್ಟಿ, ಹೃದಯಾಘಾತ ಸಂಭವಿಸುವ ಸಾಧ್ಯತೆ ಇರುತ್ತದೆ ಎನ್ನುವುದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

‘ಬದಲಾದ ಜೀವನಶೈಲಿ ಸೇರಿದಂತೆ ವಿವಿಧ ಕಾರಣಗಳಿಂದ ಹೃದಯ ಸಂಬಂಧಿ ಅನಾರೋಗ್ಯ ಸಮಸ್ಯೆಗೆ ಒಳಪಡುವವರ ಸಂಖ್ಯೆ ಏರುಗತಿ ಕಂಡಿದೆ. ಇತ್ತೀಚಿನ ವರ್ಷಗಳಲ್ಲಿ 20 ರಿಂದ 40 ವರ್ಷದವರೂ ಹೆಚ್ಚಾಗಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. ಪ್ರಸ್ತುತ ನಗರ ಪ್ರದೇಶದಲ್ಲಿ ಹೃದಯಾಘಾತದ ಪ್ರಮಾಣ ಶೇ 10ರಷ್ಟು ಇದೆ. ಈ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ 6ರಷ್ಟು ಇದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

‘ಕೋವಿಡ್‌ನಿಂದಾಗಿ ಈ ಬಾರಿ ಹೃದಯ ತಪಾಸಣೆ ಮಾಡಿಸಿಕೊಂಡವರ ಹಾಗೂ ಚಿಕಿತ್ಸೆ ಪಡೆದವರ ಸಮಗ್ರ ದಾಖಲಾತಿ ದೊರೆಯಲಿಲ್ಲ. ಹೃದಯ ಕಾಯಿಲೆಗಳ ಬಗ್ಗೆ ಜನ ಎಚ್ಚರದಿಂದ ಇರಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಶ್ವ ಹೃದಯ ದಿನ

ಹೃದಯಾಘಾತಕ್ಕೆ ಕಾರಣಗಳು

- ಅನಾರೋಗ್ಯಕರ ಆಹಾರ ಪದ್ಧತಿ
- ಜೀವನಶೈಲಿಯಲ್ಲಿನ ಬದಲಾವಣೆ
- ಮದ್ಯಪಾನ, ಧೂಮಪಾನದಂತಹ ವ್ಯಸನಗಳು
- ಮಾನಸಿಕ ಒತ್ತಡ
- ಪರಿಸರದಲ್ಲಿನ ಮಾಲಿನ್ಯ

ಹೃದಯಾಘಾತದ ಲಕ್ಷಣಗಳು

- ಹಠಾತ್ ಎದೆನೋವು, ಉಸಿರಾಟದಲ್ಲಿ ತೊಂದರೆ
- ಅತಿಯಾಗಿ ಬೆವರುತ್ತಿರುವುದು
- ಅಜೀರ್ಣ, ವಾಂತಿ
- ಹಸಿವಾಗದಿರುವುದು
- ದವಡೆಯಲ್ಲಿ ನೋವು
- ನಿದ್ರಾಹೀನತೆ ಸಮಸ್ಯೆ
- ತಾತ್ಕಾಲಿಕ ಪ್ರಜ್ಞಾಹೀನರಾಗುವುದು

ಅನಿವಾರ್ಯ ಇರಲಿಲ್ಲ; ಹೋಗಲಿಲ್ಲ: ಶೆಟ್ಟರ್

‘ಜಾತಿ ಜನಗಣತಿವರದಿಯಲ್ಲಿ ಸಿದ್ದರಾಮಯ್ಯ ವಹಿಸಿರುವ ಪಾತ್ರ ಕುರಿತು ಪ್ರತ್ಯೇಕವಾಗಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡುವೆ’

‘ಬಸವರಾಜ ಬೊಮ್ಮಾಯಿ ಜೊತೆ ಮುನಿಸಿಲ್ಲ’

ಹುಬ್ಬಳ್ಳಿ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಯಾವುದೇ ರೀತಿಯ ಮುನಿಸು ಇಲ್ಲ. ಹುಬ್ಬಳ್ಳಿಯಲ್ಲಿ ನಡೆದ ಸಿ.ಎಂ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಲೇಬೇಕಾದ ಅನಿವಾರ್ಯ ಇರಲಿಲ್ಲ. ಹೋಗಲಿಲ್ಲ’ ಎಂದು ಶಾಸಕ ಜಗದೀಶ ಶೆಟ್ಟರ್ ಸ್ಪಷ್ಟಪಡಿಸಿದರು.



ಹುಬ್ಬಳ್ಳಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೊಮ್ಮಾಯಿ ಅವರೊಂದಿಗೆ ಅಂತರ ಕಾಯ್ದುಕೊಂಡಿಲ್ಲ. ಇದಕ್ಕೆ ಬೇರೆ ಅರ್ಥ ಕಲ್ಪಿಸಬಾರದು. ಬೆಳಗಾವಿಯಲ್ಲಿ ಈಚೆಗೆ ನಡೆದ ಸುರೇಶ ಅಂಗಡಿ ಅವರ ಸ್ಮರಣೆ ಕಾರ್ಯಕ್ರಮ ಹಾಗೂ ಅಮಿತ್ ಶಾ ಅವರ ಭೇಟಿ ಸಂದರ್ಭದಲ್ಲೂ ಒಟ್ಟಿಗೆ ಇದ್ದೆವು’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂಗಿತ

ಮತಾಂತರ ನಿಷೇಧಕ್ಕೆ ಕಾಯ್ದೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸೆ– ಆಮಿಷಗಳನ್ನು ಒಡ್ಡಿ ಅಥವಾ ಬಲವಂತವಾಗಿ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವುದನ್ನು ನಿಷೇಧಕ್ಕಾಗಿ ಕಾಯ್ದೆ ರೂಪಿಸಲು ಚಿಂತನೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಯಾದಗಿರಿ ಜಿಲ್ಲೆಯಲ್ಲಿ ಮತಾಂತರ ನಡೆಸಿರುವ ವಿಚಾರವು ಗಮನಕ್ಕೆ ಬಂದಿದೆ. ಈ ಬಗ್ಗೆ ಗಮನ ಹರಿಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ’ ಎಂದು ಅವರು ಸುದ್ದಿಗಾರರಿಗೆ ಮಂಗಳವಾರ ಹೇಳಿದರು.

‘ಸ್ವ ಇಚ್ಛೆಯಿಂದ ಮತಾಂತರಕ್ಕೆ ಅವಕಾಶವಿದೆ. ಆದರೆ, ಹಣ ಮತ್ತು ಇನ್ನಿತರ ರೀತಿಯ ಆಮಿಷಗಳನ್ನು ಒಡ್ಡಿ ಮತಾಂತರ ನಡೆಸುತ್ತಿರುವ ಪ್ರಕರಣಗಳು ಅಲ್ಲಲ್ಲಿ ನಡೆಯುತ್ತಿವೆ. ಕಲಬುರ್ಗಿ ಮತ್ತಿತ್ತರ ಕಡೆಗಳಲ್ಲಿ



ಭೇಟಿ ನೀಡಿದಾಗ ಮತಾಂತರ ಮಾಡುತ್ತಿರುವ ಆರೋಪಗಳು ಕೇಳಿ ಬಂದಿವೆ. ಪದೇ ಪದೇ ಈ ವಿಚಾರ ಕೇಳಿ ಬರುತ್ತಿರುವ ಕಾರಣದಿಂದ ಶಾಶ್ವತವಾಗಿ ಕಡಿವಾಣ ಹಾಕಲು ಚಿಂತನೆ ನಡೆಸಲಾಗಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಮಾತನಾಡಿದ್ದ ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್, ‘ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಮಂದಿ ಮತಾಂತರ ಆಗಿದ್ದಾರೆ. ನನ್ನ ತಾಯಿ ಸಹ ಮತಾಂತರಗೊಂಡಿದ್ದಾರೆ. ಕುಂಕುಮ ಇಡಬಾರದು ಹಾಗೂ ದೇವರ ಫೋಟೋ ಇಡಬಾರದು ಎಂದು ಅವರ ಬ್ರೈನ್ ವಾಶ್ ಮಾಡಲಾಗಿದೆ. ಇದು ಸರಿಯಲ್ಲ ಎಂದು ಕಿವಿಮಾತು ಹೇಳಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಾಯಿ ಬೆದರಿಕೆ ಹಾಕುತ್ತಿದ್ದಾರೆ. ಈ ಬೆಳವಣಿಗೆಯಿಂದ ಇಡೀ ಕುಟುಂಬ ಮುಜುಗರ ಅನುಭವಿಸುವಂತಾಗಿದೆ’ ಎಂದು ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಜ್ಞಾನೇಂದ್ರ, ‘ರಾಜ್ಯದಲ್ಲಿ ಬಲವಂತದ ಮತಾಂತರಕ್ಕೆ ಅವಕಾಶವಿಲ್ಲ. ಆಮಿಷವೊಡ್ಡಿ ಮತಾಂತರ ಮಾಡುವುದು ಕಾನೂನಿಗೆ ವಿರುದ್ಧವಾದುದು’ ಎಂದು ತಿಳಿಸಿದ್ದರು.

ಮತಾಂತರಕ್ಕೆ ಯತ್ನ; ನಾಲ್ವರ ಬಂಧನ

ಸೈದಾಪುರ (ಯಾದಗಿರಿ ಜಿಲ್ಲೆ): ಸಮೀಪದ ನೀಲಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಸಮುದಾಯದ ಜನರ ಬಲವಂತದ ಮತಾಂತರಕ್ಕೆ ಯತ್ನಿಸಿದ ಆರೋಪದಡಿ ನಾಲ್ವರನ್ನು ಸೈದಾಪುರ ಪೊಲೀಸರು ಬಂಧಿಸಿದ್ದಾರೆ.

‘ಕ್ರೈಸ್ತ ಪಾದ್ರಿ ಜೇಮ್ಸ್ ಡೇವಿಡ್ ದಾಸ್ ಮಾಧ್ವಾರ, ಶಾಂತರಾಜ ಜೇಮ್ಸ್ ದಾಸ್, ನೀಲಮ್ಮ ಜೇಮ್ಸ್‌ದಾಸ್, ಮಾಳಮ್ಮ ರಾಘವೇಂದ್ರ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಸಿಪಿಐ ವಿಜಯ ಕುಮಾರ ತಿಳಿಸಿದ್ದಾರೆ.

ಆರೋಪಿಗಳು ಭಾನುವಾರ (ಸೆ.26)ರಂದು ನೀಲಹಳ್ಳಿ ಗ್ರಾಮದಲ್ಲಿ ಮತಾಂತರಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಿ ನರಸಪ್ಪ ಭೀಮರಾಯ ಜೇಗರ ದೂರು ನೀಡಿದ್ದರು ಎಂದು ಪಿಎಸ್‌ಐ ಭೀಮರಾಯ ಬಂಕ್ಲಿ ತಿಳಿಸಿದ್ದಾರೆ.

ವಿಐಟಿ 36ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೋರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ವಿಐಟಿ) 36ನೇ ವಾರ್ಷಿಕ ಘಟಿಕೋತ್ಸವ ವರ್ಚುವಲ್ ವ್ಯವಸ್ಥೆ ಮೂಲಕ ಮಂಗಳವಾರ ನಡೆಯಿತು.

ಘಟಿಕೋತ್ಸವ ಭಾಷಣ ಮಾಡಿದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)–ಮದ್ರಾಸ್ ನಿರ್ದೇಶಕ ಪ್ರೊ. ಭಾಸ್ಕರ್ ರಾಮಮೂರ್ತಿ ಅವರು, ’ವಿದ್ಯಾರ್ಥಿಗಳು ಆಳವಾದ ಅಧ್ಯಯನ ಕೈಗೊಳ್ಳಬೇಕು. ಮುಂದಿನ ಮೂವತ್ತು ವರ್ಷಗಳಲ್ಲಿ ದೇಶದಲ್ಲಿ ಅಪಾರ ಬದಲಾವಣೆಗಳಾಗಲಿವೆ. ಈ ಬದಲಾವಣೆಗಳನ್ನು ಅವಕಾಶಗಳನ್ನಾಗಿ ಬಳಸಿಕೊಳ್ಳಲು ವಿದ್ಯಾರ್ಥಿಗಳು ಸಜ್ಜಾಗಬೇಕು’ ಎಂದು ಹೇಳಿದರು.

ಅಧ್ಯಕ್ಷೀಯ ಭಾಷಣ ಮಾಡಿದ ವಿಐಟಿ ಸಂಸ್ಥಾಪಕ ಮತ್ತು ಕುಲಪತಿ ಡಾ. ಜಿ. ವಿಶ್ವನಾಥನ್ ಅವರು, ‘ದೇಶದಲ್ಲಿರುವ 14 ಕೋಟಿ ಯುವಕರಲ್ಲಿ ಕೇವಲ 4 ಕೋಟಿ ಯುವಕರಿಗೆ ಉನ್ನತ ಶಿಕ್ಷಣ ಪಡೆಯುವ ಅವಕಾಶ ದೊರೆಯುತ್ತಿದೆ’ ಎಂದರು.

ಕುಲಪತಿ ಡಾ. ಜಿ. ವಿಶ್ವನಾಥನ್

ಪ್ರೊ. ಭಾಸ್ಕರ್ ರಾಮಮೂರ್ತಿ

‘ದೇಶದಲ್ಲಿ ಉನ್ನತ ಶಿಕ್ಷಣವು ನಿರೀಕ್ಷಿತ ಪ್ರಗತಿ ಸಾಧಿಸಿಲ್ಲ. ಹಣಕಾಸು ಮತ್ತು ಪ್ರಾಧ್ಯಾಪಕರ ಕೊರತೆ ಹಾಗೂ ಉದ್ಯಮಗಳ ಜತೆ ಸಂಪರ್ಕ ಸಾಧಿಸದಿರುವುದು ಸೇರಿದಂತೆ ಹಲವಾರು ಕಾರಣಗಳಿಂದ ಈ ಕ್ಷೇತ್ರದ ಪ್ರಗತಿ ಕುಂಠಿತವಾಗಿದೆ. ಜಪಾನ್, ಚೀನಾ, ದಕ್ಷಿಣ ಕೊರಿಯಾ ಅತ್ಯುತ್ತಮ ಉನ್ನತ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿವೆ’ ಎಂದು ವಿವರಿಸಿದರು.

‘ಕಳೆದ ವರ್ಷ 844 ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು ವಿಐಟಿ ಕ್ಯಾಂಪಸ್ ಪ್ಲೇಸ್‌ಮೆಂಟ್‌ನಲ್ಲಿ ಭಾಗಿಯಾಗಿದ್ದವು’ ಎಂದು ತಿಳಿಸಿದರು.

ವಿವಿಧ ವಿಷಯಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸಿದ 7569 ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಪದವಿ ಪ್ರದಾನ ಮಾಡಲಾಯಿತು.

ಉಪ ಚುನಾವಣೆ: ಅಭ್ಯರ್ಥಿ ಆಯ್ಕೆಗೆ ಕಸರತ್ತು

ಒಂದನೇ ಪುಟದಿಂದ

ಹಾನಗಲ್ ಕ್ಷೇತ್ರದಿಂದ ಸ್ಪರ್ಧಿಸಲು ಸಿ.ಎಂ.ಉದಾಸಿ ಅವರ ಪುತ್ರ ಶಿವಕುಮಾರ್ ಉದಾಸಿಗೆ ಆಸಕ್ತಿ ಇದ್ದರೂ, ಲೋಕಸಭಾ ಸದಸ್ಯರಾಗಿರುವುದರಿಂದ ಅವರನ್ನು ಕಣಕ್ಕೆ ಇಳಿಸುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ನಯಾಜ್ ಅವರನ್ನು ಕಣಕ್ಕೆ ಇಳಿಸುವುದಾಗಿ ಜೆಡಿಎಸ್ ಘೋಷಿಸಿದೆ.

ಹಾನಗಲ್ ಕ್ಷೇತ್ರಕ್ಕೆ ಕಾಂಗ್ರೆಸ್ ಇನ್ನೂ ತನ್ನ ಅಭ್ಯರ್ಥಿಯನ್ನು ಅಂತಿಮಗೊಳಿಸಿಲ್ಲ. ಆದರೆ, ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದ ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ ಮಾನೆ ಪ್ರಬಲ ಟಿಕೆಟ್ ಆಕಾಂಕ್ಷಿ ಆಗಿದ್ದಾರೆ. 2018ರ ಚುನಾವಣೆ ಸಂದರ್ಭದಲ್ಲಿ ಹಾಲಿ ಶಾಸಕರಾಗಿದ್ದರೂ ಕಾಂಗ್ರೆಸ್ ಟಿಕೆಟ್ ವಂಚಿತರಾಗಿದ್ದ ಮಾಜಿ ಸಚಿವ ಮನೋಹರ ತಹಶೀಲ್ದಾರ, ಪ್ರಕಾಶಗೌಡ ಪಾಟೀಲ ಸೇರಿದಂತೆ ಇನ್ನೂ ಕೆಲವರು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಸಿಂಧಗಿಯಲ್ಲಿ ಎಂ.ಸಿ.ಮನಗೂಳಿ ಅವರ ಪುತ್ರ ಅಶೋಕ ಮನಗೂಳಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದು, ಅವರನ್ನೇ ಕಣಕ್ಕಿಳಿಸುವುದಾಗಿ ಆ ಪಕ್ಷ ಘೋಷಿಸಿದೆ. ಬಿಜೆಪಿಯಿಂದ ಕಳೆದ ಬಾರಿ ಸ್ಪರ್ಧಿಸಿ ಅಲ್ಪ ಮತಗಳ ಅಂತರದಲ್ಲಿ ಸೋತಿದ್ದ ರಾಜಶೇಖರ್ ಭೂಸನೂರುಮಠ ಅವರು ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಅ.30ರಂದು ಉಪಚುನಾವಣೆ

ನವದೆಹಲಿ: ಶಾಸಕರಾಗಿದ್ದ ಎಂ.ಸಿ. ಮನಗೂಳಿ ಹಾಗೂ ಸಿ.ಎಂ. ಉದಾಸಿ ಅವರ ನಿಧನದಿಂದ ತೆರವಾಗಿರುವ ರಾಜ್ಯದ ಸಿಂದಗಿ ಹಾಗೂ ಹಾನಗಲ್ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆ ಅಕ್ಟೋಬರ್ 30ರಂದು ನಡೆಯಲಿದೆ.

ಅ. 1ರಂದು ಉಪಚುನಾವಣೆಯ ಅಧಿಸೂಚನೆ ಹೊರಬೀಳಲಿದ್ದು, ಅ. 8 ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದೆ.

ಅ. 11ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅ. 13 ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆ ದಿನವಾಗಿದೆ. ಅ. 30ರಂದು ಮತದಾನ ನಡೆಯಲಿದ್ದು, ನವೆಂಬರ್ 2ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

ರಾಜ್ಯದ ಈ ಎರಡು ವಿಧಾನಸಭೆ ಕ್ಷೇತ್ರಗಳಲ್ಲದೆ, ರಾಷ್ಟ್ರದ ವಿವಿಧೆಡೆ ತೆರವಾಗಿರುವ ಇತರ 28 ವಿಧಾನಸಭೆ ಕ್ಷೇತ್ರಗಳು ಹಾಗೂ ಮೂರು ಲೋಕಸಭೆ (ಮಧ್ಯಪ್ರದೇಶದ ಖಾಂಡ್ವಾ, ಹಿಮಾಚಲ ಪ್ರದೇಶದ ಮಂಡಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ದಾದರ್ ಮತ್ತು ನಗರ್ ಹವೇಲಿ) ಕ್ಷೇತ್ರಗಳಿಗೂ ಇದೇ ಅವಧಿಯಲ್ಲಿ ಉಪ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ನಿರ್ಧರಿಸಿದೆ.

ಸಿಂದಗಿ ಶಾಸಕರಾಗಿದ್ದ ಎಂ.ಸಿ. ಮನಗೂಳಿ 2021ರ ಜನವರಿ 28ರಂದು ಹಾಗೂ ಹಾನಗಲ್ ಶಾಸಕರಾಗಿದ್ದ ಸಿ.ಎಂ. ಉದಾಸಿ ಅವರು 2021ರ ಜೂನ್ 9ರಂದು ನಿಧನರಾಗಿದ್ದರಿಂದ ಉಪ ಚುನಾವಣೆ ನಿಗದಿಯಾಗಿದೆ.

ತಪ್ಪೆಸಗುವ ಪೊಲೀಸರ ವಿರುದ್ಧ ದೂರು ನೀಡುವ ವ್ಯವಸ್ಥೆ ಶೀಘ್ರ ಜಾರಿ: ಆರಗ

ಪ್ರತಿ ಠಾಣೆಗೆ 3 ಮಹಿಳಾ ಸಿಬ್ಬಂದಿ ನಿಯೋಜನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕರ್ತವ್ಯಲೋಪ ಎಸಗುವ ಪೊಲೀಸರ ವಿರುದ್ಧ ದೂರು ನೀಡಲು ಐಜಿಪಿ ಕಚೇರಿ ಮತ್ತು ರಾಜ್ಯದ ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಸಹಾಯವಾಣಿ ತೆರೆಯಲಾಗುವುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ನಗರದ ಪೊಲೀಸ್ ತರಬೇತಿ ಶಾಲೆಯಲ್ಲಿ ಮಂಗಳವಾರ ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥಸಂಚಲನದಲ್ಲಿ ಪಾಲ್ಗೊಂಡು ಮಾತನಾಡಿ, ‘ಪೊಲೀಸ್ ಠಾಣೆಗಳಲ್ಲಿ ಅಪರಾಧ ನಡೆದ ಕೆಲವು ಉದಾಹರಣೆಗಳಿವೆ. ಸಾರ್ವಜನಿಕರ ದೂರು ಸ್ವೀಕರಿಸದೇ ಇರುವುದು, ದೂರುದಾರರನ್ನು ಬೆದರಿಸುವ ಘಟನೆಗಳು ನಡೆದಿವೆ. ಈ ಸಮಸ್ಯೆ ನೀಗಿಸಲು ಎರಡು ಸಹಾಯವಾಣಿ ಆರಂಭಿಸಲಾಗುವುದು. ಪೊಲೀಸರ ವಿರುದ್ಧವೂ ಸಾರ್ವಜನಿಕರು ಧೈರ್ಯದಿಂದ ದೂರು ನೀಡುವಂತಾಗಬೇಕು’ ಎಂದರು.

ಶೇ 25ಕ್ಕೆ ಹೆಚ್ಚಿಸಲು ಕ್ರಮ: ‘ಪ್ರತಿ 100 ಪೊಲೀಸರಿಗೆ 25 ಮಹಿಳಾ ಸಿಬ್ಬಂದಿ ಇರಬೇಕು. ರಾಜ್ಯದಲ್ಲಿ ಈಗ ಶೇ 10 ರಷ್ಟು ಇದ್ದಾರೆ. ಅದನ್ನು ಕ್ರಮೇಣ ಶೇ 25ಕ್ಕೆ ಹೆಚ್ಚಿಸಲಾಗುತ್ತದೆ.

ದತ್ತಪೀಠದಲ್ಲಿ ಅರ್ಚಕರ ನೇಮಕಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪನ್ನು ಪಾಲಿಸುತ್ತೇವೆ. ಅಲ್ಲಿ ಕಾನೂನು, ಸುವ್ಯವಸ್ಥೆ ಕಾಪಾಡುತ್ತೇವೆ.

ಆರಗ ಜ್ಞಾನೇಂದ್ರ, ಗೃಹ ಸಚಿವ

ಪ್ರತಿ ಠಾಣೆಯಲ್ಲಿ ಕನಿಷ್ಠ ಮೂವರು ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿಯೋಜನೆಗೆ ಕ್ರಮವಹಿಸಲಾಗಿದೆ’ ಎಂದರು.

250 ಎಸ್‌ಒಸಿಒ ನೇಮಕ: ‘ರಾಜ್ಯದ ಎಲ್ಲಾ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು(ಎಫ್‌ಎಸ್‌ಎಲ್) ಬಲಪಡಿಸಲಾಗುವುದು. ಅಪರಾಧ ನಡೆದ ಸ್ಥಳದಿಂದ ವೈಜ್ಞಾನಿಕವಾಗಿ ಸಾಕ್ಷ್ಯಗಳನ್ನು ಸಂಗ್ರಹಿಸಲು 250 ಸೀನ್ ಆಫ್ ಕ್ರೈಮ್ ಆಫೀಸರ್(ಎಸ್‌ಒಸಿಒ) ನೇಮಕ ಮಾಡಿಕೊಳ್ಳಲಾಗುವುದು. ಪ್ರಸ್ತುತ ಆ ಕೆಲಸವನ್ನು ತರಬೇತಿ ಪಡೆದ ಪೊಲೀಸರು ಮಾಡುತ್ತಿದ್ದು, ಇನ್ನಷ್ಟು ಸುಧಾರಣೆ ತರಲು ತಜ್ಞರನ್ನು ನಿಯೋಜಿಸಿಕೊಳ್ಳಲಾಗುವುದು. ಇದು ದೇಶದಲ್ಲೇ ಮೊದಲು’ ಎಂದು ನುಡಿದರು.

ಅನೈತಿಕ ಪೊಲೀಸ್‌ಗಿರಿ–ಕ್ರಮ: ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, ‘ಬೆಂಗಳೂರು ಮತ್ತು ಮಂಗಳೂರಿನಲ್ಲಿ ನಡೆದಿರುವ ಅನೈತಿಕ ಪೊಲೀಸ್‌ಗಿರಿ ಪ್ರಕರಣಗಳ ಬಗ್ಗೆ ವಿಶೇಷ ಗಮನ ವಹಿಸಲಾಗಿದೆ. ಅಂಥ ಘಟನೆಗಳು ಮರುಕಳಿಸಿದಂತೆ ಎಚ್ಚರ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು’ ಎಂದರು.

‘ಔರಾದ್ಕರ್ ವರದಿಯಿಂದ ಈಗಾಗಲೇ ಶೇ. 80 ರಷ್ಟು ಸಿಬ್ಬಂದಿಗೆ ಅನುಕೂಲವಾಗಿದೆ. ಆದರೆ, ಆರ್ಥಿಕ ಸೌಲಭ್ಯದ ಲಾಭ ಹೊಸಬರಿಗೆ ಮಾತ್ರ ಸಿಗುತ್ತಿದ್ದು, ಹಳಬರಿಗೆ ಲಭಿಸಿಲ್ಲ. ಈ ತಾರತಮ್ಯ ಸರಿಪಡಿಸಲು, ಹಳಬರಿಗೆ ಹೆಚ್ಚುವರಿ ಭತ್ಯೆ ಸೇರಿ ಇನ್ನಿತರ ಸೌಲಭ್ಯ ನೀಡಲಾಗುತ್ತಿದೆ’ ಎಂದರು.

ಸಚಿವರ ಮನವಿ: ಪಾದಯಾತ್ರೆ ರದ್ದು

ಮೈಸೂರು: ಮಹದೇವಮ್ಮ ದೇವಾಲಯ ಒಡೆದಿರುವುದನ್ನು ಖಂಡಿಸಿ ನಂಜನಗೂಡಿನ ಉಚ್ಚಗಣಿಯಿಂದ ವಿಧಾನಸೌಧಕ್ಕೆ ಪಾದಯಾತ್ರೆ ಕೈಗೊಂಡಿದ್ದ ಹಿಂದೂ ಜಾಗರಣ ವೇದಿಕೆಯು ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಕೋರಿಕೆಯಿಂದ ಹೋರಾಟ ಕೈಬಿಟ್ಟಿದೆ.

ನಗರದ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಮಂಗಳವಾರ ಜಮಾಯಿಸಿದ ವೇದಿಕೆಯ ಕಾರ್ಯಕರ್ತರು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಆಗ ಸ್ಥಳಕ್ಕೆ ಬಂದ ಆರಗ ಜ್ಞಾನೇಂದ್ರ, ಪಾದಯಾತ್ರೆ ಕೈಬಿಡುವಂತೆ ವೇದಿಕೆಯ ಸಂಚಾಲಕ ಜಗದೀಶ್ ಕಾರಂತ್ ಅವರ ಮನವೊಲಿಸಿದರು.

‘ಕೋರ್ಟ್ ತೀರ್ಪನ್ನು ತಪ್ಪಾಗಿ ಗ್ರಹಿಸಿ ದೇಗುಲ ತೆರವುಗೊಳಿಸಲಾಗಿದೆ. ಅದಕ್ಕಾಗಿ ತಹಶೀಲ್ದಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ದೇವಾಲಯಗಳ ಸಂರಕ್ಷಣೆಗಾಗಿ ವಿಧಾನಸಭೆಯಲ್ಲಿ ಚರ್ಚೆ ನಡೆದಿದ್ದು, ಮಸೂದೆ ಮಂಡನೆಯಾಗಿದೆ. ಪವಿತ್ರ ಸ್ಥಳಗಳನ್ನು ರಕ್ಷಿಸುವಲ್ಲಿ ಸರ್ಕಾರ ಬದ್ಧವಾಗಿದೆ. ನಿಮ್ಮ ಮಾರ್ಗದರ್ಶನ, ಸಲಹೆಗಳನ್ನು ಸರ್ಕಾರ ಕೇಳುತ್ತದೆ. ಹೋರಾಟವನ್ನು ಕೈ ಬಿಡಬೇಕು’ ಎಂದು ಸಚಿವ ಒತ್ತಾಯಿಸಿದರು.

‘ಸಚಿವರ ಭರವಸೆ ಹಿನ್ನೆಲೆಯಲ್ಲಿ ಪಾದಯಾತ್ರೆ ಕೈಬಿಡಲಾಗಿದೆ’ ಎಂದು ವೇದಿಕೆಯ ವಿಭಾಗದ ಅಧ್ಯಕ್ಷ ಲೋಹಿತ್ ಅರಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಜಾತಿಗಣತಿ ವರದಿ: ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿಕೆ

‘ಕಾನೂನು ತೊಡಕು ನಿವಾರಿಸಿ ವರದಿ ಸಲ್ಲಿಕೆ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಗೆ (ಜಾತಿವಾರು ಜನಗಣತಿ) ಸಂಬಂಧಿಸಿದಂತೆ ಎದುರಾಗಿರುವ ಕಾನೂನು ತೊಡಕು ನಿವಾರಿಸಿದ ನಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರದಿಯನ್ನು ಸುಮ್ಮನೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ವರದಿ ವ್ಯರ್ಥವೂ ಆಗಬಾರದು. ಕಾನೂನಿನ ತೊಡಕು ಏನಿದೆಯೊ ಅದನ್ನು ಪರಿಹರಿಸಿಕೊಳ್ಳುತ್ತೇವೆ ಎಂದರು.

ಯಾವುದೇ ವರದಿ ಸಿದ್ಧಪಡಿಸಿದರೂ ಅಧ್ಯಕ್ಷರು, ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿ ಸಹಿ ಹಾಕಬೇಕು. ಜಾತಿವಾರು ಜನಗಣತಿ ಕೊನೆಯ ವರದಿಗೆ ಸದಸ್ಯ ಕಾರ್ಯದರ್ಶಿ ಸಹಿ ಹಾಕಿಲ್ಲ. ಅಂದಿನ ವರದಿಗೆ ಇಂದಿನ ಸದಸ್ಯ ಕಾರ್ಯದರ್ಶಿ ಹೇಗೆ ಸಹಿ ಹಾಕಲು ಸಾಧ್ಯ ಎನ್ನುವ ಪ್ರಶ್ನೆ ಎದುರಾಗುತ್ತದೆ. ಅದನ್ನು ಕಾನೂನಿನಲ್ಲಿ ಅಧಿಕೃತಗೊಳಿಸಲು ಸಾಧ್ಯವೇ ಎನ್ನುವ



ಪ್ರಶ್ನೆ ಬರುತ್ತದೆ. ಈ ಎಲ್ಲ ವಿಚಾರಗಳ ಬಗ್ಗೆಯೂ ಚರ್ಚೆ ಆಗುತ್ತಿದೆ ಎಂದು ಹೇಳಿದರು.

ಕೋವಿಡ್ ಕಾರಣದಿಂದ ಕ್ಷೇತ್ರ ಅಧ್ಯಯನ ಸಾಧ್ಯವಾಗಿಲ್ಲ. ಇನ್ನು ಮುಂದೆ ಪಂಚಮಸಾಲಿ ಸಮುದಾಯದ ಸಾಮಾಜಿಕ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಿಳಿಯಲು ಅವರು ವಾಸಿಸುವ ಸ್ಥಳಗಳಿಗೆ ಭೇಟಿ ನೀಡುತ್ತೇವೆ. ಅಧ್ಯಯನದ ನಂತರ ಶೀಘ್ರದಲ್ಲಿಯೇ ಸರ್ಕಾರಕ್ಕೆ ವರದಿಕೊಡಲಾಗುವುದು ಎಂದು ಹೇಳಿದರು.

ವರದಿ ಕೊಡದೆ ಸರ್ಕಾರ ಏನನ್ನೂ ಮಾಡಲು ಸಾಧ್ಯವಿಲ್ಲ. ಕೊಟ್ಟ ವರದಿ ಪರಿಗಣಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು ಎಂದರು.

ಜಾತಿಪಟ್ಟಿಗೆ ಸೇರ್ಪಡೆ ಮತ್ತಿತರ ವಿಚಾರಗಳಿಗೆ ಸಂಬಂಧಿಸಿದ 10 ವರದಿಗಳನ್ನು ಆಯೋಗ ಸಿದ್ಧಪಡಿಸಿದೆ. ಆಯೋಗದ ಸಭೆಯಲ್ಲಿ ಚರ್ಚಿಸಿ ಶೀಘ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಕೆಲವರು ಜಾತಿ ಪಟ್ಟಿಗೆ ಸೇರಬೇಕಾಗಿದೆ. ಅಂತಹವರ ಪಟ್ಟಿ ಕಳುಹಿಸಿ ಎಂದು ಪಿಡಿಒ, ತಹಶೀಲ್ದಾರರಿಗೆ ಸೂಚಿಸಿದ್ದೇವೆ ಎಂದರು.

‘2ಎ’ ಗೆ ಪಂಚಮಸಾಲಿ: ವಿಚಾರಣೆ

ಲಿಂಗಾಯತ ಪಂಚಮಸಾಲಿ ಸಮಾಜವನ್ನು ‘2ಎ’ಗೆ ಸೇರಿಸುವ ಬಗ್ಗೆ ಪರ ಮತ್ತು ವಿರುದ್ಧವಾದ ಅರ್ಜಿಗಳು ಆಯೋಗಕ್ಕೆ ಸಲ್ಲಿಕೆ ಆಗಿವೆ. ಅ.11 ಮತ್ತು 12ಕ್ಕೆ ಸಾರ್ವಜನಿಕ ವಿಚಾರಣೆ ಇದೆ. ಯಾವ ಜಾತಿಯವರು ಎಷ್ಟು ಮಂದಿ ಉದ್ಯೋಗದಲ್ಲಿ ಇದ್ದಾರೆ ಎಂಬ ಮಾಹಿತಿ ನೀಡುವಂತೆ ವಿಶ್ವವಿದ್ಯಾಲಯ, ಸರ್ಕಾರಿ ಇಲಾಖೆ ಮತ್ತು ಸರ್ಕಾರಿ ಒಡೆತನದ ಸಂಸ್ಥೆಗಳಿಗೆ ತಿಳಿಸಿದ್ದೇವೆ. ಆ ಮಾಹಿತಿ ಬರುತ್ತಿದೆ ಎಂದು ಕೆ.ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ.

‘ಅಕ್ಟೋಬರ್ 1ಕ್ಕೆ ಗಡುವು’

ಚಿತ್ರದುರ್ಗ: ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರದಲ್ಲಿ ಸರ್ಕಾರ ತಳೆಯುವ ನಿಲುವನ್ನು ಅ. 1ರೊಳಗೆ ಸ್ಪಷ್ಟಪಡಿಸಬೇಕು. ಇಲ್ಲವಾದರೆ ಮತ್ತೆ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಇಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಮಂಗಳವಾರ ಏರ್ಪಡಿಸಿದ್ದ ‘ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್’ನಲ್ಲಿ ಮಾತನಾಡಿ, ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ವಿಶ್ವಾಸವಿದೆ. ಲಿಂಗಾಯತ ಸಮುದಾಯದಲ್ಲಿ ಪಂಚಮಸಾಲಿ ಒಳಪಂಗಡ ಶೇ 50ರಷ್ಟು ಜನಸಂಖ್ಯೆ ಹೊಂದಿದೆ. ಸರ್ಕಾರ ನೀಡಿದ್ದ ಗಡುವು ಸೆ. 15ಕ್ಕೆ ಮುಗಿದಿದೆ. ಆಯೋಗದ ವರದಿಯನ್ನು ಸರ್ಕಾರ ತರಿಸಿಕೊಂಡು ಮೀಸಲಾತಿ ನೀಡಬೇಕು’ ಎಂದು ಆಗ್ರಹಿಸಿದರು. ಇಲ್ಲವಾದರೆ, ಮಾರ್ಚ್ 15ರಂದು ಸ್ಥಗಿತಗೊಂಡ ಹೋರಾಟವನ್ನು ಮತ್ತೆ ಕೈಗೆತ್ತಿಕೊಳ್ಳುತ್ತೇವೆ’ ಎಂದು ಹೇಳಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಗ್ರೀಶ್‌ಲಾಲ್ ವಾಧ್ವಾ,** ನಂ. 123 ಎ, 6ನೇ ಮೇನ್, 4ನೇ ಬ್ಲಾಕ್, 3ನೇ ಹಂತ ಬಸವೇಶ್ವರ ನಗರ, ಬೆಂಗಳೂರು	25,000
2	**ಡಿ.ಗಂಗಾಧರಯ್ಯ, ನಂ.** 1102, 10ನೇ ‘ಡಿ’ ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ, 2ನೇ ಹಂತ, ಬೆಂಗಳೂರು	10,000
3	**ಶಶಿಧರ್ ಎಸ್.ಎಂ.,** ನಂ. 9, ಸಮೃದ್ಧಿ, 1ನೇ ಮಹಡಿ, 8ನೇ ಮೇನ್, 7ನೇ ಕ್ರಾಸ್, ಪ್ರೆಸಿಡೆನ್ಸಿ ಶಾಲೆ ಎದುರು, ಇಟ್ಟಮಡು, ಬನಶಂಕರಿ 3ನೇ ಹಂತ, ಬೆಂಗಳೂರು	10,000
4	**ವಿ.ಬುಧ್ಯ, ‘ಸಂಗಾತಿ’,** 11–3–75 ಡಿ, ವಿಶ್ವೇಶ್ವರಯ್ಯ 1ನೇ ಕ್ರಾಸ್ ರಸ್ತೆ, ಐ.ಬಿ.ಹತ್ತಿರ ಮತ್ತು ಉಡುಪಿ ತಾಲ್ಲೂಕು ಕಚೇರಿ,ಉಡುಪಿ	10,000
5	**ದೀಪಕ್‌ಕುಮಾರ್,** ನಂ. 2794, 7ನೇ ಮೇನ್, 2ನೇ ಕ್ರಾಸ್, ಕುಮಾರಸ್ವಾಮಿ ಲೇಔಟ್, 2ನೇ ಹಂತ (ಪೂರ್ವ), ಬೆಂಗಳೂರು	10,000
6	**ನಾಗರಾಜ ಚಿಕ್ಕಣ್ಣ,** ನಂ. 54, 2ನೇ ಕ್ರಾಸ್, ಎಲ್‌ಐಸಿ ಕಾಲೊನಿ, ಬಸವೇಶ್ವರ ನಗರ, ಬೆಂಗಳೂರು	10,000
7	**ಉಮಾಕಾಂತ್ ಕೇಶವ್ ರಾವ್ ಟಿಕಾರೆ,** ನಂ. 22, ಚ.ನಂ. 73, ‘ಶ್ರೀನಿಲಯ’, 2ನೇ ಹಂತ 2ನೇ ಬ್ಲಾಕ್, ವಿನೋಬಾನಗರ, ಶಿವಮೊಗ್ಗ	10,000
8	**ಬಿ.ಆರ್. ಚಂದ್ರಪ್ಪ,** ನಂ. 140, 3ನೇ ‘ಬಿ’ಕ್ರಾಸ್ 7ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು	7,501
9	**ಜಿ.ಸಿ.ಸದಾಶಿವಯ್ಯ,** ನಂ.31, 2ನೇ ಕ್ರಾಸ್, ದೇಸಾಯಿ ಗಾರ್ಡನ್, ವಸಂತಪುರ ಮುಖ್ಯರಸ್ತೆ, ಕೆ.ಕೆ.ಕ್ರಾಸ್, ಬೆಂಗಳೂರು	5,000
10	**ಬಿಕ್ಕು ಗೋಪಾಲ್ ಶೆಟ್ಟಿ,** ವೈಲವಾಡ ಪೋಸ್ಟ್, ಕಾರವಾರ ತಾ.	5,000
11	**ಪ್ರಭನ ಗೌಡ ಹಂಚಿನಾಳ,** ನಂ. 8–11–8/ಎ, ಎನ್‌ಜಿಒ ಕಾಲೊನಿ, ರಾಯಚೂರು	5,000
12	**ಕೆ. ಪ್ರಭಾಕರ್ ನಾಯರ್,** ಸಿ–203, ಜ್ಯುಪಿಟರ್ ವಸಂತ್ ಗ್ಯಾಲಕ್ಸಿ, ಬಂಗೂರ್ ನಗರ್, ಗೋರೆಗಾಂವ್ (ವೆಸ್ಟ್), ಮುಂಬೈ	5,000
13	**ಶೈಲಜಾ ಎಸ್.ಕೆ.** ನಂ. 844, ‘ಎ’ ಬ್ಲಾಕ್, 17ನೇ ಕ್ರಾಸ್, ಸಹಕಾರ ನಗರ, ಬೆಂಗಳೂರು	5,000
14	**ನಿರ್ವಾಣಿ ಗೌಡ ಕೆ.ಎಂ.,** ಚಂದ್ರೋದಯ, 2ನೇ ಎ ಮೇನ್, 7ನೇ ಕ್ರಾಸ್, ಸುಬ್ರಹ್ಮಣ್ಯ ದೇವಸ್ಥಾನ ರಸ್ತೆ, ಹೇಮಾವತಿ ನಗರ, ಹಾಸನ	3,000
15	**ವಿ.ಪುಟ್ಟಣ್ಣ,** ನ್ಯೂತಿಪ್ಪಸಂದ್ರ, ಬೆಂಗಳೂರು	3,000
16	**ರಾಜೇಂದ್ರ** ಕೋಪರ್ಡೆ, ಜೈಲರ್, ಕೇಂದ್ರ ಕಾರಾಗೃಹ, ಮೈಸೂರು	2,501
17	**ಅಕ್ಷತಾ ಪಿ. ಜೋಷಿ ಕೊಟ್ಟೂರು,** ನಂ. 106, ವಸಂತನಗರ ಕುಸುಗಲ್ ರಸ್ತೆ, ಹುಬ್ಬಳ್ಳಿ	2,500
18	**ಸೋಮನಾಥ.** ನಂ. 1–11,52/81, ಶ್ರೀಮಾರುತಿ ಕಾಲೊನಿ, ವಿದ್ಯಾಭಾರತಿ ಶಾಲೆ, ರಾಯಚೂರು	2,051
19	**ಡಿ. ಶ್ರೀಕಾಂತ್,** ನಂ. 115/2, 6ನೇ ಮೇನ್, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು	2,000
20	**ಎನ್. ರಾಘವನ್,** ನಂ. 472, 15ನೇ ಕ್ರಾಸ್, 7ನೇ ಮೇನ್, ಲಕ್ಕಸಂದ್ರ ಎಕ್ಸ್‌ಟೆನ್ಷನ್, ವಿಲ್ಸನ್ ಗಾರ್ಡನ್, ಬೆಂಗಳೂರು	2,000
21	**ನಾಗರಾಜ ಜಿ. ಉಪಕಾರಿ.** ನಂ. 69, 3ನೇ ಮೇನ್, ಅರ್ಜುನ್ ವಿಹಾರ್, ಗೋಕುಲ್ ರಸ್ತೆ, ಹುಬ್ಬಳ್ಳಿ	2,000
22	**ಚೆಲುವರಾಜು ಎಂ.ಎಸ್.,** ನಂ. 518/ಡಿ, 1ನೇ ಮಹಡಿ, 8ನೇ ಮೇನ್, 8ನೇ ಕ್ರಾಸ್, ರೈಲ್ವೆ ಅಂಡರ್ ಪಾಸ್ ಎದುರು, ಆರ್‌ಪಿಸಿ ಲೇಔಟ್, ಹಂಪಿನಗರ, ಬೆಂಗಳೂರು	1,701
23	**ಸುಕನ್ಯಾಕಿರಣ್, d/o** ರಾಧಾ ಸಂಪತ್ ಕುಮಾರ್, ನಂ. 1777. ಎಸ್‌ಎಲ್‌ಎನ್ ನಿವಾಸ, 22ನೇ ಕ್ರಾಸ್, ಗೋವಿಂದರಾಜನಗರ, ಬೆಂಗಳೂರು	1,117
24	**ದಿಲೀಪ್ ಪಿ.ಆರ್.,** ನಂ. 92, 1ನೇ ಮೇನ್, ಎನ್‌ಟಿ ನಗರ, ಜೆ.ಪಿ. ನಗರ 7ನೇ ಹಂತ, ಬೆಂಗಳೂರು	1,100
25	**ಎಂ.ಜಿ. ರಘುನಂದನ್,** ಶ್ರೀಲಕ್ಷ್ಮೀನರಸಿಂಹ ನಿಲಯ, ನಂ. 535, 3ನೇ ಕ್ರಾಸ್, ಎಂ.ಎಂ. ರಸ್ತೆ, ಕೆ.ಕೆ. ಹಳ್ಳಿ, ಬೆಂಗಳೂರು	1,026
26	**ಶಾಂತಿಕಾ,** ಮೂಡುಬಿದಿರೆ	1,009
27	**ಮಂಜುನಾಥ ಎ.ವಿ.,** ನಂ. ಎಫ್ 06, ಶ್ರೀ ಸಾಯಿಗಂಗಾ ಅಪಾರ್ಟ್‌ಮೆಂಟ್, ಮುಖ್ಯರಸ್ತೆ, ಗಾಂಧಿನಗರ, ಧಾರವಾಡ	1,001
28	**ಬಸಪ್ಪ ಮುಳ್ಳೂರ,** ಅಂಚೆ ಇಲಾಖೆ, ಹಲಗತ್ತಿ, ತಾ. ರಾಮದುರ್ಗ	1,001
29	**ಎಸ್.ಕೆ.ಚಂದ್ರಶೇಖರ ಶೆಟ್ಟಿ,** 6ನೇ ಕ್ರಾಸ್, ಎಂ.ಜೆ.ನಗರ, ಹೊಸಪೇಟೆ	1,000
30	**ಎಂ.ಚಿತ್ರಾ,** ನಂ. 003, ಆದಿತ್ಯ ಅಪಾರ್ಟ್‌ಮೆಂಟ್, 15ನೇ ಕ್ರಾಸ್, ವಕೀಲ್ ಗಾರ್ಡನ್ ಸಿಟಿ, ತಲಘಟ್ಟಪುರ, ಕನಕಪುರ ರಸ್ತೆ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	6,06,172

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

ವಾಲ್ಮೀಕಿ ಪೀಠದಲ್ಲಿ ಅ.2ರಿಂದ ಜನಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಹರಿಹರ: ತಾಲ್ಲೂಕಿನ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಅ.2ರಿಂದ 4ರವರೆಗೆ ಜನಜಾಗೃತಿ ಕಾರ್ಯಕ್ರಮ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ಕುರಿತು ಜನಪ್ರತಿನಿಧಿಗಳ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪೀಠದ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮಠದ ಆವರಣದಲ್ಲಿ ಅ.2ರಂದು ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ 2 ದಿನಗಳ ಜನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಕಾರ್ಯಕ್ರಮಕ್ಕೆ ಒಂದು ಸಾವಿರ ಜನರನ್ನು ಆಹ್ವಾನಿಸಲಾಗಿದೆ.

ಅ.4ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಸಾರಿಗೆ ಸಚಿವ ಶ್ರೀರಾಮುಲು ನೇತೃತ್ವದಲ್ಲಿ ಸಮಾಜದ ಶಾಸಕರು ಹಾಗೂ ಸಂಸದರ ಸಮ್ಮುಖದಲ್ಲಿ ಎಸ್.ಟಿ. ಮೀಸಲಾತಿ ಹೆಚ್ಚಳದ ವಿಳಂಬದ ಕುರಿತು ಸಂವಾದ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಕಾರುಗಳಿಗೂ ಬರಲಿವೆ ತಲೆ ಕಣ್ಣು ಕಿವಿಗಳು!

ಚಾಲಕರೇ ಇಲ್ಲದ ಕಾರುಗಳದ್ದು ಈಗ ಉನ್ಮತ್ತ ತಾರುಣ್ಯದ ಕಾಲ! ವಿದೇಶಗಳಲ್ಲಿ ಅವು ದಾರಿಗಿಳಿದು ಪರ್ಯಟನ ಮಾಡಲು ತೊಡಗಿವೆ.

ಶರತ್ ಭಟ್ ಸೇರಾಜೆ

ಗಾಡಿ ಓಡಿಸಲು ಕೂತಾಗ, 'ನಿಧಾನಿಸುತ್ತ, ಮೆಲ್ಲಗೆ ನಮ್ಮ ಹಿಂದೆ ಬರುವವರು ಪೆದ್ದರಂತೆಯೂ, ತರಾತುರಿಯಲ್ಲಿ ನಮಗಿಂತ ಮುಂದೆ ಓಡೋಡುವವರು ಕಡುಹುಚ್ಚರಂತೆಯೂ ಕಾಣುತ್ತಾರೆ' ಎಂಬರ್ಥದ ಜಾರ್ಜ್ ಕಾರ್ಲಿನ್ನನ ಚತುರೋಕ್ತಿ ಎಲ್ಲರ ಅನುಭವವನ್ನೇ ಹೇಳುತ್ತಲಿದೆ. ಮುಂದಿನ ದಿನಗಳಲ್ಲಿ ಯಂತ್ರಗಳನ್ನು, ಸಾಫ್ಟ್‌ವೇರ್‌ರನ್ನು ಕೃತಕ ಬುದ್ಧಿಮತ್ತೆಯನ್ನು ಎಲ್ಲ ಪೆದ್ದನಂತೆಯೂ ಕಡುಹುಚ್ಚನಂತೆಯೂ ನೋಡಬೇಕಾಗಬಹುದೇ ಅಂತ ಎದುರು ನೋಡಬೇಕಾಗಿದೆ. ಚಾಲಕರೇ ಇಲ್ಲದ ಕಾರುಗಳದ್ದು ಈಗ ಉನ್ಮತ್ತತಾರುಣ್ಯದ ಕಾಲ! ವಿದೇಶಗಳಲ್ಲಿ ಅವು ದಾರಿಗಿಳಿದು ಪರ್ಯಟನ ಮಾಡಲು ಉಜ್ಜುಗಿಸಿಯೂ ಆಗಿದೆ. ಈ ಸ್ವಯಂಚಾಲಿತ ವಾಹನಗಳು ಹೇಗೆ ಕೆಲಸಮಾಡುತ್ತವೆ ಎಂಬುದು ಆಸಕ್ತಿಯನ್ನು ಕುಟುಕುವ ವಿಷಯವೇ ಆಗಿದೆ.

ನಮ್ಮ ಜ್ಞಾನೇಂದ್ರಿಯಗಳು ಮಾಡುವ ಕೆಲಸವನ್ನು ಕಾರುಗಳ ಮಟ್ಟಿಗೆ ಮಾಡುವುದು ಸೆನ್ಸರುಗಳು ಮತ್ತು ತಂತ್ರಾಂಶಗಳು. ನಿಜಜೀವನದಲ್ಲಿ ರಸ್ತೆಯಲ್ಲಿ ಕಾಣಸಿಗುವ ವಾಹನಗಳ ಲಕ್ಷಗಟ್ಟಲೆ ವಿಡಿಯೊಗಳನ್ನು ಈ ಕಾರುಗಳಿಗೆ ಉಣ್ಣಿಸಲಾಗುತ್ತದೆ. ಇಂಥ ಆಕಾರ ಇದ್ದರೆ ಕಾರು, ಸಪೂರವಿದ್ದು ಅಷ್ಟುದ್ದ ಇದ್ದರೆ ಕಂಬ, ಉದ್ದ, ಅಗಲ, ಎತ್ತರಗಳಿದ್ದರೆ ಲಾರಿ, ನಾಲ್ಕು ಕಾಲಿದ್ದು ಸಣ್ಣ ಗಾತ್ರದ್ದಾದರೆ ನಾಯಿ ಎಂಬಂತೆ ಆಕಾರ, ರೂಪ, ಅಳತೆ, ಗಾತ್ರಗಳನ್ನು ಅಳೆದು ತೂಗಿ, ನೋಡಿ ಕಲಿಯುವುದು ಅದರ ಕಲಿಕೆಯ ವಿಧಾನ. ಬೆಂಗಳೂರಿನಲ್ಲಾದರೆ ಪಕ್ಕದ ಗಾಡಿಯವನನ್ನು ಬೈಯುತ್ತಲೋ, ಗಾಡಿ ನಿಲ್ಲಿಸಿ 'ಯಾಕೆ ಟಚ್ ಮಾಡಿದ್ದು, ಐದು ಸಾವಿರ ಕೊಡು, ಅಂತ ಜಗಳವಾಡುತ್ತಲೋ ಇದ್ದರೆ ಅದು 'ಮನುಷ್ಯ ಜಾತಿಯ ಪ್ರಾಣಿ' ಅಂತ ಕೃತಕ ಬುದ್ಧಿಮತ್ತೆಯು ಅದು ನಿಜಕ್ಕೂ ಬುದ್ಧಿಶಾಲಿಯಾಗಿದ್ದರೆ ಕಲಿತೀತು! ಹೀಗೆ, ಎದುರಿಗಿರುವ ವಸ್ತು ಅಥವಾ ಪ್ರಾಣಿ ಇಂಥದ್ದು ಅಂತ ಗುರುತಿಸಲು ಕಲಿತರೆ ಅದು ಆ ಕಾರು ಮೊದಲ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ!

ಇನ್ನು, ನಮ್ಮ ಕಣ್ಣು ಕಿವಿಗಳು ಮಾಡುವ ಕೆಲಸವನ್ನೂ ಅದು ಮಾಡಬೇಕಲ್ಲ. ಅದಕ್ಕೆ ಕೆಲವು ಕಂಪನಿಯವರು ಲೈಡಾರ್ (LIDAR) ಎಂಬ ಪರಿಕರವನ್ನು ಕಾರಿನ ನೆತ್ತಿಗೆ ಜೋಡಿಸಿ ಮಕುಟಧಾರಣೆ ಮಾಡಿಸುತ್ತಾರೆ. ರೇಡಿಯೊ ತರಂಗಗಳನ್ನು ತೂರಿ, ಆ ಅಲೆಗಳು ಎದುರುಗಡೆ ಇರುವ ವಸ್ತುವಿಗೆ ತಾಕಿ, ಡಿಕ್ಕಿ ಹೊಡೆದು ತಿರುಗಿ ಬರಲಿಕ್ಕೆ ಎಷ್ಟು ಹೊತ್ತು ಬೇಕಾಗುತ್ತದೆ ಅಂತ ಲೆಕ್ಕ ಹಾಕಿ, ಆ ವಸ್ತು ಎಲ್ಲಿದೆ, ಹೇಗಿದೆ ಅಂತ ಅಂದಾಜು ಮಾಡಬಲ್ಲ ರೇಡಾರ್ ಇದೆಯಲ್ಲ. ಆ ರೇಡಾರಿನ ಹತ್ತಿರದ ಸಂಬಂಧಿಯಂಥದ್ದು ಈ ಲೈಡಾರ್. ರೇಡಿಯೊ ಕಿರಣಗಳ ಬದಲು ಇದು ಸುಮಾರು 64 ಲೇಸರ್ ಕಿರಣಗಳನ್ನು ಹೊರಸೂಸಿ, ಅವುಗಳು ಎಲ್ಲಿಗೆ, ಹೇಗೆ ಘರ್ಷಿಸಿ ವಾಪಸ್ಸು ಬರುತ್ತವೆ ಎಂಬುದನ್ನು ಎಣಿಕೆಮಾಡಿ, ಮುಂಭಾಗದಲ್ಲಿ ಏನಿರಬಹುದು ಅನ್ನುವುದನ್ನು ಚಿತ್ರಿಸಿಕೊಳ್ಳುತ್ತದೆ. ಇವು ಸಿನೆಮಾಹಾಲುಗಳಲ್ಲಿ ಪರದೆಗಳೆಡೆಗೆ ಜನರು ನುಗ್ಗಿಸುವ ಕೆಂಪು ಲೇಸರುಗಳಲ್ಲ, ಇವುಗಳು ನಮ್ಮ ಕಣ್ಣಿಗೆ ಕಾಣದ, ಕಾರಿನ ಕಣ್ಣಿಗೆ ಕಾಣುವ ಇನ್ಫ್ರಾ ರೆಡ್ ಕಿರಣಗಳು.

ಹೀಗೆ ಸುಮಾರು ಇನ್ನೂರು ಮೀಟರು ದೂರದವರೆಗೂ ಅದರ ನೋಟ ಹಾಯಿಸಿ, ಅಲ್ಲೇನಿದೆ ಅಂತ ಕಂಡುಕೊಳ್ಳುವ ಶಕ್ತಿ ಅದಕ್ಕಿದೆ. ರಸ್ತೆಯ ಆ ಕಡೆ ನಿಂತವನ ಅಂಗಿಯ ಪುಟ್ಟ ಬಟನ್ನನ್ನೂ ಗುರುತಿಸಿ 'ಭಳಿರೇ' ಅನ್ನಿಸಿಕೊಳ್ಳಬಲ್ಲ ಸೂಕ್ಷ್ಮ ನೋಟ ಅದರದು. ಮುಂದಿನ ಬಂಪರುಗಳಲ್ಲಿ, ಹಿಂದಿನ ಬಂಪರುಗಳಲ್ಲಿ ಇರುವ ಕ್ಯಾಮೆರಾಗಳು, ಸೆನ್ಸರುಗಳು ಕೂಡ ಇದರ ಕಣ್ಣಾಗಿ ಕಾಯಕ ಎಸಗುತ್ತವೆ. ಜೊತೆಗೆ ಮುಂದಿನ ತಿರುವುಗಳು, ಸಿಗ್ನಲ್ಲುಗಳು, ಹೊರಳುದಾರಿಗಳು, ಗಿಜಿಗುಡುವ ವಾಹನ ದಟ್ಟಣೆ ಇವುಗಳ ಬಗ್ಗೆಯೆಲ್ಲ ಮಾಹಿತಿ ರವಾನಿಸಲಿಕ್ಕೆ ಜಿಪಿಎಸ್ಸು ಹೇಗೂ ಇದೆ.

ಈ ಎಲ್ಲ ಮಾಹಿತಿಗಳನ್ನು ಒಟ್ಟುಹಾಕಿ, ಮೃದುಗತಿಯಲ್ಲಿ ಎಕ್ಸಲರೇಟರನ್ನು ಅದುಮಬೇಕೋ, ಕಚಕ್ಕನೆ ಬ್ರೇಕು ಒತ್ತಬೇಕೋ, ಇಷ್ಟಿಷ್ಟೇ ಕದಲಬೇಕೋ, ಸಮ್ರಾಟನು ಕುಳಿತ ಕುದುರೆಯಂತೆ ಮುನ್ನುಗ್ಗಿ ಬೀಸುಗಾಲು ಹಾಕಬೇಕೋ ಅನ್ನುವುದನ್ನು ಅರ್ಥಮಾಡಿಕೊಳ್ಳುವ ಕೆಲಸ ತಂತ್ರಾಂಶದ್ದು.

ಇನ್ನೊಂದು ಹತ್ತು ವರ್ಷಗಳಲ್ಲಿ ಇಂಥ ಲಕ್ಷಗಟ್ಟಲೆ ಕಾರುಗಳು ಬೀದಿಗಿಳಿಯಲಿವೆ ಅಂತ ಒಂದು ಲೆಕ್ಕಾಚಾರ, 'ಇದರಿಂದ ನಮ್ಮ ಉದ್ಯೋಗ ಹೋಗುತ್ತದೆ' ಅಂತ ಪ್ರತಿಭಟನೆ ಮಾಡಲಿಕ್ಕೆ ಚಾಲಕವೃತ್ತಿಯಲ್ಲಿ ಇರುವವರೂ ಬೀದಿಗಿಳಿಯಬಹುದು! ನಮ್ಮಲ್ಲಿ ವರ್ಷಕ್ಕೆ ಸುಮಾರು ಒಂದೂವರೆ ಲಕ್ಷ ಜನರು ರಸ್ತೆ ಅಪಘಾತಗಳಲ್ಲಿ ಸಾಯುತ್ತಾರೆ. ಇಂಥಲ್ಲಿ ಆಗುವ ತಪ್ಪುಗಳನ್ನು ಕಾರಿನ ಕಂಪ್ಯೂಟರು ತಲೆ ಮಾಡುವುದಿಲ್ಲ ಅಂತ ಒಂದು ವಾದ. ಅದು ಮನುಷ್ಯರು ಮಾಡುವ ತಪ್ಪುಗಳನ್ನು ಮಾಡುವುದಿಲ್ಲ ಅನ್ನುವುದೇನೋ ಸರಿಯಿರಬಹುದು, ಆದರೆ ಮಾನವರು ಮಾಡದ ಹೊಸತಪ್ಪುಗಳನ್ನು ಅದು ಮಾಡಬಾರದು ಅಂತೇನೂ ಇಲ್ಲವಲ್ಲ! ಮುಂದಿರುವವರು ಮೊಬೈಲಿನಲ್ಲಿ ಇದ್ದರೆ ಹೇಗೆ ಓಡಿಸುತ್ತಾರೆ, ರಸ್ತೆ ದಾಟ ಹೊರಟವರು ಎಲ್ಲೋ ನೋಡುತ್ತಿದ್ದರೆ, ಕುಂಟುತ್ತಿದ್ದರೆ, ಮೊಬೈಲು ನೋಡುತ್ತಿದ್ದರೆ ಏನು ಮಾಡುತ್ತಾರೆ ಅನ್ನುವುದನ್ನೆಲ್ಲ ಮನುಷ್ಯರು ಕ್ಷಣಮಾತ್ರದಲ್ಲಿ ಗ್ರಹಿಸಬಲ್ಲರು; ಇವೆಲ್ಲ ಗಣಕಯಂತ್ರಗಳಿಗೆ ಹೇಗೆ ಗೊತ್ತಾಗಬೇಕು? ಇನ್ನು ಅಮೆರಿಕಾದವರಾದರೆ ರಸ್ತೆಯ ನಿಯಮಗಳನ್ನೆಲ್ಲ ಶಿಸ್ತಿನಿಂದ ಪಾಲಿಸುವವರು; ನಾವಾದರೋ ನಿಯಮಗಳು ಇರುವುದೇ ಮುರಿಯಲಿಕ್ಕೆ ಅಂತ ನಂಬಿದವರು ಇಂಥಲ್ಲಿ ಈ ಕಾರುಗಳಾದರೂ ಪಾಪ ಏನು ಮಾಡಿಯಾವು? ಇನ್ನು ಬಿಬಿಎಂಪಿಯವರ ಹೊಂಡಗಳೋ ವೈಟ್ ಟ್ಯಾಪಿಂಗೋ ಪೋಲೀಸರ ತಡೆ ಬೇಲಿಗಳೋ ಇನ್ನೊಂದೋ ಮತ್ತೊಂದೋ ಇದ್ದರೆ ಏನು ಮಾಡಬೇಕು ಅಂತ ಈ ಕಾರುಗಳಿಗೆ ಹೇಳಿಕೊಡಬಲ್ಲ ಮೇಧಾವಿ ಸಾಫ್ಟ್‌ವೇರ್ ಎಂಜಿನಿಯರು ಎಲ್ಲಿದ್ದಾನೆ?

ಹೀಗಾಗಿ ಸ್ವಯಂಚಾಲಿತ ವಾಹನಗಳ ಹಾದಿ ನಮ್ಮ ಮಟ್ಟಿಗಂತೂ ಸುಗಮವೇನಲ್ಲ ಅನ್ನಬೇಕಷ್ಟೇ!

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 67

911. ಗ್ಲೂಕೋಸ್‌ನ ರಾಸಾಯನಿಕ ಸೂತ್ರ ಏನು?
ಎ) C6H6O6 ಬಿ) C12H12O11
ಸಿ) C6H12O11 ಡಿ) C6H12O6

912. ಸಸ್ಯಗಳಲ್ಲಿ ಆಹಾರ ಸಾಗಣೆ ಮಾಡುವ ಅಂಗಾಂಶ ಯಾವುದು?
ಎ) ಕ್ಸೈಲಂ ಬಿ) ಫ್ಲೋಯೆಂ
ಸಿ) ಕ್ಲೋರೋಫಿಲ್ ಡಿ) ಕ್ಸಾನೋಫಿಲ್

913. ಅತ್ಯಂತ ಗಟ್ಟಿಯಾದ ಅಲೋಹ ಯಾವುದು?
ಎ) ಯುರೇನಿಯಂ ಬಿ) ಬೆಳ್ಳಿ
ಸಿ) ವಜ್ರ ಡಿ) ಪ್ಲಾಟಿನಂ

914. ಓಝೋನ್ ನಾಶಕ್ಕೆ ಪ್ರಮುಖ ಕಾರಣ ಯಾವುದು?
ಎ) ಮರ್ಕ್ಯುರಿ ಬಿ) ಕಾರ್ಬನ್
ಸಿ) ಸೀಸ ಡಿ) ಸಿ.ಎಫ್.ಸಿ

915. ಇತ್ತೀಚೆಗೆ ಚರ್ಚೆಯಲ್ಲಿರುವ 'ಪ್ರಯೋಗಾಲಯ ಮೂಲದ ಸಿದ್ಧಾಂತ' ಯಾವುದಕ್ಕೆ ಸಂಬಂಧಿಸಿದೆ?
ಎ) ಕೋವಿಡ್ ವ್ಯಾಕ್ಸಿನ್ ಸಂಶೋಧನೆ
ಬಿ) ಕೋವಿಡ್ ಹುಟ್ಟಿನ ಮೂಲ
ಸಿ) ಕೋವಿಡ್ ಪ್ರಸರಣದ ತೀವ್ರತೆ
ಡಿ) ಕೋವಿಡ್ ವೈರಸ್ ರೂಪಾಂತರ

916. Entomology (ಎಂಟೊಮಾಲಜಿ) ಎಂದರೇನು?
ಎ) ಭೂಕಂಪನದ ಬಗ್ಗೆ ಅಧ್ಯಯನ
ಬಿ) ಶಿಲೆಗಳ ಬಗ್ಗೆ ಅಧ್ಯಯನ
ಸಿ) ಮಣ್ಣಿನ ಬಗ್ಗೆ ಅಧ್ಯಯನ
ಡಿ) ಕೀಟಗಳ ಬಗ್ಗೆ ಅಧ್ಯಯನ

917. ಅಡುಗೆ ಉಪ್ಪಿನ ರಾಸಾಯನಿಕ ಹೆಸರು ಏನು?
ಎ) ಸೋಡಿಯಂ ಕಾರ್ಬೋನೇಟ್
ಬಿ) ಸೋಡಿಯಂ ಬೈ ಕಾರ್ಬೋನೇಟ್
ಸಿ) ಸೋಡಿಯಂ ಕ್ಲೋರೈಡ್
ಡಿ) ಕ್ಯಾಲ್ಸಿಯಂಕ್ಲೋರೈಡ್

918. ಮಾನವನ ರಕ್ತದಲ್ಲಿ ಯಾವ ಲೋಹದ ಅಂಶ ಇದೆ?
ಎ) ಕ್ಯಾಲ್ಸಿಯಂ ಬಿ) ಹೈಡ್ರೋಜನ್
ಸಿ) ಇಂಗಾಲ ಡಿ) ಕಬ್ಬಿಣ

919. ವಿಟಮಿನ್ 'ಸಿ' ಕೊರತೆಯಿಂದ ಬರುವ ರೋಗ ಯಾವುದು?
ಎ) ಇರುಳುಕುರುಡು ಬಿ) ಸ್ಕರ್ವಿ
ಸಿ) ರಿಕೆಟ್ಸ್ ಡಿ) ಬೆರಿಬೆರಿ

920. ರಾಮು ಸೋಮುವಿನ ವಯಸ್ಸಿಗಿಂತ 2 ಪಟ್ಟು ದೊಡ್ಡವನು ಮತ್ತು ಕಿಟ್ಟಿಗಿಂತ 4 ವರ್ಷ ದೊಡ್ಡವನು. ಈಗ ಕಿಟ್ಟಿಗೆ 8 ವರ್ಷ, ಹಾಗಾದರೆ ಸೋಮು ಕಿಟ್ಟಿಗಿಂತ ಎಷ್ಟು ವರ್ಷ ಚಿಕ್ಕವನು?
ಎ) 2 ವರ್ಷಗಳು ಬಿ) 4 ವರ್ಷಗಳು
ಸಿ) 6 ವರ್ಷಗಳು ಡಿ) 3 ವರ್ಷಗಳು

921. 11, 24, 39, 416, 525, ..., 749 ಈ ಸರಣಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆ ಯಾವುದು?
ಎ) 425 ಬಿ) 518
ಸಿ) 636 ಡಿ) 618

922. ಅಧಿಕ ವರ್ಷದಲ್ಲಿ ಎಷ್ಟು ದಿನ ಇರುತ್ತವೆ?
ಎ) 365 ಬಿ) 366
ಸಿ) 367 ಡಿ) 360

923. 1 ರಿಂದ 100ರ ವರೆಗಿನ ಸಂಖ್ಯೆಗಳ ಸಂಕಲನ ಮಾಡಿದಾಗ ಬರುವ ಮೊತ್ತ ಎಷ್ಟು?
ಎ) 5050 ಬಿ) 5060
ಸಿ) 5030 ಡಿ) 5020

924. ₹5,000ಕ್ಕೆ ವಾರ್ಷಿಕ ಶೇ 5 ರ ಬಡ್ಡಿ ದರದಂತೆ, 4 ವರ್ಷಗಳಿಗೆ ಆಗುವ ಸರಳ ಬಡ್ಡಿ ಎಷ್ಟು?
ಎ) 5,000 ಬಿ) 500
ಸಿ) 1,000 ಡಿ) 250

925. ಒಬ್ಬ ವ್ಯಕ್ತಿ ಒಂದು ವಸ್ತುವನ್ನು 800 ರೂಪಾಯಿಗೆ ಕೊಂಡು ಅದೇ ವಸ್ತುವನ್ನು ಶೇಕಡ 20 ರಷ್ಟು ಲಾಭಕ್ಕೆ ಮಾರುತ್ತಾನೆ. ಹಾಗಾದರೆ ಅವನು ಮಾರಿದ ಬೆಲೆ ಎಷ್ಟು?
ಎ)₹860 ಬಿ) ₹ 980
ಸಿ) ₹1,000 ಡಿ) ₹960

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 66ರ ಉತ್ತರಗಳು: 896. ಬಿ, 897. ಸಿ, 898. ಎ, 899. ಬಿ, 900. ಬಿ, 901. ಎ, 902. ಸಿ, 903. ಬಿ, 904. ಡಿ, 905. ಎ, 906. ಎ, 907. ಬಿ, 908. ಬಿ, 909. ಬಿ, 910. ಡಿ

'ಮೈಕ್ರೋಸಾಫ್ಟ್ ಸರ್ಫೇಸ್ ಸ್ಟುಡಿಯೋ'. ಇದು ಎಲ್ಲರ ಅನುಕೂಲಕ್ಕೆ ತಕ್ಕ ಹಾಗೆ ಬಾಗುವ, ಬದಲಾಗುವ ಲ್ಯಾಪ್‌ಟಾಪ್.



ಬಹುರೂಪಿ ಲ್ಯಾಪ್‌ಟಾಪ್

ಕ್ಷಮಾ ವಿ. ಭಾನುಪ್ರಕಾಶ್

ವಿಹಾಗೆ ಶಾಲೆ ಶುರುವಾದರೆ ಸಾಕೆನಿಸಿಬಿಟ್ಟಿದೆ. ದಿನಪೂರ್ತಿ ಆನ್‌ಲೈನ್ ಕ್ಲಾಸುಗಳು; ಕಂಪ್ಯೂಟರ್ ಪರದೆ ನೋಡೀ ನೋಡಿ ಕನ್ನಡಕ ಬಂದದ್ದೂ ಆಯ್ತು, ಕುತ್ತಿಗೆಯ ಒಂದು ಬದಿ ದಿನವೆಲ್ಲಾ ನೋವು. ಮನೆಯಲ್ಲಿ ಎಪ್ಪತ್ತು ವರ್ಷದ ಹಿರಿಯರದ್ದು 'ಇದೇನು ಏಳು ವರ್ಷದವಳಿಗೆ ಕನ್ನಡಕ, ಕುತ್ತಿಗೆ ನೋವು?' ಎಂದು ಹುಬ್ಬೇರಿಸುವ ಸರದಿ.

ಆರ್ಟ್ ಪಾಠ ಮಾಡುವ ಚಿತ್ರಕಲಾವಿದೆ ಸೌರಭ ಕೂಡ ಇದಕ್ಕೆ ಹೊರತಾಗಿಲ್ಲ; ಬಿಡಿಸುತ್ತಿರುವ ರೇಖೆಯನ್ನ, ತುಂಬುತ್ತಿರುವ ಬಣ್ಣವನ್ನ ಯಾವ ಕೋನದಲ್ಲಿ ಮಕ್ಕಳಿಗೆ ತೋರಿಸೋದು ಆನ್‌ಲೈನ್ ತರಗತೀಲಿ? ಫೋನ್ನಿಂದ ಆಚೆಬದಿಯ ಕ್ಯಾಮೆರಾ ಆನ್ ಮಾಡಿ ತೋರಿಸಿದರೂ ಸಾಧ್ಯವಾಗ್ತಿಲ್ಲ, ಲ್ಯಾಪ್‌ಟಾಪ್‌ನ ಕ್ಯಾಮೆರಾ ಫೋಕಸ್ ಮಾಡೋದು ಹೇಗೆ ಕೆಳಗಿರುವ ಕ್ಯಾನ್ವಾಸಿನ ಮೇಲೆ?

ಇನ್ನು ನೇಸರ ಕೂಡ ಲಾಕ್‌ಡೌನ್‌ನಿಂದ ಬಳಲಿ ಬೆಂಡಾಗಿದ್ದಾನೆ. ಅವನಿಗೆ ಕಾಲೇಜಿನ ಆನ್‌ಲೈನ್ ಕ್ಲಾಸು, ನಂತರ ಓದು ಎಲ್ಲ ಮುಗಿದ ಮೇಲೆ ಕೊಂಚ ಓಟಿಟಿಯಲ್ಲಿನ ಡಾಕ್ಯುಸೀರೀಸ್ ನೋಡೋಣವೆಂದರೆ, ಕ್ಲಾಸಿಗೆ ಕೂತ ಅದೇ ಭಂಗಿಯಲ್ಲೇ ಕೂತು, ಲ್ಯಾಪ್‌ಟಾಪ್ ನೋಡುತ್ತಾ ಬೆನ್ನುನೋವು ಶುರುವಾಗಿದೆ. ಗೇಮಿಂಗ್ ಅನುಭವ ಕೂಡ ಅಷ್ಟಕ್ಕಷ್ಟೇ.

ಇವರಿಗೆಲ್ಲಾ ವರದಾನದಂತೆ ಬಂದಿದೆ, ಬಹುರೂಪಿ ಲ್ಯಾಪ್‌ಟಾಪ್. ಈ ನವೀನ ಉತ್ಪನ್ನದ ಹೆಸರೇ 'ಮೈಕ್ರೋಸಾಫ್ಟ್ ಸರ್ಫೇಸ್ ಸ್ಟುಡಿಯೋ'! ಇದು ಉತ್ಪನ್ನವಲ್ಲ, ವಿಶಿಷ್ಟ ಅನುಭವದ ರಂಗಮಂಚ! ಎಲ್ಲರ ಅನುಕೂಲಕ್ಕೆ ತಕ್ಕ ಹಾಗೆ ಬಾಗುವ, ಬದಲಾಗುವ ಲ್ಯಾಪ್‌ಟಾಪ್ ಇದು. ಈ ಮೈಕ್ರೋಸಾಫ್ಟ್ ಸರ್ಫೇಸ್ ಸ್ಟುಡಿಯೋದಲ್ಲಿ ನೀವು ಯಾವ ಕೋನದಲ್ಲಿ ಬೇಕಾದರೂ ಲ್ಯಾಪ್‌ಟಾಪ್‌ನ ಪರದೆಯನ್ನು ಮಡಚಬಹುದು, ಬಗ್ಗಿಸಬಹುದು, ಓರೆಯಾಗಿ ತೆಗೆದಿಟ್ಟು ನಿಮ್ಮ ಕೆಲಸಗಳಿಗೆ ಸಹಾಯಕವಾಗಿ ಬಳಸಿಕೊಳ್ಳಬಹುದು. ಬಾಗಿಲುಗಳನ್ನು ಸರಾಗವಾಗಿ ತೆಗೆಯಲು, ಹಾಕಲು ಸಾಧ್ಯವಾಗುವುದು ಅವುಗಳ ಮತ್ತು ಗೋಡೆಗಳ ನಡುವಿನ ಕೀಲಿನ ಸಹಾಯದಿಂದ ತಾನೇ? ನಮ್ಮ ಕೈಕಾಲುಗಳನ್ನು ಸರಾಗವಾಗಿ ಮಡಚಿ, ಚಾಚಿ ಮಾಡೋಕೆ ಕೂಡ ಕೀಲು ಕಾರಣ. ಲ್ಯಾಪ್‌ಟಾಪನ್ನು ಮಡಚಿ, ತೆಗೆಯಲು ಕೂಡ ಈಗಾಗಲೇ ಪುಟ್ಟ ಎರಡು ಕೀಲುಗಳು ಇದ್ದವು; ಆದರೆ ಅವುಗಳಲ್ಲಿ ಅಪಾರ ಸುಧಾರಣೆ ತರಲಾಗಿದ್ದು, ಅವು ಕೇವಲ ಒಂದೇ ಬಗೆಯಲ್ಲಿ ಅಲ್ಲದೇ ಅನೇಕ ಕೋನಗಳಲ್ಲಿ ಲ್ಯಾಪ್‌ಟಾಪ್ ಪರದೆಯನ್ನು ತಿರುಗಿಸಿ, ಮಲಗಿಸಿ, ತೆಗೆದು, ಮಡಚಿ ಮಾಡಲು ಅನುವು ಮಾಡಿಕೊಡುತ್ತದೆ. ದಶಕಗಳ ಸಂಶೋಧನೆಗಳ ಭಾಗವಾಗಿ ತಯಾರಾದ ನಮ್ಯತೆಯ ಪ್ರತಿರೂಪವಾದ ಕೀಲನ್ನು ಈ ಸಾಧನದಲ್ಲೂ ಬಳಸಲಾಗಿದ್ದು, ಅದರ ಸಹಾಯದಿಂದಲೇ ಯಾವ ಕೋನಕ್ಕೆ ಬೇಕಾದರೂ ಪರದೆಯನ್ನು ತಿರುಗಿಸಬಹುದಾಗಿದೆ.

ಸರ್ಫೇಸ್ ಬುಕ್‌ನ ಮುಂದುವರೆದ ತಲೆಮಾರು ಎನಿಸುವ ಈ ಸಾಧನದಲ್ಲಿ ಪ್ರಮುಖ ಬದಲಾವಣೆ ಕಾಣುತ್ತಿರುವುದು ಡಿಸ್‌ಪ್ಲೇ ಪರದೆಯಲ್ಲಿ ಮತ್ತು ಕೀಲುಗಳಲ್ಲಿ. ಮೇಜಿನ ಮೇಲೆ ಇಡಬಹುದಾದ ಫೋಟೋಫ್ರೇಮುಗಳಲ್ಲಿ ಹಿಂದಕ್ಕೊಂದು ಪುಟ್ಟ ಮರದ ತುಂಡು ಇರೋದಿಲ್ವೇ? ಅದು ನಮಗೆ ಫೋಟೋಫ್ರೇಮನ್ನು ಹೇಗೆ ಬೇಕಾದರೂ ನಿಲ್ಲಿಸಲು ಸಹಾಯಕ. ಹಾಗೇ ಮೈಕ್ರೋಸಾಫ್ಟ್ ಸರ್ಫೇಸ್ ಸ್ಟುಡಿಯೋದ ಹಿಂಜ್ ಅಥವಾ ಕೀಲುಗಳು ಪರದೆಗೆ ಹೊಸ ನಮ್ಯತೆ ಕೊಟ್ಟಿದ್ದು, ಗೇಮಿಂಗ್, ಡಿಜಿಟಲ್ ಆರ್ಟ್‌ನಂತಹ ಹಲವಾರು ಅನುಭವಗಳಿಗೆ ಹೇಳಿಮಾಡಿಸಿದಂತಿದೆ. ಇಲ್ಲಿ ಬಳಸಲಾಗಿರುವ, ವಿವಿಧ ಕೋನಗಳಿಂದ ನೋಡಲು ಸಾಧ್ಯವಾಗುವಂತಹ ಸುಧಾರಿತ ಗುಣಮಟ್ಟದ ಪರದೆ ಕೂಡ ಇದಕ್ಕೆ ಪ್ರಮುಖ ಕಾರಣ.

ಇಲ್ಲಿ ಮತ್ತೊಂದು ಪ್ರಮುಖ ಅಡ್ವಾಂಟೇಜ್ ಇದೆ. ನಿಮಗೆ ಕೀಲಿಮಣೆ ಬೇಡವೆನಿಸಿದರೆ, ಆ ಕ್ಷಣವೇ ಪರದೆಯನ್ನು ಕೀಬೋರ್ಡಿನಿಂದ ಬಿಚ್ಚಿಕೊಂಡು ಬೇರೆ ಮಾಡಬಹುದು. ಎಲ್ಲಿಗೆ ಬೇಕಾದರೂ ಸುಲಭವಾಗಿ ಕೊಂಡೊಯ್ಯಬಹುದಾದ ಆ ಪರದೆಯನ್ನೇ, ಟ್ಯಾಬ್‌ನಂತೆ ಟಚ್‌ಸ್ಕ್ರೀನ್ ಮೋಡಲ್ಲಿ ಬಳಸಬಹುದು. ಇಲ್ಲಿ ನಿಮಗೆ ಮೂರು ಬಗೆಯ ಸಾಧ್ಯತೆಗಳು ಲಭ್ಯ – ಲ್ಯಾಪ್‌ಟಾಪ್, ಸ್ಟೇಜ್ ಮತ್ತು ಸ್ಟುಡಿಯೋ! ನಿಮ್ಮ ಅನುಕೂಲಕ್ಕೆ, ನಿಮ್ಮ ಅವಶ್ಯಕತೆಗೆ ತಕ್ಕ ಹಾಗೆ, ಒಂದು ಮೋಡ್‌ನಿಂದ ಮತ್ತೊಂದಕ್ಕೆ ಕ್ಷಣ ಮಾತ್ರದಲ್ಲಿ ಶಿಫ್ಟ್ ಆಗಬಹುದು. ಜೊತೆಗೆ, ಡಿಜಿಟಲ್ ಇಂಕಿಂಗ್‌ನ ಆಸಕ್ತಿ ಇದ್ದರೆ, 'ಸರ್ಫೇಸ್ ಸ್ಲಿಮ್ ಪೆನ್ 2' ಕೂಡ ಲಭ್ಯವಿದ್ದು, ನಿಮ್ಮ ಕೈಬರಹವನ್ನು ಪರದೆಯ ಮೇಲೆ ಯಥಾವತ್ತಾಗಿ ಮೂಡಿಸಬಹುದು.

ಈಗಾಗಲೇ ಲಭ್ಯವಿರುವ ಸರ್ಫೇಸ್ ಬುಕ್‌ನಂತಹ ಸಾಧನಗಳಂತೆ ಎನಿಸಿದರೂ, ಮೈಕ್ರೋಸಾಫ್ಟ್ ಸರ್ಫೇಸ್ ಸ್ಟುಡಿಯೋ ಹೊಚ್ಚಹೊಸ ತಂತ್ರಜ್ಞಾನವನ್ನು ಒಳಗೊಂಡ, ಸುಧಾರಿತ ಅನುಭವಗಳನ್ನು ಕೊಡಮಾಡುವ ವಿಶಿಷ್ಟ ಆಲ್ ಇನ್ ಒನ್ ಪ್ಯಾಕೇಜ್. ಇಂಟೆಲ್‌ನ ಕ್ವಾಡ್ಕೋರ್ 11ನೆಯ ಜೆನ್ ಕೋರ್ ಐ5 ಅಥವಾ ಕೋರ್ ಐ7 ಪ್ರೋಸೆಸರ್‌ಗಳನ್ನು ಬಳಸಲಾಗಿದ್ದು, ಐರಿಸ್ ಎಕ್ಸ್‌ಇ ಗ್ರಾಫಿಕ್ಸ್ ಅಥವಾ ನ್ವಿಡಿಯ ಆರ್‌ಟಿಎಕ್ಸ್ 3050 ಟಿಐ ಜಿಪಿಯುವನ್ನು ಒಳಗೊಂಡಿರುತ್ತದೆ. 16ಜಿಬಿಯಿಂದ 32ಜಿಬಿಯವರೆಗಿನ ರ್‍ಯಾಮ್ ಆಯ್ಕೆಗಳು ಲಭ್ಯವಿದ್ದು, '2ಟಿಬಿ'ವರೆಗಿನ ಹೆಚ್ಚಿನ ಸ್ಟೋರೇಜ್ ಸಿಗುತ್ತದೆ. ಇಷ್ಟೆಲ್ಲಾ ಸುಧಾರಿತ ತಂತ್ರಜ್ಞಾನದ ಕೂಸಾಗಿರುವ ಈ ಬಹುರೂಪಿ ಲ್ಯಾಪ್‌ಟಾಪ್ ನಿಮ್ಮ ಮಡಿಲು ಸೇರಬೇಕಾದರೆ, ಈಗಾಗಲೇ ಪ್ರಿ-ಆರ್ಡರ್ ಸೌಲಭ್ಯ ಕೂಡ ಲಭ್ಯವಿದೆ.

'ಆ್ಯಪಲ್'ಗೆ ಐಒಎಸ್ 15

ಇತ್ತೀಚೆಗೆ ಹೊಸದಾಗಿ ಬಿಡುಗಡೆಯಾದ ಐಫೋನ್ 13ರಲ್ಲಿ ಇರುವುದು ಐಒಎಸ್ 15 ಕಾರ್ಯಾಚರಣಾ ವ್ಯವಸ್ಥೆ. ಐಒಎಸ್ 15ರ ಉಪಯುಕ್ತ ಆರು ವೈಶಿಷ್ಟ್ಯಗಳು ಇಲ್ಲಿವೆ:

ಅವಿನಾಶ್ ಬಿ.

ಐಫೋನ್ ಬಳಕೆದಾರರಿಗೆ ಕಳೆದ ವಾರದಿಂದ (ಸೆ.21) ಹೊಚ್ಚ ಹೊಸ ಕಾರ್ಯಾಚರಣ ವ್ಯವಸ್ಥೆ ಐಒಎಸ್ 15 ಬಿಡುಗಡೆಯಾಗಿದೆ. ಆರು ವರ್ಷದ ಹಿಂದಿನ ಐಫೋನ್ 6S ನಂತರದ ಎಲ್ಲ ಐಫೋನ್‌ಗಳಿಗೆ ಇದು ಲಭ್ಯ. ಇತ್ತೀಚೆಗೆ ಹೊಸದಾಗಿ ಬಿಡುಗಡೆಯಾದ ಐಫೋನ್ 13ರಲ್ಲಿ ಇರುವುದು ಐಒಎಸ್ 15 ಕಾರ್ಯಾಚರಣ ವ್ಯವಸ್ಥೆ. ಐಒಎಸ್ 15ರ ಉಪಯುಕ್ತ ಆರು ವೈಶಿಷ್ಟ್ಯಗಳು ಇಲ್ಲಿವೆ:

ಸಫಾರಿ ವಿಳಾಸ ಪಟ್ಟಿ: ಐಫೋನ್‌ನ ಸಫಾರಿ ಬ್ರೌಸರ್‌ನಲ್ಲಿ ಅಡ್ರೆಸ್ ಬಾರ್ (ಯುಆರ್‌ಎಲ್ ನಮೂದಿಸುವ ಸ್ಥಳ) ಸ್ಕ್ರೀನ್‌ನ ಕೆಳಭಾಗಕ್ಕೆ ವರ್ಗವಾಗಿದೆ. ಇದು ಒಂದು ಕೈಯಲ್ಲಿ ಕೆಲಸ ಮಾಡುವಾಗ ಅನುಕೂಲಕರ. ಆದರೆ, ಇದು ಬೇಡವೆಂದಾದರೆ, ಮೇಲ್ಭಾಗದಲ್ಲೇ ಅಡ್ರೆಸ್ ಬಾರ್ ಇರಿಸಬಹುದು. ಇದಕ್ಕೆ ಅಡ್ರೆಸ್ ಪಟ್ಟಿಯ ಪಕ್ಕದಲ್ಲೇ ಇರುವ AA ಎಂಬುದನ್ನು ಒತ್ತಿದಾಗ, ವಿಳಾಸ ಪಟ್ಟಿಯನ್ನು ಮೇಲ್ಭಾಗದಲ್ಲಿ ಇರಿಸಲು ಆಯ್ಕೆ ದೊರೆಯುತ್ತದೆ.

ಫೋಕಸ್ ಮೋಡ್: ಐಒಎಸ್ 15ರಲ್ಲಿ ಫೋಕಸ್ ಮೋಡ್ ಎಂಬುದು ಮುಖ್ಯವಾಗಿ ಗಮನ ಸೆಳೆದ ಅಂಶ. ಇದು ಒಂದು ರೀತಿಯಲ್ಲಿ ಫೋನ್ ಸದ್ದು ಮಾಡದಂತೆ ಇರಿಸುವ 'ಡು ನಾಟ್ ಡಿಸ್ಟರ್ಬ್' ಮೋಡ್ ಇದ್ದಂತೆಯೇ. ಕಂಟ್ರೋಲ್ ಸೆಂಟರ್‌ನಲ್ಲಿ (ಹೋಮ್ ಸ್ಕ್ರೀನ್‌ನಲ್ಲಿ ಬಲ ಮೇಲ್ಭಾಗದಿಂದ ಕೆಳಗೆ ಸ್ವೈಪ್ ಮಾಡಿದಾಗ ಸಿಗುವ ನಿಯಂತ್ರಣ ಕೇಂದ್ರ) ಅಥವಾ ಸೆಟ್ಟಿಂಗ್ಸ್‌ನಲ್ಲಿ ಹೋದರೆ 'ಫೋಕಸ್' ಗೋಚರಿಸುತ್ತದೆ. ಅದನ್ನು ಒತ್ತಿದಾಗ 'ಡು ನಾಟ್ ಡಿಸ್ಟರ್ಬ್' ಮೋಡ್ ಇರುತ್ತದೆ. ಅದರ ಕೆಳಗೆ, 'ವೈಯಕ್ತಿಕ' ಆಯ್ಕೆ ಮೂಲಕ, ನಮಗೆ ಬೇಕಾದ ವಿಷಯದಲ್ಲಿ ಮಾತ್ರವೇ ಗಮನ (ಫೋಕಸ್) ಇರಿಸುವಂತೆ, ಅಂದರೆ ಅತ್ಯಗತ್ಯ ಆ್ಯಪ್‌ಗಳಿಂದ ಮಾತ್ರ ನೋಟಿಫಿಕೇಶನ್‌ಗಳನ್ನು ತೋರಿಸುವಂತೆಯೂ, ನಾವು ಕಾರ್ಯವ್ಯಸ್ತವಾಗಿದ್ದೇವೆಂಬುದನ್ನು ಉಳಿದವರಿಗೆ ಕಾಣಿಸುವಂತೆಯೂ ಹೊಂದಿಸಬಹುದು. ಯಾರಿಂದ ಫೋನ್ ಅಥವಾ ಸಂದೇಶ ಬಂದರೆ ಕಾಣಿಸಬೇಕು ಎಂಬುದಾಗಿ ಕೆಲವೇ ಸಂಪರ್ಕ ಸಂಖ್ಯೆಗಳನ್ನು ಇಲ್ಲಿ ಹೊಂದಿಸಬಹುದು. ಕಚೇರಿ ಕೆಲಸ, ನಿದ್ರಾಸಮಯವನ್ನೂ ಇಲ್ಲೇ ಹೊಂದಿಸಬಹುದು. ಫೋನ್ ರಿಂಗ್ ಅಥವಾ ನೋಟಿಫಿಕೇಶನ್ ಧ್ವನಿಯು ನಿಮಗೆ ತೊಂದರೆಯುಂಟುಮಾಡದು. 'ಫೋಕಸ್' ಆನ್ ಇರುವಾಗ ಕಚೇರಿ ಅಥವಾ ನಿರ್ದಿಷ್ಟ ಕೆಲಸಕ್ಕೆ ಬೇಕಾದ ಆ್ಯಪ್‌ಗಳು ಮಾತ್ರವೇ ಕಾಣಿಸುವಂತೆ ಸ್ಕ್ರೀನ್ ಹೊಂದಿಸಬಹುದಾಗಿರುವುದು ಮತ್ತೊಂದು ವಿಶೇಷ.

ಫೇಸ್‌ಟೈಮ್‌ನಲ್ಲಿ ಪೋರ್ಟ್ರೇಟ್ ಮೋಡ್: ಫೋಟೊಗಳಲ್ಲಿ ಹಿನ್ನೆಲೆಯನ್ನು ಮಸುಕಾಗಿಸಬಲ್ಲ ಪೋರ್ಟ್ರೇಟ್ ಮೋಡ್ ಅನ್ನು ಈಗ ವಿಡಿಯೊ ಕರೆ ಮಾಡಲು ಬಳಸುವ ಆ್ಯಪಲ್‌ನ ಫೇಸ್‌ಟೈಮ್ ಆ್ಯಪ್‌ನಲ್ಲಿ ಕೂಡ ಪರಿಚಯಿಸಲಾಗಿದೆ. ಗೂಗಲ್ ಮೀಟ್, ಝೂಮ್, ಸ್ಕೈಪ್ ಇತ್ಯಾದಿಗಳಲ್ಲಿ ಈ ಆಯ್ಕೆ ಈಗಾಗಲೇ ಇದೆ.

ನೋಟಿಫಿಕೇಶನ್ ಸಾರಾಂಶ: ನಿರ್ದಿಷ್ಟ ಆ್ಯಪ್‌ನಿಂದ ಹಲವು ನೋಟಿಫಿಕೇಶನ್‌ಗಳು ಬರುವಾಗ ಅವುಗಳಿಗೆಲ್ಲವೂ ಒಂದು ಗುಚ್ಛವಾಗಿ ಬರುತ್ತವೆ. ಹೀಗಾಗಿ ಪ್ರತಿಯೊಂದಕ್ಕೂ ಹಲವು ಬಾರಿ ಧ್ವನಿ ಮೊಳಗುವ ಸಮಸ್ಯೆ ಇರುವುದಿಲ್ಲ. ಅವುಗಳನ್ನು ಒಂದೊಂದಾಗಿ ನೋಡುವ ಆಯ್ಕೆ ಅಲ್ಲಿಂದಲೇ ದೊರೆಯುತ್ತದೆ.

ಲೈವ್ ಟೆಕ್ಸ್ಟ್: ಆಂಡ್ರಾಯ್ಡ್‌ನಲ್ಲಿರುವ ಗೂಗಲ್ ಲೆನ್ಸ್ ಮಾದರಿಯಲ್ಲಿ, ಅದಕ್ಕಿಂತಲೂ ಉತ್ತಮ ವೈಶಿಷ್ಟ್ಯಗಳನ್ನು ಲೈವ್ ಟೆಕ್ಸ್ಟ್ ಎಂಬ ವೈಶಿಷ್ಟ್ಯದ ಮೂಲಕ ಪರಿಚಯಿಸಲಾಗಿದೆ. ಕ್ಯಾಮೆರಾ ಆನ್ ಮಾಡಿದ ತಕ್ಷಣ, ಬಲ ಮೂಲೆಯಲ್ಲಿ ಒಂದು ಪಾರದರ್ಶಕವಾದ ಪುಟ್ಟ ಬಾಕ್ಸ್ ಕಾಣಿಸುತ್ತದೆ. ಯಾವುದೇ ಮುದ್ರಿತ ಪಠ್ಯ, ಬೋರ್ಡ್ ಅಥವಾ ಕೈಬರಹವಿದ್ದರೆ, ಆ ಬಾಕ್ಸ್ ಒತ್ತಿದ ತಕ್ಷಣ ಅಲ್ಲಿಂದ ಪಠ್ಯವನ್ನು ನಕಲಿಸಲು ಅಥವಾ ಅದರ ಬಗ್ಗೆ ಸರ್ಚ್ ಎಂಜಿನ್ ಮೂಲಕ ಹುಡುಕುವುದಕ್ಕೆ ಅಲ್ಲಿಂದಲೇ ಆಯ್ಕೆ ಗೋಚರಿಸುತ್ತದೆ. ಚಿತ್ರದಲ್ಲಿ ಫೋನ್ ಸಂಖ್ಯೆಯಿದ್ದರೆ ಆ ಸಂಖ್ಯೆಗೆ ನೇರವಾಗಿ ಡಯಲ್ ಮಾಡಬಹುದು. ಇದರಲ್ಲಿ ಇಂಗ್ಲಿಷ್ ಮತ್ತು ಹಲವಾರು ವಿದೇಶೀ ಭಾಷೆಗಳಿಗೆ ಬೆಂಬಲವಿದೆ. ಗೂಗಲ್ ಲೆನ್ಸ್‌ನಂತೆ ಕನ್ನಡಕ್ಕೆ ಬೆಂಬಲ ಬಂದಿಲ್ಲ.

ಕಂಟ್ರೋಲ್ ಸೆಂಟರ್‌ನಲ್ಲಿ ಪಠ್ಯ ಗಾತ್ರ ಬದಲಿಸುವ ಆಯ್ಕೆ ಹಾಗೂ ಫೋಕಸ್ ಮೋಡ್

ಪಠ್ಯದ ಗಾತ್ರ ಬದಲು: ಐಒಎಸ್ 15ರಲ್ಲಿ ಹೊಸದಾಗಿ ಪರಿಚಯಿಸಿದ ವೈಶಿಷ್ಟ್ಯವೆಂದರೆ, ಪಠ್ಯದ ಗಾತ್ರವನ್ನು ಹೋಂಸ್ಕ್ರೀನ್‌ಗೆ ಬೇರೆ, ನಿರ್ದಿಷ್ಟ ಆ್ಯಪ್‌ಗಳಿಗೆ ತಕ್ಕಂತೆ ಬೇರೆಯದಾಗಿಯೇ ಹೊಂದಿಸಬಹುದು. ಹಿಂದೆಲ್ಲಾ ಒಂದು ಪಠ್ಯದ ಗಾತ್ರ ಬದಲಿಸಿದರೆ ಅದು ಪೂರ್ತಿ ಐಫೋನ್‌ಗೆ (ಎಲ್ಲ ಆ್ಯಪ್‌ಗಳಿಗೆ) ಅನ್ವಯವಾಗುತ್ತಿತ್ತು. ಈಗ ಹಾಗಿಲ್ಲ. ಏನು ಮಾಡಬೇಕೆಂದರೆ, ಮೊದಲು ಸೆಟ್ಟಿಂಗ್ಸ್‌ನಲ್ಲಿ ಕಂಟ್ರೋಲ್ ಸೆಂಟರ್‌ಗೆ ಹೋಗಿ, Text Size ಎಂಬುದನ್ನು ಮೇಲ್ಭಾಗಕ್ಕೆ (ಹಸಿರು ಪ್ಲಸ್ ಗುರುತು ಒತ್ತಿ) ಸೇರಿಸಿಕೊಳ್ಳಬೇಕು. ನಂತರ ಯಾವುದಾದರೂ ಒಂದು ಆ್ಯಪ್ ತೆರೆದು, ಕಂಟ್ರೋಲ್ ಸೆಂಟರ್‌ನಲ್ಲಿ ಪಠ್ಯದ ಗಾತ್ರದ ಐಕಾನ್ (AA) ಒತ್ತಿದರೆ, ಅಲ್ಲಿಯೇ ಪಠ್ಯ ಗಾತ್ರ ಬದಲಿಸುವ ಆಯ್ಕೆ ಕಾಣಿಸುತ್ತದೆ. ಅದನ್ನು ಎಲ್ಲ ಆ್ಯಪ್‌ಗಳಿಗೂ ಅನ್ವಯಿಸಬೇಕೇ ಅಥವಾ ಆ ಆ್ಯಪ್‌ಗೆ ಮಾತ್ರ ಪಠ್ಯ ಬದಲಿಸಬೇಕೇ ಎಂದು ಆಯ್ಕೆ ಮಾಡಿಕೊಳ್ಳಬಹುದು.

❦ ಸುಭಾಷಿತ ❦

ಪಾಪಿಗೆ ತೋರಿದ ಮರುಕ ಪಾಪಕ್ಕೆ ನೀಡಿದ ಮುಕ್ತ ಪರವಾನಗಿ. -ಕೆ.ಎಸ್.ನಿಸಾರ್ ಅಹಮದ್

ಸಾಂಸ್ಕೃತಿಕ ಚಟುವಟಿಕೆಗಳ ಪುನರಾರಂಭ ಮುನ್ನೆಚ್ಚರಿಕೆ ಪಾಲನೆ, ಸ್ವಯಂಶಿಸ್ತು ಅಗತ್ಯ

ಕೊರೊನಾ ನಿಯಂತ್ರಣಕ್ಕಾಗಿ ಚಿತ್ರಮಂದಿರಗಳ ಮೇಲೆ ಹೇರಲಾಗಿದ್ದ ಆಸನ ಮಿತಿ ನಿರ್ಬಂಧವನ್ನು ಸರ್ಕಾರ ಅ.1ರಿಂದ ಹಿಂತೆಗೆದುಕೊಂಡಿರುವುದು ಚಿತ್ರೋದ್ಯಮದ ಹಿತದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ. ಕೊರೊನಾ ಕಾರಣದಿಂದಾಗಿ ಸಿನಿಮಾ ಪ್ರದರ್ಶನ, ಚಿತ್ರೀಕರಣ ಸೇರಿದಂತೆ ಚಿತ್ರೋದ್ಯಮದ ಬಹುತೇಕ ಚಟುವಟಿಕೆಗಳು ಕುಂಟತೊಡಗಿ ಸಾವಿರಾರು ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದರು. ಚಿತ್ರೋದ್ಯಮದೊಂದಿಗೆ ರಂಗಭೂಮಿ ಕೂಡ ಕೊರೊನಾದ ಹಾವಳಿಯಿಂದ ತತ್ತರಿಸಿತ್ತು. ಚಲನಚಿತ್ರ ಮತ್ತು ರಂಗಭೂಮಿಯ ಕಲಾವಿದರು ಹಾಗೂ ತಂತ್ರಜ್ಞರು ಜೀವನೋಪಾಯದ ದಾರಿ ಕಾಣದೆ ಕಂಗಾಲಾಗಿದ್ದರು. ಕೊರೊನಾ ನಿರ್ಬಂಧಗಳು ಸಡಿಲಗೊಂಡು ವಿವಿಧ ಕ್ಷೇತ್ರಗಳ ಮೇಲೆ ಹೇರಲಾಗಿದ್ದ ನಿರ್ಬಂಧಗಳನ್ನು ಸಡಿಲಿಸಲಾಗಿದ್ದರೂ ಸಿನಿಮಾ ಪ್ರದರ್ಶನಕ್ಕೆ ಮಾತ್ರ ಪೂರ್ಣ ಪ್ರಮಾಣದ ಅವಕಾಶ ದೊರೆತಿರಲಿಲ್ಲ. ಶಾಲೆ-ಕಾಲೇಜುಗಳ ಆರಂಭ ಸೇರಿದಂತೆ, ಜನಜೀವನ ಸಹಜಸ್ಥಿತಿಗೆ ಮರಳುತ್ತಿರುವ ಹಿನ್ನೆಲೆಯಲ್ಲಿ ಚಿತ್ರಮಂದಿರಗಳು ಹಾಗೂ ರಂಗಮಂದಿರಗಳು ಪೂರ್ಣ ಪ್ರಮಾಣದ ಆಸನ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸುವಂತೆ ಹಿರಿಯ ಕಲಾವಿದರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಆ ಕೋರಿಕೆಗೆ ಸ್ಪಂದಿಸಿರುವ ಸರ್ಕಾರವು ಚಿತ್ರಮಂದಿರಗಳು ಹಾಗೂ ರಂಗಮಂದಿರಗಳಿಗೆ ವಿಧಿಸಲಾಗಿದ್ದ ಶೇ 50ರ ಆಸನ ಮಿತಿಯನ್ನು ಅ. 1ರಿಂದ ಅನ್ವಯವಾಗುವಂತೆ ತೆರವುಗೊಳಿಸಿದೆ.

ಅಕ್ಟೋಬರ್ 3ರಿಂದ ಪಬ್‌ಗಳನ್ನು ತೆರೆಯುವುದಕ್ಕೂ ಅವಕಾಶ ದೊರೆತಿದೆ. 6ನೇ ತರಗತಿಯಿಂದ ಶಾಲಾ-ಕಾಲೇಜುಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸಲು ಸರ್ಕಾರ ನಿರ್ಧರಿಸಿದೆ. ಇದರೊಂದಿಗೆ ಕೊರೊನಾ ನಿಯಂತ್ರಣದ ಕಾರಣದಿಂದಾಗಿ ವಿಧಿಸಲಾಗಿದ್ದ ನಿರ್ಬಂಧಗಳನ್ನು ಬಹುಮಟ್ಟಿಗೆ ಹಿಂತೆಗೆದುಕೊಂಡಿದ್ದರೂ, ಕೋವಿಡ್ ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆ ಆಗಬಾರದೆಂಬ ಉದ್ದೇಶದಿಂದ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗಿನ ಕರ್ಫ್ಯೂ ಜಾರಿಯಲ್ಲಿರಲಿದೆ.

ಶೇ 50ರಷ್ಟು ಸೀಟು ಭರ್ತಿಗೆ ಅವಕಾಶವಿದ್ದರೂ ಕೆಲವೇ ಚಿತ್ರಮಂದಿರಗಳು ಮಾತ್ರ ಈವರೆಗೆ ಕಾರ್ಯ ನಿರ್ವಹಿಸುತ್ತಿದ್ದುವು. ನಿರ್ವಹಣಾ ವೆಚ್ಚವೂ ಸಂಗ್ರಹವಾಗುವುದಿಲ್ಲ ಎನ್ನುವ ಕಾರಣಕ್ಕೆ ಏಕತೆರೆಯ ಅನೇಕ ಚಿತ್ರಮಂದಿರಗಳು ಬಾಗಿಲು ತೆರೆಯಲು ಹಿಂಜರಿದಿದ್ದುವು. ಹೆಚ್ಚಿನ ಬಂಡವಾಳ ಹೂಡಿ ಸಿನಿಮಾಗಳನ್ನು ನಿರ್ಮಿಸಿದ ನಿರ್ಮಾಪಕರು ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಹಿಂದೆಮುಂದೆ ನೋಡುತ್ತಿದ್ದರು. ರಂಗಮಂದಿರಗಳಲ್ಲಿ ಕೂಡ ಉತ್ಸಾಹದ ವಾತಾವರಣ ಇರಲಿಲ್ಲ. ಕೆಲವೇ ವಾರಾಂತ್ಯದ ರಂಗ ಪ್ರದರ್ಶನಗಳಷ್ಟೇ ನಡೆಯುತ್ತಿದ್ದುವು. ಈಗ ಪೂರ್ಣ ಆಸನ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸಲು ಅವಕಾಶ ದೊರೆತಿರುವುದರಿಂದ ಅಕ್ಟೋಬರ್ 15ರಿಂದ ಪ್ರದರ್ಶನ ಪುನರಾರಂಭಿಸಲು ಎಲ್ಲ ಚಿತ್ರಮಂದಿರಗಳು ಹಾಗೂ ರಂಗಮಂದಿರಗಳು ಸಿದ್ಧತೆ ನಡೆಸುತ್ತಿವೆ. ಸಿನಿಮಾ ಮತ್ತು ರಂಗಭೂಮಿ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ನಿಧಾನವಾಗಿ ಚುರುಕಾಗಲಿವೆ. ಸ್ಟಾರ್ ನಟರ ದೊಡ್ಡ ಬಜೆಟ್‌ನ ಸಿನಿಮಾಗಳು ತೆರೆಕಾಣಲು ದಿನಗಣನೆ ನಡೆಸುತ್ತಿವೆ. ಹೊಸ ಸಿನಿಮಾಗಳ ಬಿಡುಗಡೆಯೊಂದಿಗೆ ನವರಾತ್ರಿ ಹಬ್ಬದ ಅಬ್ಬರವೂ ಸೇರಿಕೊಂಡು ಚಿತ್ರಮಂದಿರಗಳಲ್ಲಿ ಉಲ್ಲಾಸದ ವಾತಾವರಣ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಈ ಸಂಭ್ರಮ ಆತಂಕಕ್ಕೆ ಎಡೆಕೊಡದಂತೆ ಚಿತ್ರಮಂದಿರಗಳ ಜೊತೆಗೆ ಸಾರ್ವಜನಿಕರೂ ಎಚ್ಚರಿಕೆ ವಹಿಸಬೇಕಾಗಿದೆ. ಚಿತ್ರಮಂದಿರಗಳಿಗೆ ಬರುವವರು ಸಂಯಮದಿಂದ ನಡೆದುಕೊಳ್ಳುವುದರ ಜೊತೆಗೆ ಕೊರೊನಾ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸಿನಿಮಾ ಅಭಿಮಾನಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಜನಪ್ರಿಯ ಕಲಾವಿದರು ಮಾಡಬೇಕಾಗಿದೆ. ಒಂದೂವರೆ ವರ್ಷದಿಂದ ಮನರಂಜನೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳು ಎದುರಿಸಿದ ಸಂಕಷ್ಟಗಳನ್ನು ನೆನಪಿನಲ್ಲಿರಿಸಿಕೊಂಡು, ಆ ದುಃಸ್ಥಿತಿ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕಾಗಿದೆ.

ಚಿತ್ರಮಂದಿರಗಳಿಗೆ ಬರುವವರು ಸಂಯಮದಿಂದ ನಡೆದುಕೊಳ್ಳುವುದರ ಜೊತೆಗೆ ಕೊರೊನಾ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಪ್ರೇಕ್ಷಕರಲ್ಲಿ ಜಾಗೃತಿ ಮೂಡಿಸಬೇಕು

ಪ್ರಸ್ತುತ ಕರ್ನಾಟಕದಲ್ಲಿ ಕೋವಿಡ್ ದೃಢ ಪ್ರಮಾಣ ಶೇ 0.66ರ ಆಸುಪಾಸಿನಲ್ಲಿದೆ. ಈ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇರುವ ಪ್ರದೇಶಗಳಲ್ಲಿ ಸಂಪೂರ್ಣ ಆಸನ ಸಾಮರ್ಥ್ಯದೊಂದಿಗೆ ಚಿತ್ರಮಂದಿರಗಳು ಕಾರ್ಯ ನಿರ್ವಹಿಸಬಹುದಾಗಿದೆ. ಕೋವಿಡ್ ದೃಢ ಪ್ರಮಾಣ ಶೇ 1ಕ್ಕಿಂತ ಹೆಚ್ಚು ಇದ್ದರೆ ಶೇ 50ರಷ್ಟು ಆಸನಗಳ ಭರ್ತಿಗೆ ಅವಕಾಶ ನೀಡಲಾಗುವುದು ಹಾಗೂ ಸೋಂಕು ದೃಢ ಪ್ರಮಾಣ ಶೇ 2ಕ್ಕೂ ಹೆಚ್ಚಾಗಿದ್ದರೆ ಚಿತ್ರಮಂದಿರಗಳನ್ನು ಮುಚ್ಚಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿ ಹೇಳಿದ್ದಾರೆ. ಚಿತ್ರಮಂದಿರಗಳ ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಗೊತ್ತುಪಡಿಸಿದ್ದು, ಪ್ರತಿ ಪ್ರದರ್ಶನಕ್ಕೆ ಮೊದಲು ಸಂಪೂರ್ಣ ಚಿತ್ರಮಂದಿರವನ್ನು ಸ್ವಚ್ಛಗೊಳಿಸಬೇಕಾಗಿದೆ. ಕನಿಷ್ಠ 1 ಡೋಸ್ ಲಸಿಕೆ ಹಾಕಿಸಿಕೊಂಡವರಿಗಷ್ಟೇ ಚಿತ್ರಮಂದಿರಗಳಿಗೆ ಪ್ರವೇಶ ಕಲ್ಪಿಸಲಾಗುವುದು. ಗರ್ಭಿಣಿ ಮತ್ತು ಮಕ್ಕಳಿಗೆ ಸಿನಿಮಾಮಂದಿರಗಳಿಗೆ ಅವಕಾಶವಿಲ್ಲ. ಈ ಎಲ್ಲ ನಿಯಮಗಳನ್ನು ಚಿತ್ರಮಂದಿರಗಳ ಮಾಲೀಕರು ಚಾಚೂ ತಪ್ಪದೆ ಅನುಸರಿಸಬೇಕಾಗಿದೆ. ಸ್ವಲ್ಪ ಹೆಚ್ಚು-ಕಡಿಮೆಯಾದರೆ ಚಿತ್ರಮಂದಿರಗಳನ್ನು ಮತ್ತೆ ಮುಚ್ಚುವ ಪರಿಸ್ಥಿತಿ ಎದುರಾಗಬಹುದಾದ್ದರಿಂದ, ಕೊರೊನಾ ಸೋಂಕು ತಡೆಗಟ್ಟುವ ದಿಸೆಯಲ್ಲಿ ಅಗತ್ಯವಾದ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದು ಅಗತ್ಯ. ಅಕ್ಟೋಬರ್ ತಿಂಗಳಲ್ಲಿ ಹಬ್ಬಗಳು ಸಾಲು ಸಾಲಾಗಿ ಬರುವುದರಿಂದ ಜನರ ಓಡಾಟವೂ ಹೆಚ್ಚಲಿದೆ. ನೆರೆಯ ಕೇರಳ, ಮಹಾರಾಷ್ಟ್ರದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿವೆ. ಹಾಗಾಗಿ, ಸರ್ಕಾರ ಗೊತ್ತುಪಡಿಸಿರುವ ಕೋವಿಡ್ ಮಾರ್ಗಸೂಚಿಯನ್ನು ಅನುಸರಿಸುವುದರ ಜೊತೆಗೆ ನಾಗರಿಕರು ಸ್ವಯಂ ಶಿಸ್ತನ್ನು ಅನುಸರಿಸದೇ ಹೋದರೆ ಬೂದಿ ಮುಚ್ಚಿದ ಕೆಂಡದಂತಿರುವ ಕೊರೊನಾ ಸೋಂಕು ಮತ್ತೆ ಯಾವಾಗ ಬೇಕಾದರೂ ಉಲ್ಬಣಿಸುವ ಸಾಧ್ಯತೆಯಿದೆ. ಅದಕ್ಕೆ ಅವಕಾಶ ಕಲ್ಪಿಸದಂತೆ ಹೊಣೆಗಾರಿಕೆಯನ್ನು ಸರ್ಕಾರ ಮತ್ತು ಸಾರ್ವಜನಿಕರು ಒಟ್ಟಾಗಿ ಪ್ರದರ್ಶಿಸಬೇಕಾಗಿದೆ.

ದಿನದ ಟ್ವೀಟ್

ಇದೆಂಥಾ ಬೆಳವಣಿಗೆ?

2021ರ ಸಖರೊವ್ ಪ್ರಶಸ್ತಿಗೆ ಯುರೋಪ್ ಸಂಸತ್ತಿನಲ್ಲಿನ ಸಮಾಜವಾದಿ ಮತ್ತು ಪ್ರಜಾಪ್ರಭುತ್ವವಾದಿ ಗುಂಪಿನಿಂದ 11 ಮಂದಿ ಅಫ್ಗನ್ ಮಹಿಳೆಯರು ನಾಮನಿರ್ದೇಶನಗೊಂಡಿದ್ದಾರೆ. ಅಫ್ಗಾನಿಸ್ತಾನದಲ್ಲಿ ಮಾತ್ರ ಹುಡುಗಿಯರನ್ನು ಶಾಲೆಗಳಿಗೆ ಕಳಿಸಬೇಕೇ ಬೇಡವೇ ಎಂಬುದನ್ನು ತಾಲಿಬಾನ್ ಇನ್ನೂ ನಿರ್ಧರಿಸುವುದರಲ್ಲೇ ಇದೆ.

ಅಶೋಕ್ ಸ್ವೈನ್, ಪ್ರಾಧ್ಯಾಪಕ

ಕಿಡಿನುಡಿ

ಕನ್ಹಯ್ಯಾ ಅವರು ತಮ್ಮನ್ನು ತಾವೇ ಪಕ್ಷದಿಂದ ಉಚ್ಚಾಟಿಸಿಕೊಂಡಿದ್ದಾರೆ. ಪಕ್ಷ ತೊರೆಯುವಿರಾ ಎಂದು ನಾನು ಮತ್ತು ಕೆಲವು ಮುಖಂಡರು ಅವರನ್ನು ಪ್ರಶ್ನಿಸಿದ್ದೆವು. ಆದರೆ ಅವೆಲ್ಲವೂ ವದಂತಿ ಎಂದು ಅವರು ಹೇಳಿದ್ದರು. ಅವರು ಪಕ್ಷದ ಜತೆಗೆ ನೇರವಾಗಿ ಮತ್ತು ಸತ್ಯಯುತವಾಗಿ ಇರಲಿಲ್ಲ.

ಡಿ. ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಭಾನುವಾರ, 29-9-1996

• **ಮಾನ್ಯತೆಗೆ ತಾಲಿಬ್ ಉಗ್ರರ ಮನವಿ**

ಕಾಬೂಲ್, ಸೆ. 28 (ರಾಯಿಟರ್ಸ್)– ಅಫ್ಗಾನಿಸ್ತಾನದ ಹೊಸ ಸರ್ಕಾರಕ್ಕೆ ಮಾನ್ಯತೆ ನೀಡುವಂತೆ, ರಾಜಧಾನಿಯನ್ನು ವಶಪಡಿಸಿಕೊಂಡಿರುವ ತಾಲಿಬ್ ಉಗ್ರಗಾಮಿಗಳು ಅಂತರರಾಷ್ಟ್ರೀಯ ಸಮುದಾಯದಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ನಡುವೆ, ಹಿಂದಿನ ಕಮ್ಯುನಿಸ್ಟ್ ಸರ್ಕಾರದ ಇನ್ನಿಬ್ಬರು ಅಧಿಕಾರಿಗಳನ್ನು ನೇಣಿಗೇರಿಸಲಾಗಿದೆ ಎಂದು ನೂತನ ಸರ್ಕಾರ ಹೇಳಿಕೊಂಡಿದೆ.

‘ಇಸ್ಲಾಂ ದೇಶವೆಂದು ಅಫ್ಗಾನಿಸ್ತಾನವನ್ನು ಪರಿಗಣಿಸಬೇಕೆಂದು ನಾವು ಅಂತರರಾಷ್ಟ್ರೀಯ ಸಮುದಾಯವನ್ನು ಕೇಳಿಕೊಳ್ಳುತ್ತೇವೆ’ ಎಂದು ಇಸ್ಲಾಮಿಕ್ ವಿದ್ಯಾರ್ಥಿ ಸಂಘಟನೆಯ ವಕ್ತಾರ ವಾಕಿಲ್ ಅಹ್ಮದ್ ಅವರು ದಕ್ಷಿಣ ಅಫ್ಗನ್‌ನಲ್ಲಿರುವ ಕಂದಹಾರ್ ಪಟ್ಟಣದಿಂದ ದೂರವಾಣಿ ಮೂಲಕ ಸುದ್ದಿಸಂಸ್ಥೆ ಜೊತೆ ಮಾತನಾಡುತ್ತಾ ತಿಳಿಸಿದರು.

• **ತಿಹಾರ್ ಜೈಲಿಗೆ ಸುಖ್‌ರಾಂ**

ನವದೆಹಲಿ, ಸೆ. 28 (ಯುಎನ್ಐ, ಪಿಟಿಐ)– ಕೇಂದ್ರದ ಸಂಪರ್ಕ ಖಾತೆ ಮಾಜಿ ಸಚಿವ ಸುಖ್‌ರಾಂ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ವಿಶೇಷ ನ್ಯಾಯಾಧೀಶ ಅಜಿತ್ ಭಾರಿಹೋಕ್ ಅವರು, ಆದಾಯ ಮೂಲಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಪ್ರಕರಣದ ಜಾಮೀನು ಅರ್ಜಿಯ ತೀರ್ಪನ್ನು ಅ.1ಕ್ಕೆ ಕಾಯ್ದಿರಿಸಿದರು. ನಂತರ ಅವರನ್ನು ತಿಹಾರ್ ಜೈಲಿಗೆ ಕಳುಹಿಸಲಾಯಿತು.

• **ರಾಜ್ಯದ ಹಣಕಾಸು ಸ್ಥಿತಿ ಉತ್ತಮ ಸಿದ್ದರಾಮಯ್ಯ**

ಬೆಂಗಳೂರು, ಸೆ. 28– ರಾಜ್ಯ ಸರ್ಕಾರದ ಹಣಕಾಸಿನ ನಿರ್ವಹಣೆ ಉತ್ತಮ ಸ್ಥಿತಿಯಲ್ಲಿದೆ. ಕಳೆದ 1995–96ನೇ ಸಾಲಿನಲ್ಲಿ ಒಮ್ಮೆಯೂ ಕೂಡ ‘ಓವರ್ ಡ್ರಾಫ್ಟ್’ ಪಡೆದಿಲ್ಲ. ರಿಸರ್ವ್ ಬ್ಯಾಂಕ್‌ನಿಂದಲೂ ರಾಜ್ಯ ಪ್ರಶಂಸೆಯನ್ನು ಗಳಿಸಿದೆ ಎಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಇಲ್ಲಿ ತಿಳಿಸಿದರು.

ಬೆಂಗಳೂರು ವರದಿಗಾರರ ಕೂಟ ಮತ್ತು ಬೆಂಗಳೂರು ಪ್ರೆಸ್ ಕ್ಲಬ್ ಜಂಟಿಯಾಗಿ ನಡೆಸಿದ ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಳೆದ ಆರ್ಥಿಕ ವರ್ಷದಲ್ಲಿ ರಾಷ್ಟ್ರದ ಆರ್ಥಿಕ ಬೆಳವಣಿಗೆ ಶೇ 4.8ರಷ್ಟು ಇದ್ದಾಗ ರಾಜ್ಯದಲ್ಲಿ ಇದರ ಪ್ರಮಾಣ ಶೇ 5.3ರಷ್ಟು ದಾಖಲೆಯಾಗಿದೆ. ಇದೇ ರೀತಿಯಲ್ಲಿ ತಲಾ ವೆಚ್ಚ ಸೇರಿ ರಾಜ್ಯವು ರಾಷ್ಟ್ರದಲ್ಲೇ ಪ್ರಥಮ ಸ್ಥಾನ ಗಳಿಸಿರುವುದನ್ನು ಯೋಜನಾ ಆಯೋಗವೇ ಹೇಳಿದೆ ಎಂದು ಅವರು ತಿಳಿಸಿದರು.

ಅಸಹಾಯಕತೆಯಿಂದ ಮೈಕೊಡವಿ ಎಚ್ಚೆತ್ತುಕೊಳ್ಳುವ ಸಮಯ ಎದುರಿಗಿದೆ

ಸಿಂಡ್ರೆಲಾ ಈಗ ಬದಲಾಗಿದ್ದಾಳೆ

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

ಬೆಲಾರಸ್ ದೇಶದ ವಿರೋಧ ಪಕ್ಷದ ನಾಯಕಿ ಮಾರಿಯಾ ಕಲೆಸ್ನಿಕಾವಾ ಅವರಿಗೆ ಇದೇ 7ರಂದು ಹನ್ನೊಂದು ವರ್ಷಗಳ ಜೈಲು ಶಿಕ್ಷೆ ಕಾಯಂಗೊಳಿಸಲಾಯಿತು. ಅದಕ್ಕೆ ಆಕೆ ತನ್ನ ಪ್ರತಿಭಟನೆಯನ್ನು ದಾಖಲಿಸಿದ ರೀತಿ ವಿನೂತನವಾಗಿತ್ತು. ತುಟಿಗೆ ಗಾಢ ಕೆಂಪಿನ ಲಿಪ್‌ಸ್ಟಿಕ್ ಲೇಪಿಸಿಕೊಂಡು ಮುಖದಲ್ಲಿ ಕಿರುನಗೆ ಸೂಸಿ ಫೋಟೊಗೆ ಪೋಸ್ ಕೊಡುವ ಮೂಲಕ ಅವರು ಪ್ರತಿಭಟಿಸಿದರು. ಆಳುವ ಸರ್ಕಾರದ ನಾಯಕನನ್ನು ಟೀಕಿಸಿದ ಆಕೆಯ ಮೇಲೆ ದೇಶದ ಭದ್ರತೆಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ಈ ಶಿಕ್ಷೆ ನೀಡಲಾಯಿತು. ತನ್ನದೊಂದು ಟೀಕೆಗೆ ಹೆದರಿದ ಸರ್ಕಾರ ತನಗೆ ಇಷ್ಟು ದೊಡ್ಡ ಶಿಕ್ಷೆ ಕೊಟ್ಟಿದ್ದಕ್ಕೆ ತಾನು ಹೆದರುವುದಿಲ್ಲ ಮತ್ತು ದ್ವೇಷವೇ ರಾಜಕೀಯವಲ್ಲ ಎಂಬ ಸಂದೇಶವನ್ನು ಅವರು ಈ ಚಿತ್ರದ ಮೂಲಕ ರವಾನಿಸಿದರು. ದಿಟ್ಟತನವೆಂದರೇನು ಎಂಬುದನ್ನು ಅವರು ಮಾತಿಲ್ಲದೇ ವ್ಯಾಖ್ಯಾನಿಸಿದರು. ತನ್ನನ್ನು ಟೀಕಿಸುವವರಿಗೆ ಕಠಿಣ ಶಿಕ್ಷೆ ಕಾದಿದೆ ಎಂದು ಎಚ್ಚರಿಸಲು ಹೀಗೆ ಮಾಡಿದ ಸರ್ಕಾರದ ಕ್ರಮವನ್ನು ಅಂಜುಬುರುಕತನ ಎಂದು ಸಾರುವಂತೆ, ಪ್ರಪಂಚಕ್ಕೇ ತಿಳಿಯುವಂತೆ ಆಕೆಯ ಫೋಟೊ ಜಗತ್ತಿನಾದ್ಯಂತ ಅಚ್ಚಿಗೆ ಹೋಯಿತು.

ಇನ್ನೊಂದೆಡೆ, ಬೀದಿಗೆ ಬಂದರೆ, ಹಕ್ಕುಗಳನ್ನು ಕೇಳಿದರೆ ಬಂದೂಕಿನಿಂದ ಸುಟ್ಟು ಹಾಕಲಾಗುವುದು ಎಂದು ಹೆದರಿಸುತ್ತಿದ್ದ ತಾಲಿಬಾನಿಯರ ಬೆದರಿಕೆಗೆ ಜಗ್ಗದೆ, ಮಹಿಳಾ ಹಕ್ಕುಗಳನ್ನು ಹತ್ತಿಕ್ಕುತ್ತಿರುವುದನ್ನು ಪ್ರತಿಭಟಿಸಿ ಸುಮಾರು ನಲವತ್ತರಿಂದ ಐವತ್ತು ಅಫ್ಗನ್ ಮಹಿಳೆಯರು ಬೀದಿಗೆ ಬಂದು ಪ್ರತಿಭಟಿಸಿದರು. ಆಗ ಅವರ ಹಣೆಯನ್ನು ಗುರಿಯಾಗಿಸಿ ತಾಲಿಬಾನಿಯರು ಬಂದೂಕು ಹಿಡಿದರೆ, ಜಗ್ಗದ ಹೆಣ್ಣುಮಕ್ಕಳು ನೇರ ತಲೆ ಎತ್ತಿ ದಿಟ್ಟಿಸಿ ನೋಡಿದ ಚಿತ್ರಗಳೂ ಪ್ರಕಟವಾದವು (ಚಿತ್ರ ತೆಗೆದವರನ್ನು ಶಿಕ್ಷಿಸಿದ ಸುದ್ದಿ ಆಮೇಲೆ ಬಂತು). ದಿನವೂ ಸಾಯುತ್ತಾ ಬದುಕುವುದಕ್ಕಿಂತಲೂ ಒಮ್ಮೆಗೇ ಸಾಯುವುದು ಕಡಿಮೆ ಶಿಕ್ಷೆ ಎಂಬುದನ್ನು ಹೇಳುವಂತಿತ್ತು ಈ ಚಿತ್ರ.

ಅಫ್ಗನ್‌ನ ಬೆಟ್ಟ ಕಣಿವೆಗಳ ಸುಂದರ ಸ್ತ್ರೀ ಪುರುಷರನ್ನೊಳಗೊಂಡ, ಶ್ರೀಮಂತ ಉಡುಪು, ಆಭರಣಗಳ ಪರಂಪರೆಯೇ ಇರುವ ಪ್ರದೇಶದಲ್ಲಿ ಬಂದೂಕಿನ ಭಾಷೆ ಬಿಟ್ಟು ಇನ್ನೊಂದು ಬೇಕಿಲ್ಲ ಎನ್ನುವುದಾದರೆ, ಅದು ಸಾವಲ್ಲದೇ ಮತ್ತಿನ್ನೇನು? ‘ನೀವು ಸಾಧಿಸಿದ್ದಾದರೂ ಏನು’ ಎಂದು ಆ ಹೆಣ್ಣುಮಕ್ಕಳು ನೇರ ನೋಟದ ಬಾಣ ಎಸೆಯುತ್ತಿರುವುದನ್ನು ಅರ್ಥ ಮಾಡಿಕೊಳ್ಳಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ, ಈ ಹೆಣ್ಣುಮಕ್ಕಳ ಇಂಥ ನಡೆಗಳು ಜಗತ್ತಿಗೇ ಏನನ್ನೋ ಹೇಳುತ್ತಿವೆ ಎಂಬುದನ್ನು ಜಗದ ಉಳಿವಿನ ಪ್ರಶ್ನೆಯಾಗಿ ಗಂಭೀರವಾಗಿ ಸ್ವೀಕರಿಸಬೇಕಾಗಿದೆ. ಹೆದರಿಕೆ, ಬೆದರಿಕೆಯ ಈ ಪೊಳ್ಳು ಲೋಕವು ಕುಸಿಯುತ್ತಿದ್ದು ಇದನ್ನು ಉಳಿಸಬೇಕೆಂದರೆ ಪಾಲನೆ ಪೋಷಣೆಯ ನಮ್ಮ ನಡೆಯೊಂದೇ ದಾರಿ, ನಿಮಗೆ ಆಗದಿದ್ದಲ್ಲಿ ಜಾಗ ಖಾಲಿ ಮಾಡಿ ಎಂಬುದೇ ಅಲ್ಲಿ ಅಡಕಗೊಂಡಿರುವ ಮಾತಾಗಿದೆ. ಆ ದಾರಿಯಲ್ಲಿ ಸಾಗಲು ಅಹಮ್ಮಿನ ಬಂದೂಕುಗಳನ್ನು ಕೆಳಗಿಳಿಸದೇ ಅನ್ಯ ದಾರಿಯಿಲ್ಲ.

ಮೇಲಿನ ಎರಡು ಸಂದರ್ಭಗಳಲ್ಲಿ ದಬ್ಬಾಳಿಕೆ ಮತ್ತು ಪ್ರತಿಭಟನೆಗಳು ನೇರ ಕಣ್ಣಿಗೆ ಕಾಣುತ್ತಿವೆ. ಆದರೆ, ಇದ್ಯಾವುದೂ ಒಂದೇ ಸಲ ಧುತ್ತೆಂದು ಹುಟ್ಟಿದ್ದಲ್ಲ. ಹೆಣ್ಣನ್ನು ಅಧೀನ ಸ್ಥಿತಿಯಲ್ಲಿಡಲು ಸಾಮಾಜಿಕ ಸಮ್ಮತಿಯನ್ನು ಬೇರೆ ಬೇರೆ ರೂಪದಲ್ಲಿ ಉತ್ಪಾದಿಸಲಾಗುತ್ತದೆ. ತಾನು ಅಸಹಾಯಕಳು ಎಂಬುದನ್ನು ಅವಳೇ ಒಪ್ಪಿಕೊಂಡು ಅಲವತ್ತುಕೊಳ್ಳುವಂತೆ ಮಾಡಲಾಗುತ್ತದೆ.

ನಮ್ಮ ಶಾಸಕಿಯರೇ ಮನೆಯಲ್ಲಿ ಬಿಟ್ಟು ಬಂದಿರುವ ಹೆಣ್ಣುಮಕ್ಕಳ ರಕ್ಷಣೆಯ ಕುರಿತು ಸದನದಲ್ಲಿ ಆತಂಕ ವ್ಯಕ್ತಪಡಿಸುತ್ತಾರೆ. ಹೆಣ್ಣೇ ಒಂದು ಪರ್ಯಾಯ ಶಕ್ತಿಯಾಗಿದ್ದು ಅದನ್ನು ಒಗ್ಗೂಡಿಸಿಕೊಳ್ಳಲು ನಾವು ವಿಫಲವಾಗಿರುವುದರ ಸಂಕೇತವಾಗಿಯೂ ಇದನ್ನು ಕಾಣಬಹುದು. ಹೀಗೆ ಹೆಣ್ಣಿನ ಮನಃಸ್ಥಿತಿಯನ್ನು ಕುಗ್ಗಿಸುವಲ್ಲಿ ಚಿಕ್ಕಂದಿನಿಂದಲೇ ನಮಗೆ ಹೇಳಲಾಗುವ ರಮ್ಯ ಕತೆಗಳ ಪಾತ್ರವೂ ಇರುತ್ತದೆ. ನಾವು ಅಲ್ಲಿಂದಲೇ ಬದಲಾವಣೆಗೆ ಕೈ ಹಾಕಬೇಕಿದೆ. ಇಂತಹ ಪ್ರಯತ್ನಗಳು ಈಗ ಆಗತೊಡಗಿವೆ. ಹೆಣ್ಣಿನ ಚಿತ್ರಣ ಮತ್ತು ಗಂಡಿನ ಚಿತ್ರಣಗಳೆರಡೂ ಬದಲಾಗಬೇಕಿದೆ.

ನಮ್ಮ ಜನಪದ ಕತೆಗಳಲ್ಲಿ ಏಳು ಮಲ್ಲಿಗೆ ತೂಕದ ರಾಜಕುಮಾರಿಯನ್ನು ರಕ್ಷಿಸಿ ತರಲು ಎಂದೋ ಒಬ್ಬ ಧೀರ ರಾಜಕುಮಾರ ಬರುತ್ತಾನೆ. ಅದಕ್ಕಾಗಿ ಅವಳು ಕಾದು ಕುಳಿತಿರಬೇಕು. ಕೊನೆಗೂ ಒಂದು ದಿನ ಆತ ಬಂದು ಅವಳ ಸೆರೆ ಬಿಡಿಸಿ ಕರೆದುಕೊಂಡು ಹೋಗಿ ಅವಳನ್ನು ಮದುವೆಯಾಗುತ್ತಾನೆ. ಆ ನಂತರ ಅವರು ಸುಖವಾಗಿ ಬಾಳಿದರು ಎಂದು ಕತೆ ಕೊನೆಯಾಗುತ್ತದೆ. ಅದರಂತೆ ಪಾಶ್ಚಾತ್ಯರ ಸಿಂಡ್ರೆಲಾ ಕತೆ ಕೂಡ. ದುಷ್ಟ ಮಲತಾಯಿ ಕೊಡುವ ಕಷ್ಟಗಳಿಗೆ ಅಳುತ್ತಾ ಕೂರುವ ಆಕೆಗೆ ಅದೃಷ್ಟದ ಸಹಾಯ ಸಿಗುತ್ತದೆ. ಅವಳ ಉಳಿದು ಹೋದ ಒಂದು ಬೂಟಿನ ಅಳತೆ ಹುಡುಕುತ್ತಾ ಅವಳನ್ನು ಅರಸುವ ರಾಜಕುಮಾರ, ಅವಳ ಬಳಿ ಬಂದು ‘ನಿನ್ನನ್ನು ಮದುವೆಯಾಗುತ್ತೇನೆ’ ಅಂದಾಕ್ಷಣವೇ ಅವಳು ಸಂತೋಷದಿಂದ ಮದುವೆಗೆ ಸಮ್ಮತಿಸಿಬಿಡುತ್ತಾಳೆ. ಈ ಕತೆ ಒಂದು ರೂಪಕವೇ ಆಗುವಷ್ಟು ಜನಪ್ರಿಯವಾಗಿ, ಗಡಿದಾಟಿ ಹೆಣ್ಣುಮಕ್ಕಳ ಕನಸಿನ ಒಂದು ಭಾಗವೇ ಆಗಿದೆ.



ಈಚೆಗೆ ‘ನ್ಯೂ ಸಿಂಡ್ರೆಲಾ’ ಎಂಬ ಇಂಗ್ಲಿಷ್ ಮ್ಯೂಸಿಕಲ್ ಸಿನಿಮಾವೊಂದು ಬಂದಿದ್ದು, ಅದು ಸಿಂಡ್ರೆಲಾ ಎಂಬ ರೂಪಕವನ್ನು ಬದಲಿಸಿದೆ. ಇಲ್ಲಿನ ಸಿಂಡ್ರೆಲಾ ಮಲತಾಯಿ ಕೊಡುವ ಕಷ್ಟಗಳಿಗೆ ಅಳುತ್ತಾ ಕೂರುವವಳಲ್ಲ. ಬದಲಿಗೆ ತನ್ನನ್ನು ಕೂಡಿ ಹಾಕಿರುವ ನೆಲಕೋಣೆಯಲ್ಲೇ ತನ್ನ ಕನಸುಗಳಿಗೆ ಜೀವ ಕೊಡುವವಳು. ತನ್ನ ಹೊಲಿಗೆ ಕಲೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಂಡು, ತಾನೊಬ್ಬಳು ಡಿಸೈನರ್ ಆಗಬೇಕು, ಅದಕ್ಕೊಂದು ಅವಕಾಶ ಸಿಗುವುದಕ್ಕಾಗಿ ಕಾಯಬೇಕು ಎಂದು ತನ್ನ ಚೈತನ್ಯಕ್ಕೆ ನೀರೆರೆದುಕೊಳ್ಳುತ್ತಾ, ಲೋಕವನ್ನು ಪ್ರೀತಿಸುವವಳು. ಅಂತಹ ಅವಕಾಶವನ್ನೂ ಸಾಹಸದಿಂದ ಸೃಷ್ಟಿಸಿಕೊಳ್ಳುತ್ತಾಳೆ.

ರಾಜಕುಮಾರ ಸಾಮಾನ್ಯನ ವೇಷದಲ್ಲಿದ್ದಾಗ ಅವನ ಪರಿಚಯವಾಗಿರುತ್ತದೆ. ಆತ ಅವಳ ಪ್ರೀತಿಗೆ ಬಿದ್ದು, ಮುಂದೆ ಅವಳನ್ನು ಮದುವೆಯಾಗಲು ಕೇಳುತ್ತಾನೆ. ಆದರೆ, ‘ನನಗೆ ನನ್ನ ಕೆಲಸದ ಹಾದಿಯಲ್ಲಿ ಅವಕಾಶವೊಂದು ತೆರೆದಿದ್ದು, ನಾನಲ್ಲಿಗೆ ತೆರಳಬೇಕಿದೆ. ನಿನ್ನ ಜೊತೆ ಮದುವೆ ನನಗೆ ಹೊಂದಿಕೆಯಾಗುವುದಿಲ್ಲ’ ಎನ್ನುತ್ತಾಳಾಕೆ. ಅವಳ ಸ್ವಾವಲಂಬನೆಯ ದಾರಿ ಅವನಲ್ಲೂ ಬದಲಾವಣೆ ತಂದು, ಆತ ತನಗೆ ಇಷ್ಟವಿಲ್ಲದ ರಾಜಪಟ್ಟವನ್ನು ನಿರಾಕರಿಸಿ ತಾನೂ ಸ್ವಂತ ದುಡಿಮೆಯ ಹಾದಿ ಹಿಡಿಯುವ ನಿರ್ಧಾರಕ್ಕೆ ಬರುತ್ತಾನೆ. ಆಕೆ ಅವನಿಗೆ ಮದುವೆಯ ಭರವಸೆಯನ್ನು ನೀಡುವುದಿಲ್ಲವಾದರೂ ಅವನ ಪ್ರೀತಿಯನ್ನು ನಿರಾಕರಿಸುವುದಿಲ್ಲ.

ಇಲ್ಲಿನ ಸಿಂಡ್ರೆಲಾ ತನ್ನ ಬದುಕಿನ ದಾರಿಯ ನಿರ್ಣಯವನ್ನು ತಾನೇ ತೆಗೆದುಕೊಳ್ಳುವವಳು. ಸಿಡುಕುವ ಮಲತಾಯಿಗೂ ಕಷ್ಟ ಇದೆ ಎನ್ನುವುದಕ್ಕೆ ಕಿವಿಯಾಗುವವಳು. ಇಲ್ಲಿನ ರಾಣಿ, ರಾಜತ್ವದ ಅಮಲಿನಲ್ಲಿ ಪ್ರೀತಿಯ ಸಂಬಂಧಗಳನ್ನೇ ಕಳೆದುಕೊಂಡಿರುವ ರಾಜನಿಗೆ ಅದರ ನಿಸ್ಸಾರವನ್ನು ಕಾಣಿಸುವವಳು. ಮಾತ್ರವಲ್ಲ, ಮಗನಿಗೇ ಯಾಕೆ? ರಾಜ್ಯವೊಂದನ್ನು ಸಮರ್ಥವಾಗಿ ಆಳುವುದರ ಕುರಿತು ಖಚಿತ ಕಣ್ನೋಟ ಮತ್ತು ಆಕಾಂಕ್ಷೆ ಇರುವ ಮಗಳಿಗೂ ಪಟ್ಟ ಕೊಡಬಹುದು ಎಂಬುದನ್ನು ರಾಜ ಮನಗಾಣುವಂತೆ ಮಾಡಬಲ್ಲವಳು. ರಾಜಕುಮಾರನನ್ನು ಮೆಚ್ಚಿಸುವುದಕ್ಕೋಸ್ಕರವೇ ಅಲಂಕರಿಸಿಕೊಳ್ಳುವ, ಕುಣಿಯುವ, ದಣಿಯುವ ಹೆಣ್ಣುಮಕ್ಕಳನ್ನು ಸೃಷ್ಟಿಸುತ್ತಿರುವವರು ನಾವೇ ಎನ್ನುವುದನ್ನೂ ಈ ಸಿನಿಮಾ ಸೂಚಿಸುತ್ತದೆ. ಎಲ್ಲಿಯತನಕ ನಾವು ಹೀಗೆ ಕುಣಿಯುತ್ತಾ, ದಣಿಯುತ್ತಾ ಇರುತ್ತೇವೋ ಅಲ್ಲಿಯ ತನಕ ನಮ್ಮನ್ನು ಮಣಿಸುತ್ತಲೇ ಇರುವ ವ್ಯವಸ್ಥೆಯೂ ಗಟ್ಟಿಯಾಗುತ್ತಲೇ ಹೋಗುತ್ತದೆ.

ಒಂದೆಡೆ, ಮುಚ್ಚಿಡುವ, ದಂಡಿಸುವ ಪಡೆ. ಇನ್ನೊಂದೆಡೆ, ಅಳುವ ಅಸಹಾಯ ಪಡೆ. ಇದಲ್ಲದ ಆತ್ಮವಿಶ್ವಾಸದ ನಡೆ ಸಾಧ್ಯವಿದೆ. ಇಲ್ಲೊಂದು ಚೆಲುವಿನ ಲೋಕವೂ ಇದೆ. ಬದಲಾದ ಸಿಂಡ್ರೆಲಾಳಂತೆ ಹೊಸ ರೂಪಕವು ಹೊಸ ಲೋಕ ಸೃಷ್ಟಿಸಬಲ್ಲುದು. ಕಲ್ಪನೆಯ ಲೋಕ ವಾಸ್ತವಕ್ಕಿಳಿಯಲು ನಮ್ಮ ಸುತ್ತಿನ ಹೆಣ್ಣುಮಕ್ಕಳ ದಿಟ್ಟ ಹೋರಾಟಗಳು ಪ್ರೇರಣೆಗಳಾಗಬಲ್ಲುವು.

ಲೇಖಕಿ: ಪ್ರಾಧ್ಯಾಪಕಿ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ತರೀಕೆರೆ

ಚುರುಮುರಿ

ಟ್ವಿಟರ್ ಟೂರ್ನಿ

• ಮಣ್ಣೆರಾಜು

ಕೊರೊನಾಗೆ ಹೆದರಿ ಐಪಿಎಲ್ ಟೂರ್ನಿ ವಿದೇಶಿ ಪಾಲಾಗಿದೆ. ಆದರೆ, ದೇಶೀಯ ರಾಜಕೀಯ ತಂಡಗಳು ಟ್ವಿಟರ್ ಟೂರ್ನಿಯಲ್ಲಿ ಭರ್ಜರಿ ಬ್ಯಾಟಿಂಗ್, ಬೌಲಿಂಗ್ ನಡೆಸಿ ಅಭಿಮಾನಿಗಳಿಗೆ ಭರಪೂರ ಮನರಂಜನೆ ನೀಡುತ್ತಿವೆ.

‘ಜೆಡಿಎಸ್‌ನವರು ಅಧಿಕಾರಕ್ಕೆ ಬರುವ ಗಿರಾಕಿಗಳಲ್ಲ, 30 ಸೀಟ್‌ನಲ್ಲೇ ಸಿಕ್ಕಸಿಕ್ಕವರ ಜೊತೆ ಹೋಗುವರು...’ ಎಂದು ಕಾಂಗ್ರೆಸ್ ತಂಡದ ಸಿದ್ದರಾಮಣ್ಣ ಗೂಗ್ಲಿ ಎಸೆದರು.

ಬಾಲನ್ನು ಬಡಿದು ಬೌಂಡರಿಗಟ್ಟಿದ ಜೆಡಿಎಸ್ ತಂಡದ ನಾಯಕ ಕುಮಾರಣ್ಣ, ‘ಜೆಡಿಎಸ್‌ನ ಅನ್ನ, ಗೊಬ್ಬರದಿಂದ ಬೆಳೆದ ಸಿದ್ದರಾಮಣ್ಣ ಯಾರೋ ಕಟ್ಟಿದ ಹುತ್ತ ಹೊಕ್ಕು ಮರುಹುಟ್ಟು ಪಡೆಯುವ ಪರಾವಲಂಬಿ ಸಸ್ಯ...’ ಎಂದು ಅವರ ಸಿದ್ಧಕಲೆಗೆ ತಿರುಗೇಟು ನೀಡಿದರು.

ಟ್ವಿಟರ್ ಟೂರ್ನಿಯ ಅನುಭವಿ ಆಟಗಾರ, ಬಿಜೆಪಿ ತಂಡದ ನಾಯಕ ಬಸಣ್ಣ ಎದುರಾಳಿ ಬೌಲರ್‌ಗಳ ವೈಡ್ ಬಾಲ್‌ಗಳನ್ನು ಕಡೆಗಣಿಸಿ, ಅಪಾಯಕಾರಿ ಎಸೆತಗಳನ್ನು ರಕ್ಷಣಾತ್ಮಕವಾಗಿ ಎದುರಿಸುತ್ತಾರೆ. ನಡುನಡುವೆ ಲೂಸ್ ಬಾಲ್‌ಗಳನ್ನು ಬೌಂಡರಿಗಟ್ಟಿ ತಂಡದ ಸ್ಕೋರ್ ಹೆಚ್ಚಿಸುವ ಕಲಾತ್ಮಕ ಆಟ ಆಡುತ್ತಿದ್ದಾರೆ.

ಕಾಂಗ್ರೆಸ್ ತಂಡದ ನಾಯಕ ಡಿಕೆಶಿಯಣ್ಣ, ದೌರ್ಬಲ್ಯವಿರುವ ಪ್ರತಿಸ್ಪರ್ಧಿ ಆಟಗಾರರನ್ನು ಗುರುತಿಸಿ ಕ್ಯಾಚ್ ಹಿಡಿದು, ಎದುರಾಳಿ ತಂಡವನ್ನು ದುರ್ಬಲಗೊಳಿಸಿ ಪಂದ್ಯ ಗೆಲ್ಲುವ ಗೇಮ್‌ಪ್ಲಾನ್ ಮಾಡುತ್ತಿದ್ದಾರೆ.

ಈ ಬಾರಿ ಕಪ್ ಗೆಲ್ಲಲೇಬೇಕು ಎಂದು ತಮ್ಮ ತಂಡದ ಆಟಗಾರರನ್ನು ಕುಮಾರಣ್ಣ ಹುರಿದುಂಬಿಸಿದ್ದಾರೆ. ಆಟಗಾರರಿಗೆ ಹೆಚ್ಚಿನ ತರಬೇತಿ ನೀಡಲು ಕುಮಾರಣ್ಣ ತಮ್ಮ ಹೋಂ ಪಿಚ್‌ನಲ್ಲಿ ನೆಟ್ ಪ್ರ್ಯಾಕ್ಟೀಸ್ ವ್ಯವಸ್ಥೆ ಮಾಡಿ ಆಟಗಾರರ ಫಿಟ್‌ನೆಸ್, ಸಾಮರ್ಥ್ಯ ಹೆಚ್ಚಿಸುವುದರೊಂದಿಗೆ ಸಮರ್ಥ ಆಟಗಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಸಿದರು.

ಫೈನಲ್ ಪಂದ್ಯದಲ್ಲಿ ಕಪ್ ಗೆಲ್ಲುವುದೇ ತಂಡಗಳ ಗುರಿ ಆಗಿರುವುದರಿಂದ ಅಭ್ಯಾಸ ಪಂದ್ಯಗಳ ಟ್ವಿಟರ್ ಟೂರ್ನಿಯಲ್ಲಿ ಎದುರಾಳಿ ತಂಡಗಳಿಗೆ ಕಪ್ಪು ಬಳಿದು, ಶಕ್ತಿ ಕುಂದಿಸಲು ಎಲ್ಲ ತಂಡಗಳು ತಂತ್ರಗಾರಿಕೆ ಆಟ ಆಡುತ್ತಿವೆ.

ಸಂಗತ

ಗ್ರಾಮೀಣ ಜನಾರೋಗ್ಯಕ್ಕೆ ಬಾಧಕವಾಗದಿರಲಿ

ಆರೋಗ್ಯ ಸಂಸ್ಕೃತಿ ವಕ್ತಾರರ ಸೇವಾಬಾಹುಳ್ಯ ಹಿಮ್ಮೆಟ್ಟಿಸುವ ಕೆಲಸಕ್ಕೆ ಸರ್ಕಾರ ಕೈಹಾಕಿದೆ

• ಮಲ್ಲಿಕಾರ್ಜುನ ಕಡಕೋಳ

ಆರೋಗ್ಯ ಉಪಕೇಂದ್ರಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರ ಇತ್ತೀಚೆಗೆ ನಿರ್ಧರಿಸಿದೆ. ಅದಕ್ಕಾಗಿ ₹ 478.91 ಕೋಟಿ ಮೀಸಲಿಟ್ಟಿದೆ. ಉನ್ನತೀಕರಿಸುವ ಪ್ರಯತ್ನ ಒಳ್ಳೆಯದೆ. ಆದರೆ, ಆರೋಗ್ಯ ಉಪಕೇಂದ್ರಗಳಿಗೆ ಗುತ್ತಿಗೆ ಆಧಾರಿತ ಸೇವೆಯನ್ನು ಹೇರುವ ಒಳಹುನ್ನಾರ ಇದರ ಹಿಂದೆ ಇದೆ. ಕಡಿಮೆ ಪಗಾರಕ್ಕೆ ಅನನುಭವಿ ನರ್ಸ್‌ಗಳನ್ನು ನೇಮಿಸುವ ಮೂಲಕ ಅವರ ಕೈಗೆ ಗ್ರಾಮೀಣ ಜನಾರೋಗ್ಯ ಒಪ್ಪಿಸುವ ಅನಾರೋಗ್ಯಕರ ಬೆಳವಣಿಗೆಯಿದು.

ಹಳ್ಳಿಗಳ ಸರ್ಕಾರಿ ಆರೋಗ್ಯ ಉಪಕೇಂದ್ರಗಳಿಗೆ ಗ್ರಾಮ್ಯಜನ್ಯ ಸ್ವಾಸ್ಥ್ಯ ಪರಂಪರೆ ಇದೆ. ಅದೊಂದು ಆರೋಗ್ಯ ಸಂಸ್ಕೃತಿಯಾಗಿ ತಾಯ್ತನದ ಪ್ರೀತಿಯಂತೆ ಬೆಳೆದುಬಂದಿದೆ. ಉಪಕೇಂದ್ರಗಳು ಸ್ಥಾಪನೆಗೊಂಡ ಕಾಲದಿಂದಲೂ ಅಲ್ಲಿನ ನಿವಾಸಿಗಳಾದ ಮಹಿಳಾ ಆರೋಗ್ಯ ಸಹಾಯಕಿಯರು (ಎಎನ್‌ಎಂ) ಸಮುದಾಯ ಆರೋಗ್ಯದ ಅವಿಚ್ಛಿನ್ನ ಭಾಗವಾಗಿದ್ದಾರೆ.

ಸರ್ಕಾರಿ ನೌಕರರಾದ ಅವರು ಎಎನ್‌ಎಂ (ಆಕ್ಸಿಲ್ಯರಿ ನರ್ಸ್ ಮಿಡ್‌ವೈಫ್), ಎಲ್‌ಎಚ್‌ವಿ (ಲೇಡಿ ಹೆಲ್ತ್ ವಿಸಿಟರ್), ಸಿಪಿಎಚ್‌ಎನ್ (ಸರ್ಟಿಫಿಕೇಟ್ ಆಫ್ ಪಬ್ಲಿಕ್ ಹೆಲ್ತ್ ನರ್ಸಿಂಗ್) ಹೀಗೆ ಜನಾರೋಗ್ಯ ಸೇವೆಗೆ ಅಗತ್ಯವೆನಿಸಿದ ಮೂರು ಮಹತ್ವದ ನಾಲ್ಕು ವರ್ಷಗಳ ತರಬೇತಿ ಪಡೆದವರು. ಕೇಂದ್ರ ಸರ್ಕಾರ ಧೇನಿಸಿರುವ ನಾಲ್ಕು ಗೋಡೆಗಳ ನಡುವಿನ ಆಸ್ಪತ್ರೆಯ ನರ್ಸ್‌ಗಳ ಸೇವೆಯು ಗ್ರಾಮ ಸಮುದಾಯಕ್ಕೆ ಒಪ್ಪುವಂತಹುದಲ್ಲ.

ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟ (ಐಪಿಎಚ್‌ಎಸ್) ಗುಣಾತ್ಮಕ ನೀತಿಗನುಗುಣವಾಗಿ ಆರೋಗ್ಯ ಕೇಂದ್ರ, ಉಪಕೇಂದ್ರಗಳು ಸಂರಚನೆಗೊಂಡಿವೆ. ಐದು ಸಾವಿರ ಜನಸಂಖ್ಯೆ ಹೊಂದಿರುವ ಪ್ರತಿಯೊಂದು ಉಪಕೇಂದ್ರದಲ್ಲಿ ಒಬ್ಬ ಮಹಿಳಾ, ಒಬ್ಬ ಪುರುಷ ಆರೋಗ್ಯ ಸಹಾಯಕ ಮಂಜೂರಾತಿ ಹುದ್ದೆಗಳಿರುತ್ತವೆ. ಮೂವತ್ತು ಸಾವಿರ ಜನಸಂಖ್ಯೆಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರ. ರಾಜಕೀಯ ಪ್ರಭಾವದಿಂದ ಕೆಲವು ಕಡೆ ಏರುಪೇರು.

ಐಪಿಎಚ್‌ಎಸ್ ಪ್ರಕಾರ, ಕರ್ನಾಟಕದ ಜನಸಂಖ್ಯೆಗೆ ಅನುಗುಣವಾಗಿ ಇಪ್ಪತ್ತು ಸಾವಿರ ಉಪಕೇಂದ್ರಗಳು, ನಲವತ್ತು ಸಾವಿರ ಆರೋಗ್ಯ ಸಹಾಯಕರ ಹುದ್ದೆಗಳಿರಬೇಕು. ಪ್ರಸ್ತುತ ಹತ್ತು ಸಾವಿರ ಮಹಿಳೆಯರು, ನಾಲ್ಕು ಸಾವಿರ ಪುರುಷ ಆರೋಗ್ಯ ಸಹಾಯಕರು, ಅಂದರೆ ಕಾಲುಭಾಗದಷ್ಟು ಸಿಬ್ಬಂದಿ ಮೂಲಕ ಸರ್ಕಾರ ನಲವತ್ತಾರು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ನಿರುಕಿಸುತ್ತಿದೆ.

ಶತಮಾನಕ್ಕಿಂತಲೂ ಹಿರಿದಾದ ಗ್ರಾಮೀಣ ಆರೋಗ್ಯ ಸಹಾಯಕರ ಸೇವಾಬಾಹುಳ್ಯ ಹಿಮ್ಮೆಟ್ಟಿಸುವ ಕೆಲಸಕ್ಕೆ ಸರ್ಕಾರ ಕೈ ಹಾಕಿದೆ. ಎಂಎಲ್‌ಎಚ್‌ಪಿ (ಮಿಡ್ಲ್ ಲೆವೆಲ್ ಹೆಲ್ತ್ ಪ್ರೊವೈಡರ್) ಹೆಸರಿನಡಿ ಗುತ್ತಿಗೆ ಆಧಾರದಡಿ ನೇಮಿಸಿಕೊಂಡ ನರ್ಸ್‌ಗಳನ್ನು ಹತ್ತು ಜಿಲ್ಲೆಗಳ ಆರೋಗ್ಯ ಉಪಕೇಂದ್ರಗಳಿಗೆ ನೇಮಿಸಲಾಗಿದೆ. ಕೇಂದ್ರ ಸರ್ಕಾರದ ಈ ಪ್ರಾಯೋಗಿಕ ಯೋಜನೆ ಫಲಕಾರಿಯಾಗಿಲ್ಲ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸುವ ಉಮೇದು. ಅಷ್ಟಕ್ಕೂ ಆರೋಗ್ಯ ಸಹಾಯಕರು ಇದುವರೆಗೆ ಮಾಡದಿರುವ ಹೆಚ್ಚಿನ ಸೇವೆಗಳು ಪ್ರಸ್ತುತ ಯೋಜನೆಯಲ್ಲಿಲ್ಲ. ಅದಕ್ಕೆ ಬದಲು ಆರೋಗ್ಯ ಸಹಾಯಕರ ಹುದ್ದೆ ಸಮೇತ ಉಪಕೇಂದ್ರಗಳನ್ನು ಅಭಿವೃದ್ಧಿಪಡಿಸಲಿ.

ಎಂಬಿಬಿಎಸ್‌ಪದವೀಧರರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೊಸದಾಗಿ ನೇಮಕಗೊಂಡಾಗ ಅಲ್ಲಿನ ಅನುಭವಿ ಹಿರಿಯ ಆರೋಗ್ಯ ಸಹಾಯಕರ ಸಹಕಾರ, ಸಲಹೆ, ನೆರವು, ಮಾರ್ಗದರ್ಶನ ಪಡೆಯುತ್ತಾರೆ. ಆರೋಗ್ಯ ಸಹಾಯಕರೊಂದಿಗೆ ಉಪಕೇಂದ್ರಗಳಲ್ಲಿ ವಾರದ ಕ್ಲಿನಿಕ್ ನಡೆಸುವ ಮೂಲಕ ಜನಾರೋಗ್ಯ ಸೇವೆಗಳ ಸಂದಾಯ.

ಸಿಡುಬು, ಕುಷ್ಠರೋಗ, ನಾರುಹುಣ್ಣು, ಪೋಲಿಯೊದಂತಹ ಮಾರಕರೋಗಗಳ ನಿರ್ಮೂಲನೆ ಮಾಡಿದ ಶ್ರೇಯಸ್ಸು ಆರೋಗ್ಯ ಸಹಾಯಕರಿಗೆ ಸಲ್ಲುತ್ತದೆ. ಮಲೇರಿಯಾ, ಫೈಲೇರಿಯಾ, ಕಾಲರಾ, ಏಡ್ಸ್, ಕ್ಯಾನ್ಸರ್ ಮುಂತಾದ ನಲವತ್ತಾರು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ನಿರ್ವಹಣೆ. ವರ್ತಮಾನದ ಕೋವಿಡ್ ಸೇನಾನಿಗಳಾಗಿ ಅಹರ್ನಿಶಿ ದುಡಿಯುತ್ತಿರುವ ಕೆಲವರು ಕೊರೊನಾಕ್ಕೆ ಬಲಿಯಾಗಿದ್ದಾರೆ, ಹಲ್ಲೆಗೀಡಾಗಿದ್ದಾರೆ. ದಿನವೊಂದಕ್ಕೆ ಆರೋಗ್ಯ ಸಹಾಯಕಿಯೊಬ್ಬಳು ಮುನ್ನೂರು, ನಾನೂರು ಜನರಿಗೆ ಕೋವಿಡ್ ಲಸಿಕೆ ನೀಡುವ ಮೂಲಕ ಮೂರನೇ ಅಲೆಯನ್ನು ಹತ್ತಿಕ್ಕಲು ನೆರವಾಗುತ್ತಿದ್ದಾಳೆ. ಅಚ್ಚರಿಯೆಂದರೆ ಮಾಧ್ಯಮಗಳು, ಮಂತ್ರಿ ಮಹೋದಯರ ಕಣ್ಣಿಗೆ ಡಾಕ್ಟರ್, ನರ್ಸ್‌ಗಳು ಮಾತ್ರ ಕಾಣಿಸುವುದು.

ಅಪ್ಪಟ ಸೇವಾ ವಲಯದ ಆರೋಗ್ಯ ಇಲಾಖೆಯ ಕಾರ್ಯನಿರ್ವಾಹಕ ನೌಕರರಿಗೆ ಸರ್ಕಾರವು ಅಧಿಕಾರಿ ಎಂಬ ಪದನಾಮ ಬದಲಾವಣೆಗಳ ಅಮಲೇರಿಸಿದೆ. ಇಲಾಖೆಯಲ್ಲಿ ‘ಡಿ’ ದರ್ಜೆಯ ನೌಕರರನ್ನು ಹೊರತುಪಡಿಸಿ ಎಲ್ಲರಿಗೂ ಅಧಿಕಾರಿ ಎಂಬ, ನಯಾಪೈಸೆಯ ಅಧಿಕಾರವಿಲ್ಲದ ಪಟ್ಟಕಟ್ಟಿ ಕೂಡಿಸಿದೆ. ಉಪಕೇಂದ್ರಗಳೆಂಬ ಆರೋಗ್ಯ ರಥದ ಎರಡು ಚಕ್ರಗಳಂತಿದ್ದ ಮಹಿಳಾ ಮತ್ತು ಪುರುಷ ಆರೋಗ್ಯ ಸಹಾಯಕರ ಪದನಾಮ ಬದಲಿಸಿ ಒಡಕು ಹುಟ್ಟಿಸಿದೆ. ತನ್ಮೂಲಕ ಗ್ರಾಮ ಸಮುದಾಯದ ಜನಾರೋಗ್ಯದ ಮೇಲೆ ದುಷ್ಪರಿಣಾಮ.

ಹಳ್ಳಿಗಳಿಗೆ ವೈದ್ಯರನ್ನು ಕರೆತರಲು ಸರ್ಕಾರ ಕೋಟ್ಯಂತರ ರೂಪಾಯಿ ಸುರಿಯುವ ಹರಸಾಹಸ ಮಾಡಿ ವಿಫಲಗೊಂಡಿದೆ. ಆರೋಗ್ಯ ಕೇಂದ್ರಗಳ ಅಗತ್ಯಗಳಿಗೆ ಎಂಬಿಬಿಎಸ್ ವೈದ್ಯರ ಅಗತ್ಯವಿಲ್ಲ. ಸೇವಾ ನಿರತ ಆರೋಗ್ಯ ಸಹಾಯಕರ ವಿಜ್ಞಾನ ವಿಷಯ ಹಾಗೂ ಇತರ ಅರ್ಹತೆಗಳ ಆದ್ಯತೆ ಮೇರೆಗೆ ಮೂರು ವರ್ಷಗಳ ನಿಗದಿತ ಕಂಡೆನ್ಸ್ಡ್ ಕೋರ್ಸ್ ಎಂಬಿಬಿಎಸ್ ಪದವಿ ತರಬೇತಿ ಸಾಕು. ಅಂಥವರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಾಗ ಸೇವೆ ದೊರಕಬಲ್ಲದು. ತನ್ಮೂಲಕ ಸುಸ್ಥಿರ ಗ್ರಾಮೀಣ ಆರೋಗ್ಯ ಸೇವೆಗಳ ಭಾಗ್ಯ. ತಾಲ್ಲೂಕು ಕೇಂದ್ರಗಳ ಆಸ್ಪತ್ರೆಗಳಿಗೆ ತಜ್ಞವೈದ್ಯರ ಸೇವೆ ಕರಾರುವಾಕ್ಕಾಗಿರಲಿ.

ವಾಚಕರ ವಾಣಿ

ಎಲ್ಲೂ ಇಲ್ಲದ ನಿಯಮ ಸಹಕಾರಿ ಸಂಘದಲ್ಲಿ!

ಕೆಲವು ಸಹಕಾರಿ ಸಂಘಗಳು ಇತ್ತೀಚೆಗೆ ನೇಮಕಾತಿಗಾಗಿ ಹೊರಡಿಸಿದ ಪತ್ರಿಕಾ ಪ್ರಕಟಣೆಗಳಲ್ಲಿ, ಅವು ಅಪೇಕ್ಷಿಸುವ ವಿದ್ಯಾರ್ಹತೆಯು ಗಾಬರಿ ಹುಟ್ಟಿಸುವಂತಿರುತ್ತದೆ. ಗುಮಾಸ್ತ ಹುದ್ದೆಗೆ ಎಂ.ಕಾಂ., ಎಂ.ಬಿ.ಎ., ಎಂ.ಸಿ.ಎ. ವಿದ್ಯಾರ್ಹತೆ ಅಪೇಕ್ಷಿಸಲಾಗಿರುತ್ತದೆ. ಆದರೆ ಎಂ.ಎ., ಎಂ.ಎಸ್ಸಿ. ಪ್ರಸ್ತಾಪ ಇರುವುದಿಲ್ಲ. ಕೆಪಿಎಸ್‌ಸಿ, ಯುಪಿಎಸ್‌ಸಿ ಮತ್ತು ಬ್ಯಾಂಕಿಂಗ್ ನೇಮಕಾತಿ ಮಂಡಳಿಗಳು ಗುಮಾಸ್ತ ಹುದ್ದೆಗೆ ಬಯಸುವ ವಿದ್ಯಾರ್ಹತೆಯು ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ. ಅದು ಬಿ.ಎ, ಬಿ.ಕಾಂ, ಬಿ.ಎಸ್ಸಿ. ಹೀಗೆ ಯಾವುದೂ ಇರಬಹುದು. ಕಾಲೇಜುಗಳಲ್ಲಿ ನಡೆಯುವ ಕ್ಯಾಂಪಸ್ ಆಯ್ಕೆ, ಉದ್ಯೋಗ ಮೇಳಗಳಲ್ಲಿ ಪ್ರತಿಷ್ಠಿತ ಕಂಪನಿಗಳು ಅಂಗೀಕೃತಗೊಂಡ ವಿಶ್ವವಿದ್ಯಾಲಯದ ಯಾವುದೇ ಪದವಿಯನ್ನಷ್ಟೇ ನೇಮಕಾತಿ ವೇಳೆ ಪರಿಗಣಿಸುತ್ತವೆ. ಅಲ್ಲಿ ಎಲ್ಲೂ ಇಲ್ಲದ ನಿಯಮ ಈ ಸಹಕಾರಿ ಸಂಘಗಳಲ್ಲಿ ಏಕೆ?

ಸ್ನಾತಕೋತ್ತರ ಪದವಿ ಪಡೆದವರಿಗೆ ಬೇರೆ ಉದ್ಯೋಗಾವಕಾಶಗಳಿವೆ. ಸಹಕಾರಿ ರಂಗದಲ್ಲೂ ಅವರನ್ನೇ ಆಯ್ಕೆ ಮಾಡಿದರೆ, ಅದೇ ಗ್ರಾಮದ ಬಡ ಕೃಷಿಕನ ಮಗ ಪಡೆದ ಬಿ.ಎ. ಪದವಿಗೇನು ಬೆಲೆ? ಕೆಲಸಕ್ಕೂ ವಿದ್ಯೆಗೂ ನಮ್ಮಲ್ಲಿ ಸಂಬಂಧವೇ ಇಲ್ಲ. ಯಾವುದೇ ಪದವಿ ಪಡೆದವರು ಸಹ ಕೆಲಸಕ್ಕೆ ಆಯ್ಕೆಯಾದ ಮೇಲೆ ಅಲ್ಲಿ ಬೇರೆಯೇ ತರಬೇತಿ ಪಡೆಯಲೇಬೇಕು. ಸಹಕಾರಿ ಸಂಘಗಳು ಈ ನೇಮಕಾತಿ ಪ್ರಾಧಿಕಾರಗಳಿಗಿಂತ ಮೇಲಲ್ಲ ಎಂಬುದು ನಮ್ಮ ನಂಬಿಕೆ. ಯಾವುದೇ ವಿಷಯದಲ್ಲಿ ಪದವಿ ಪಡೆದವರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ. ಸ್ನಾತಕೋತ್ತರ ವ್ಯಾಸಂಗ ಪಡೆದವರಿಗೆ, ಸೇವಾ ಅನುಭವ ಇರುವವರಿಗೆ ಬೇಕಾದರೆ ಆಯ್ಕೆಯ ವೇಳೆ ಹೆಚ್ಚುವರಿ ಅಂಕಗಳ ಮೂಲಕ ಆದ್ಯತೆ ನೀಡಿ. ಒಟ್ಟಿನಲ್ಲಿ ಇಂಥ ಜಾಹೀರಾತುಗಳ ಮೂಲಕ ಸಹಕಾರಿ ಸಂಘಗಳು ನಗೆಪಾಟಲಿಗೆ ಗುರಿಯಾಗದಿರಲಿ.

ಡಾ. ಶ್ರೀಕಾಂತ್ ರಾವ್, ಸಿದ್ದಾಪುರ, ಕುಂದಾಪುರ

ಇದೂ ಒಂದು ಶಿಕ್ಷೆಯೇ?

‘ತಲೆದಂಡ’ ಅಂದರೆ ಸರ್ಕಾರಿ ಭಾಷೆಯಲ್ಲಿ ವರ್ಗಾವಣೆ ಅಂತ ಅರ್ಥವೇ? ಏಕೆಂದರೆ ಸರ್ಕಾರಿ ಅಧಿಕಾರಿಗಳ ಮೇಲೆ ಗುರುತರ ಆರೋಪಗಳು ಬಂದು, ಅವು ಸಾಬೀತಾಗುವ ಹಂತಕ್ಕೆ ಬಂದಾಗ, ಅವರನ್ನು ಬೇರೆ ಇಲಾಖೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ. ಆಗ, ‘ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ, ಅವರ ತಲೆದಂಡ ಆಯಿತು’ ಎನ್ನುತ್ತದೆ ಸರ್ಕಾರ. ಅಧಿಕಾರಿಗಳು ಎಲ್ಲಿದ್ದರೂ, ಯಾವ ಇಲಾಖೆಯಲ್ಲಿ ಕೆಲಸ ಮಾಡಿದರೂ ಅವರಿಗೆ ಸಂಬಳ ಮತ್ತು ಇತರ ಸೌಲಭ್ಯಗಳು ಇದ್ದೇ ಇರುತ್ತವೆ. ಹಾಗಿದ್ದಮೇಲೆ ಅವರು ಮಾಡಿದ ತಪ್ಪುಗಳಿಗೆ ಹೇಗೆ ಶಿಕ್ಷೆ ಕೊಟ್ಟ ಹಾಗಾಗುತ್ತದೆ?

ಸುಗ್ಗನಹಳ್ಳಿ ಷಡಕ್ಷರಿ, ಬೆಂಗಳೂರು

ರಾಜಕೀಯಪ್ರೇರಿತವಾಗಿದ್ದರೆ ತಪ್ಪೇನು?

‘ಕೃಷಿ ಮಸೂದೆ ನೆಪದಲ್ಲಿ ಈಗ ನಡೆಯುತ್ತಿರುವ ಹೋರಾಟ ರಾಜಕೀಯಪ್ರೇರಿತ’ ಎಂದಿದ್ದಾರೆ ಬಿಜೆಪಿ ಮುಖಂಡ ಸಿ.ಟಿ.ರವಿ (ಪ್ರ.ವಾ., ಸೆ. 28). ಸರಿಯೇ, ಕೃಷಿ ಮಸೂದೆ ರೈತರಿಗೆ ಮಾರಕವಾಗುತ್ತಿರುವ ಹಿನ್ನೆಲೆಯಲ್ಲಿ ನಡೆಯುತ್ತಿರುವ ರೈತರ ಹೋರಾಟ ರಾಜಕೀಯಪ್ರೇರಿತವಾಗಿದ್ದರೆ ತಪ್ಪೇನು? ನಮ್ಮ ರಾಜ್ಯದಲ್ಲಿಯೇ ಈಗ ಈರುಳ್ಳಿ ಮತ್ತು ಹಸಿಮೆಣಸಿನಕಾಯಿ ಬೆಳೆಗಾರರ ಗತಿ ಏನಾಗಿದೆ? ರಸಗೊಬ್ಬರ ಬೆಲೆ ಗಗನಕ್ಕೇರಿದ್ದು ರೈತ ಬೆಳೆದ ಬೆಳೆಯ ಬೆಲೆ ಪಾತಾಳಕ್ಕಿಳಿದಿದೆ. ಹೀಗಾದಾಗ ರೈತರ ಹಿತ ಕಾಯುವವರು ಯಾರು?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಹಿತ ಕಾಯುತ್ತೇವೆ ಎಂದು ಹೇಳಿಯೇ ಅಲ್ಲವೇ ಅಧಿಕಾರಕ್ಕೆ ಬಂದದ್ದು. ಅಧಿಕಾರ ಸಿಕ್ಕ ತಕ್ಷಣ ಸರ್ಕಾರವು ರೈತರ ಹಿತ ಮರೆತರೆ ರೈತರು ಹೋರಾಟ ಮಾಡಬಾರದೇ? ರೈತರ ದುಃಸ್ಥಿತಿಯನ್ನು ಮುಖಂಡರು ಮೊದಲು ಅರ್ಥಮಾಡಿಕೊಳ್ಳಲಿ, ರಾಜಕೀಯ ಆಮೇಲೆ ಅಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹೆಮ್ಮರವಾಗುತ್ತಿದೆ ಅಸ್ಪೃಶ್ಯತಾ ಆಚರಣೆ

‘ಪ್ರೀತಿಯ ಅಪ್ಪುಗೆಗೆ ಕಾಯ್ದೆ ಬೇಡವೇ?’ ಎಂಬ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಸೆ. 27) ದೇಶದಲ್ಲಿ ಶ್ರೇಣೀಕೃತ ಸಮಾಜವು ನಿರಂತರವಾಗಿ ಅಸ್ಪೃಶ್ಯತೆ ಆಚರಣೆ ಮಾಡುತ್ತಾ ಬರುತ್ತಿರುವುದನ್ನು ಆಧಾರಗಳ ಸಮೇತ ತಿಳಿಸಿದೆ.

ರಾಮನಗರ ಜಿಲ್ಲೆಯ ಅಮ್ಮನಪುರ ಗ್ರಾಮದಲ್ಲಿ ಇತ್ತೀಚೆಗೆ ನೆರವಿ ಸಮಾರಂಭವೊಂದನ್ನು ಆಯೋಜಿಸಲಾಗಿತ್ತು. ಹೊರಗಿನ ಅಡುಗೆಯವರಿದ್ದರೂ ಸವರ್ಣೀಯರು ಕೆಲವರು ಮಾಂಸವನ್ನು ಪ್ರತ್ಯೇಕವಾಗಿ ಪಡೆದು ಅಡುಗೆ ಮಾಡಿ ಉಂಡರು. ಬಂಜಾರರು ಮಾಡಿದ್ದನ್ನು ಸಹ ತಿನ್ನುವುದಿಲ್ಲ ಎಂದರೆ, ಇನ್ನು ಚಲವಾದಿ, ಮಾದಿಗದಂತಹ ತಳ ಸಮುದಾಯಗಳ ಕಥೆ ಊಹಿಸಬಹುದು. ಮಾಂಸಕ್ಕೆ ಇಲ್ಲದ ಮೈಲಿಗೆ ಜಾತಿಗಳಿಗೆ ಇದೆ.

ಮಡಿ-ಮೈಲಿಗೆ ಹಳ್ಳಿಗಳಲ್ಲಿ ಹೆಚ್ಚಾಗುತ್ತಿದೆ. ನಗರಗಳಲ್ಲಿರುವ ದಲಿತರ ಮನೆಗಳಲ್ಲಿ ಚಪ್ಪರಿಸಿಕೊಂಡು ಊಟ ಮಾಡುವ ಸವರ್ಣೀಯರು ಹಳ್ಳಿಗಳಲ್ಲಿ ಮಾತ್ರ ಪ್ರತಿಷ್ಠೆಯ, ಶ್ರೇಷ್ಠತೆಯ ಪ್ರತೀಕವಾಗಿ ಅಸ್ಪೃಶ್ಯತೆಯನ್ನು ಉಳಿಸಿ ಬೆಳೆಸುತ್ತಿರುವುದು ಅಪಾಯಕಾರಿ ನಡೆ. ಇದು ‘ರಕ್ತ ಸುರಿಯದ ಮಾನಸಿಕ ಯುದ್ಧ’ವಾಗಿದೆ. ಈ ಪಿಡುಗನ್ನು ನಿವಾರಿಸುವ ಎಷ್ಟೋ ಪ್ರಯತ್ನಗಳಾಗಿವೆ. ಆದರೂ ಅಸ್ಪೃಶ್ಯತಾ ಆಚರಣೆ ಮರುಜೀವ ಪಡೆದು ಹೆಮ್ಮರವಾಗುತ್ತಿದೆ. ಇದನ್ನು ತಡೆಯಲು, ಅಸ್ಪೃಶ್ಯತೆ ಆಚರಣೆಯಲ್ಲಿರುವ ಊರಿನಲ್ಲಿ ರಾಜಕೀಯ ಪ್ರತಿನಿಧಿಗಳು ಚುನಾವಣೆಗೆ ನಿಲ್ಲುವ ಹಕ್ಕನ್ನು ಕಸಿಯುವ ಕಾನೂನು ಬರಬೇಕು. ತಮಿಳುನಾಡಿನಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಹಳ್ಳಿಗೆ ₹ 10 ಲಕ್ಷ ಬಹುಮಾನ ಪ್ರಕಟಿಸಲಾಗಿದೆ. ಇದು ಒಂದು ಉತ್ತಮ ನಡೆ. ಎಳೆ ಮಕ್ಕಳನ್ನೂ ಬಿಡದೆ ಅಸ್ಪೃಶ್ಯತಾ ಆಚರಣೆ ನಡೆಯುತ್ತಿದೆ. ಸಮಾನ ಶಿಕ್ಷಣ, ಆಹಾರ ಹಕ್ಕು, ವಸತಿ, ಉಚಿತ ಆರೋಗ್ಯ ಸೇವಾ ಯೋಜನೆಗಳು ಸಮರ್ಪಕವಾಗಿ ಜಾರಿಗೆ ಬಂದರೆ ಇಂತಹ ತಾರತಮ್ಯ ಸ್ವಲ್ಪಮಟ್ಟಿಗೆ ನಿವಾರಣೆ ಆಗಬಹುದು.

ಡಾ. ಎ.ಆರ್.ಗೋವಿಂದ ಸ್ವಾಮಿ ನಾಯಕ್, ಅಮ್ಮನಪುರ, ರಾಮನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ಅಡಿಯಲ್ಲಿ ದೇಶದ ನಾಗರಿಕರಿಗೆ ಡಿಜಿಟಲ್ ಆರೋಗ್ಯ ಕಾರ್ಡ್ ಒದಗಿಸುವ ಯೋಜನೆಯನ್ನು ಇಡೀ ದೇಶಕ್ಕೆ ವಿಸ್ತರಿಸುವ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ. ಆರೋಗ್ಯ ಸೇವೆಗಳ ಲಭ್ಯತೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಇದು ಕಾರಣವಾಗಲಿದೆ ಎಂದು ಪ್ರಧಾನಿ ಬಣ್ಣಿಸಿದ್ದಾರೆ. ಆದರೆ, ಹಲವು ಅನುಕೂಲಗಳ ಜತೆಗೆ, ಖಾಸಗಿತನ ಮತ್ತು ಇತರ ಹಕ್ಕುಗಳ ಉಲ್ಲಂಘನೆಗೂ ಇದು ಅವಕಾಶ ಕೊಡಬಹುದು; ಆರೋಗ್ಯ ದತ್ತಾಂಶ ದುರ್ಬಳಕೆ ಆಗಬಹುದು ಎಂದ ಕಳವಳವೂ ವ್ಯಕ್ತವಾಗಿದೆ

ಡಿಜಿಟಲ್ ಕಾರ್ಡ್
ಆರೋಗ್ಯ ಮಾಹಿತಿ ಕಣಜ

ಆರೋಗ್ಯ ಗುರುತು ಚೀಟಿ ಎಂದರೇನು?

ಆಯುಷ್ಮಾನ್ ಭಾರತ ಯೋಜನೆಯಡಿ ಪ್ರತಿ ಪ್ರಜೆಗೂ 'ಡಿಜಿಟಲ್ ರೂಪ'ದ ಗುರುತಿನ ಚೀಟಿ ನೀಡಲು ಸರ್ಕಾರ ಉದ್ದೇಶಿಸಿದೆ. ಈ ಆರೋಗ್ಯ ಚೀಟಿಯು ವ್ಯಕ್ತಿಯೊಬ್ಬರ ಸಮಗ್ರ ಆರೋಗ್ಯ ಮಾಹಿತಿಯ ಕಣಜವಾಗಿ ಕೆಲಸ ಮಾಡಲಿದೆ. ರೋಗಿಯ ವೈದ್ಯಕೀಯ ಪರೀಕ್ಷೆಗಳು, ರೋಗದ ವಿಧ, ವೈದ್ಯರು ನೀಡಿದ ಪ್ರಿಸ್ಕ್ರಿಪ್ಷನ್, ಔಷಧಗಳು, ಚಿಕಿತ್ಸೆಗಳು ಮತ್ತು ತೆಗೆದುಕೊಂಡ ರೋಗನಿರ್ಣಯದ ವಿವರಗಳು ಹಾಗೂ ಎಲ್ಲ ರೀತಿಯ ವೈದ್ಯಕೀಯ ದಾಖಲೆಗಳಂತಹ ಮಾಹಿತಿಯನ್ನು ಒಳಗೊಂಡಿರುತ್ತದೆ. ಮೊಬೈಲ್ ಮೂಲಕ ಈ ದಾಖಲೆಗಳನ್ನು ವೀಕ್ಷಿಸಬಹುದು.

ಈ ಗುರುತಿನ ಚೀಟಿಯನ್ನು ವ್ಯಕ್ತಿಯ ಆರೋಗ್ಯ ಖಾತೆ ಎಂಬಂತೆ ಬಳಸಲಾಗುತ್ತದೆ. ಬಡವರು ಮತ್ತು ಮಧ್ಯಮ ವರ್ಗದವರ ವೈದ್ಯಕೀಯ ಚಿಕಿತ್ಸೆಯಲ್ಲಿನ ಸಮಸ್ಯೆಗಳನ್ನು ನಿವಾರಿಸುವಲ್ಲಿ ಈ ಯೋಜನೆ ದೊಡ್ಡ ಪಾತ್ರವನ್ನು ವಹಿಸುತ್ತದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಆಯುಷ್ಮಾನ್ ಭಾರತ್ ಡಿಜಿಟಲ್ ಯೋಜನೆಯು ವಿಶ್ವಾಸಾರ್ಹ ದತ್ತಾಂಶವನ್ನು ಒದಗಿಸುವ ಮೂಲಕ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ ಅವರ ಅಮೂಲ್ಯ ಜೀವ ಉಳಿಸಲು ನೆರವಾಗುತ್ತದೆ ಎಂದು ಸರ್ಕಾರ ಹೇಳಿದೆ. ಈ ಯೋಜನೆಯಿಂದ ಹೊರಗುಳಿಯಲು ಇಚ್ಛಿಸಿದವರು ಸ್ವಯಂಪ್ರೇರಣೆಯಿಂದ ಈ ಆಯ್ಕೆ ಮಾಡಿಕೊಳ್ಳಬಹುದು.

ಗುರುತು ಚೀಟಿಯ ಗುರಿ ಏನು?

ಸರ್ಕಾರದ ಸೇವೆಗಳನ್ನು ವಿದ್ಯುನ್ಮಾನ ರೂಪದಲ್ಲಿ ಜನರಿಗೆ ತಲುಪಿಸುವ ಡಿಜಿಟಲ್ ಇಂಡಿಯಾ ಅಭಿಯಾನದ ಭಾಗವಾಗಿ ವೈದ್ಯಕೀಯ ದಾಖಲೆಗಳು ಮತ್ತು ದತ್ತಾಂಶಗಳನ್ನು ಡಿಜಿಟಲೀಕರಣಗೊಳಿಸಲಾಗುತ್ತಿದೆ. ವೈದ್ಯರು, ಆಸ್ಪತ್ರೆಗಳು ಮತ್ತು ಆರೋಗ್ಯ ಸೇವಾ ಪೂರೈಕೆದಾರ ನಡುವೆ ಗೊಂದಲಗಳಿಲ್ಲದ, ಸುಲಭ ಸಂವಹನ ಸಾಧ್ಯವಾಗಿಸುವುದು ಇದರ ಉದ್ದೇಶ.

ಇಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಭಾರತದಾದ್ಯಂತ ಎಲ್ಲಿಯಾದರೂ ಪರಿಶೀಲಿಸಬಹುದು. ಆರೋಗ್ಯ ಸೇವೆ ನೀಡುತ್ತಿರುವ ಯಾರಿಗಾದರೂ ಈ ದತ್ತಾಂಶ ದಾಖಲೆಗಳು ಸುಲಭವಾಗಿ ಲಭ್ಯವಾಲಿವೆ. ದೇಶದಾದ್ಯಂತ ಆಸ್ಪತ್ರೆಗಳೊಂದಿಗೆ ರೋಗಿಗಳನ್ನು ಸಂಪರ್ಕಿಸಲು ಆಯುಷ್ಮಾನ್ ಭಾರತ ಯೋಜನೆಯು ಮಾಡಿದ ಕೆಲಸವನ್ನು ಮತ್ತಷ್ಟು ವಿಸ್ತರಿಸಿ, ಅದಕ್ಕೆ ಡಿಜಿಟಲ್ ಸ್ಪರ್ಶ ನೀಡಲಾಗುತ್ತಿದೆ.

ಗುರುತಿನ ಚೀಟಿ ಮಾಡಿಸುವುದು ಕಡ್ಡಾಯವೇ?

ಭಾರತೀಯ ಆರೋಗ್ಯ ಗುರುತಿನ ಚೀಟಿ ಸೃಷ್ಟಿಸಿಕೊಳ್ಳುವುದು ಕಡ್ಡಾಯವಲ್ಲ. ಈ ಕಾರ್ಯಕ್ರಮ ಸಂಪೂರ್ಣ ಸ್ವಯಂಪ್ರೇರಿತವಾದುದು ಎಂದು ಆರೋಗ್ಯ ಸಚಿವಾಲಯವು ಸ್ಪಷ್ಟಪಡಿಸಿದೆ. ಆರೋಗ್ಯ ಗುರುತಿನ ಚೀಟಿ ಮತ್ತು ಕ್ಯುಆರ್ ಕೋಡ್ ಇದ್ದರೆ, ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ ಯೋಜನೆಯ ಲಾಭಗಳನ್ನು ಪಡೆಯುವುದು ಸುಲಭವಾಗುತ್ತದೆ ಎಂದು ಹೆಲ್ತ್ ಐಡಿ ಜಾಲತಾಣದ ಪ್ರಶ್ನೋತ್ತರದಲ್ಲಿ ವಿವರಿಸಲಾಗಿದೆ.

ಖಾಸಗಿತನ ಮತ್ತು ಹಕ್ಕುಗಳ ಉಲ್ಲಂಘನೆಯ ಅಪಾಯವಿದೆಯೇ?

ಈ ಯೋಜನೆಗಾಗಿಯೇ ಆರೋಗ್ಯ ಸಚಿವಾಲಯವು ದತ್ತಾಂಶ ನಿರ್ವಹಣಾ ನೀತಿ ಮತ್ತು ಖಾಸಗಿತನ ನೀತಿಯನ್ನು ರಚಿಸಿದೆ. ಈ ನೀತಿಗಳ ಪ್ರಕಾರ ದತ್ತಾಂಶ ಸಂಗ್ರಹ, ಸಂಸ್ಕರಣೆ ಮತ್ತು ಹಂಚಿಕೆಗೂ ಮುನ್ನ ಸಂಬಂಧಿತ ವ್ಯಕ್ತಿಯ ಒಪ್ಪಿಗೆ ಪಡೆಯಬೇಕಿರುವುದು ಕಡ್ಡಾಯ. ಆದರೆ ಈ ನೀತಿಗಳಲ್ಲಿ ದತ್ತಾಂಶ ರಕ್ಷಣೆ ಬಗ್ಗೆ ಸ್ಪಷ್ಟವಾದ ನಿಯಮಗಳು ಇಲ್ಲ.

ದತ್ತಾಂಶ ನಿರ್ವಹಣೆ ನೀತಿಯ ಪ್ರಕಾರ, ಕೇಂದ್ರ ಆರೋಗ್ಯ ಸಚಿವಾಲಯವು ಆರೋಗ್ಯ ಗುರುತುಚೀಟಿ ಪೋರ್ಟಲ್‌ನಲ್ಲಿ ಇರುವ ಎಲ್ಲಾ ದತ್ತಾಂಶಗಳ ನಿಯಂತ್ರಣದ ಸಂಪೂರ್ಣ ಅಧಿಕಾರ ಹೊಂದಿರುತ್ತದೆ. ಆರೋಗ್ಯ ಸಚಿವಾಲಯದ ಅಧೀನ ಸಂಸ್ಥೆಗಳು, ಆರೋಗ್ಯ ಸೇವಾ ಕೇಂದ್ರಗಳು (ಆಸ್ಪತ್ರೆಗಳು, ಸಂಶೋಧನಾ ಕೇಂದ್ರಗಳು, ಪ್ರಯೋಗಾಲಯಗಳು ಮತ್ತು ಕ್ಲಿನಿಕ್‌ಗಳು) ಮತ್ತು ಇತರೆ ಸಂಸ್ಥೆಗಳು ಈ ದತ್ತಾಂಶವನ್ನು ಬಳಕೆ ಮಾಡಿಕೊಳ್ಳಬಹುದು ಎಂದು ಈ ನೀತಿಯ 1ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಈ ಎಲ್ಲಾ ಸಂಸ್ಥೆಗಳಿಗೆ ಆರೋಗ್ಯ ಸಚಿವಾಲಯವು ಒಂದು ಗುರುತಿನ ಸಂಖ್ಯೆ ನೀಡುತ್ತದೆ. ಆ ಗುರುತಿನ ಸಂಖ್ಯೆಯನ್ನು ನಮೂದಿಸಿಯಷ್ಟೇ ದತ್ತಾಂಶವನ್ನು ಪಡೆಯಲು ಸಾಧ್ಯ.

ಈ ನೀತಿಯ 1ನೇ ಸೆಕ್ಷನ್‌ನಲ್ಲಿ 'ಇತರೆ ಸಂಸ್ಥೆಗಳು' ಎಂದು ನಮೂದಿಸಲಾಗಿದೆ. ಆ ಸಂಸ್ಥೆಗಳು ಯಾವುವು ಎಂಬುದನ್ನು ಸಚಿವಾಲಯವು ಸ್ಪಷ್ಟಪಡಿಸಿಲ್ಲ.

ಆದರೆ ಈ ನೀತಿಯ 2ನೇ ಜಿ ಸೆಕ್ಷನ್‌ನಲ್ಲಿ ಔಷಧ ತಯಾರಕ ಕಂಪನಿಗಳು, ವೈದ್ಯಕೀಯ ಉಪಕರಣ ತಯಾರಕರು, ಔಷಧ ಮತ್ತು ವೈದ್ಯಕೀಯ ಉಪಕರಣ ತಯಾರಕರಿಗೆ ಈ ದತ್ತಾಂಶ ನೀಡಲಾಗುತ್ತದೆ ಎಂದು ಸೂಚಿಸಲಾಗಿದೆ. ಇಂತಹ ಕಂಪನಿಗಳಿಗೂ ಆರೋಗ್ಯ ಸಚಿವಾಲಯವು ಗುರುತಿನ ಸಂಖ್ಯೆ ನೀಡುತ್ತದೆ. ಅದನ್ನು ಬಳಸಿಕೊಂಡು ಈ ಕಂಪನಿಗಳು ದತ್ತಾಂಶಗಳನ್ನು ಬಳಸಿಕೊಳ್ಳಬಹುದು.

ಆರೋಗ್ಯ ಗುರುತಿನ ಚೀಟಿಯಲ್ಲಿ ನಮೂದಿಸಲಾಗುವ ಎಲ್ಲಾ ವಿವರಗಳು ಔಷಧ ಮತ್ತು ವೈದ್ಯಕೀಯ ಉಪಕರಣ ತಯಾರಕರಿಗೆ ಸುಲಭವಾಗಿ ದೊರೆಯುತ್ತದೆ. ಇದರಿಂದ ನಾಗರಿಕರ ಆರೋಗ್ಯ, ಕಾಯಿಲೆಗಳು, ಆರ್ಥಿಕ ಸ್ಥಿತಿಗತಿ, ವಿಮೆ ವಿವರ, ಚಿಕಿತ್ಸೆ ವಿವರ ಎಲ್ಲವೂ ಈ ಕಂಪನಿಗಳಿಗೆ ದೊರೆಯುತ್ತದೆ. ಈ ವಿವರಗಳು ದೊರೆತರೆ ತಯಾರಕ ಕಂಪನಿಗಳು ಔಷಧ ಮತ್ತು ವೈದ್ಯಕೀಯ ಉಪಕರಣಗಳ ಬೆಲೆ ಮತ್ತು ಮಾರುಕಟ್ಟೆಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಅಪಾಯವಿದೆ. ಅಂತಿಮವಾಗಿ ಇದರಿಂದ ನಾಗರಿಕರಿಗೆ ತೊಂದರೆಯಾಗಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಸೆಕ್ಷನ್ 2ರಲ್ಲಿ ವಿವರಿಸಲಾಗಿರುವ ಆರೋಗ್ಯ ಸಂಸ್ಥೆಗಳ ಕಲಂ ಅಡಿ ಸರ್ಕಾರಿ ಆಸ್ಪತ್ರೆಗಳು, ಪ್ರಯೋಗಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಕ್ಲಿನಿಕ್‌ಗಳನ್ನೂ ಸೇರಿಸಲಾಗಿದೆ. ದತ್ತಾಂಶ ನಿರ್ವಹಣಾ ನೀತಿಯ ಪ್ರಕಾರ ಈ ಎಲ್ಲಾ ಸಂಸ್ಥೆಗಳಿಗೆ, ಅಲ್ಲಿನ ವೈದ್ಯರಿಗೆ ಮತ್ತು ಸಂಬಂಧಿತ ಸಿಬ್ಬಂದಿಗೆ ಗುರುತಿನ ಚೀಟಿ ಪೋರ್ಟಲ್‌ನ ಸಂಪೂರ್ಣ ದತ್ತಾಂಶ ದೊರೆಯುತ್ತದೆ. ವ್ಯಕ್ತಿಗಳ ವೈಯಕ್ತಿಕ ಆರೋಗ್ಯದ ವಿವರಗಳು ಎಲ್ಲರಿಗೂ ಲಭ್ಯವಾಗುತ್ತವೆ. ಅತ್ಯಂತ ಖಾಸಗಿಯಾದ ವಿವರಗಳು ಬಹಿರಂಗವಾಗುವ ಅಪಾಯವಿದೆ. ಈ ವಿವರಗಳನ್ನು ಬಳಸಿಕೊಂಡು ಸಂಬಂಧಿತ ವ್ಯಕ್ತಿಯಿಂದ ಹಣ ವಸೂಲಿ ಮಾಡುವ, ಬೆದರಿಸುವ, ತಮ್ಮ ಪರವಾಗಿ ಕೆಲಸ ಮಾಡಿಸಿಕೊಳ್ಳುವ ಎಲ್ಲಾ ರೀತಿಯ ಅಪಾಯಗಳಿಗೂ ಈ ವ್ಯವಸ್ಥೆಯಲ್ಲಿ ಆಸ್ಪದವಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ಗುರುತಿನ ಚೀಟಿ ಸೃಷ್ಟಿಸಿರುವ ವ್ಯಕ್ತಿಯು, ಯಾವಾಗ ಬೇಕಿದ್ದರೂ ಈ ಚೀಟಿಯನ್ನು ರದ್ದುಪಡಿಸಲು ಮತ್ತು ಅದರಲ್ಲಿರುವ ಮಾಹಿತಿಗಳನ್ನು ಅಳಿಸಿಹಾಕಲು ಅವಕಾಶವಿದೆ. ಆದರೆ, ಇದಕ್ಕಾಗಿ ಹಲವು ಪ್ರಕ್ರಿಯೆಗಳನ್ನು ಪಾಲಿಸಬೇಕಾಗುತ್ತದೆ. ಆನಂತರವಷ್ಟೇ ಗುರುತಿನ ಚೀಟಿಯನ್ನು ಅಳಿಸಲು ಸಾಧ್ಯವಾಗುತ್ತದೆ. ಯಾವುದೇ ಕಾನೂನಾತ್ಮಕ ವ್ಯಾಜ್ಯದಲ್ಲಿ ಸಿಲುಕಿದ ಗುರುತಿನ ಚೀಟಿಗಳನ್ನು ಅಳಿಸಲು ಸಾಧ್ಯವಿಲ್ಲ. ಅವುಗಳಲ್ಲಿನ ಮಾಹಿತಿಯನ್ನೂ ಅಳಿಸಲು ಸಾಧ್ಯವಿಲ್ಲ ಎಂದು ಆರೋಗ್ಯ ಸಚಿವಾಲಯವು ವಿವರಿಸಿದೆ.

'ಆರೋಗ್ಯ ದಾಖಲೆ' ಸೃಷ್ಟಿ ಹೇಗೆ?

ಈ ಆರೋಗ್ಯ ಕಾರ್ಡ್, 14 ಅಂಕಿಗಳನ್ನು ಒಳಗೊಂಡ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಒಳಗೊಂಡಿರುತ್ತದೆ.

ನೋಂದಣಿ ವೇಳೆ ವ್ಯಕ್ತಿಯು ನೀಡುವ ಪ್ರಾಥಮಿಕ ಮಾಹಿತಿಯನ್ನು ಆಧರಿಸಿ, 'ವೈಯಕ್ತಿಕ ಆರೋಗ್ಯ ದಾಖಲೆ' ಸಿದ್ಧವಾಗುತ್ತದೆ. ಅಲ್ಲಿ ಆತನ ಆರೋಗ್ಯಕ್ಕೆ ಸಂಬಂಧಿಸಿದ ವೈಯಕ್ತಿಕ ಮಾಹಿತಿ ಎಲ್ಲವೂ ಇರಲಿದೆ. ಇದು ವ್ಯಕ್ತಿಯ ಹೆಲ್ತ್ ಅಕೌಂಟ್ ರೀತಿಯಲ್ಲಿ ಕೆಲಸ ಮಾಡುತ್ತದೆ. ಇದಕ್ಕೆ ವೈಯಕ್ತಿಕ ಆರೋಗ್ಯ ದಾಖಲೆಗಳನ್ನು ಜೋಡಣೆ ಮಾಡಬಹುದು ಹಾಗೂ ಮೊಬೈಲ್ ಅಪ್ಲಿಕೇಶನ್ ಸಹಾಯದಿಂದ ಆ ಮಾಹಿತಿಯನ್ನು ತಿಳಿಯಬಹುದು.

ಯಾವೆಲ್ಲ ವ್ಯವಸ್ಥೆಗಳು ಈ ಯೋಜನೆಯ ಭಾಗ?

ಆಧುನಿಕ ವೈದ್ಯಕೀಯ ಪದ್ಧತಿ ಮತ್ತು ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿ ಈ ಎರಡಕ್ಕೂ ನೆರವಾಗುವಂತೆ ಆರೋಗ್ಯ ಗುರುತಿನ ಚೀಟಿ ರೂಪಿಸಲಾಗಿದೆ. ಆರೋಗ್ಯಸೇವೆ ವೃತ್ತಿಪರ ನೋಂದಣಿ (ಎಚ್‌ಆರ್‌ಆರ್), ಆರೋಗ್ಯ ಸೇವೆಯ ಸೌಲಭ್ಯ ನೋಂದಣಿ (ಎಚ್‌ಎಫ್‌ಆರ್) ವ್ಯವಸ್ಥೆಗಳು ಇದರಡಿ ಕೆಲಸ ಮಾಡಲಿವೆ. ಡಿಜಿಟಲ್ ಇಂಡಿಯಾ, ಜನಧನ್, ಆಧಾರ್, ಹಾಗೂ ಮೊಬೈಲ್, ಟೆಲಿಮಿಡಿಸಿನ್, ಆರೋಗ್ಯ ಇಲಾಖೆ, ರಾಜ್ಯ ಸರ್ಕಾರಗಳ ಆರೋಗ್ಯ ಘಟಕಗಳು, ಆರೋಗ್ಯ ವಿಮೆ ಸೇರಿದಂತೆ ಸರ್ಕಾರದ ಹಲವು ವ್ಯವಸ್ಥೆಗಳು ಈ ಯೋಜನೆಯ ಭಾಗವಾಗಿರಲಿವೆ.

ಈಗಾಗಲೇ ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಲಾಗಿದ್ದು, ಈಗ ಇಡೀ ದೇಶಕ್ಕೆ ವಿಸ್ತರಿಸಲಾಗುತ್ತಿದೆ. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯು (ಪಿಎಂ-ಜೆಎವೈ) ಮೂರು ವರ್ಷಗಳನ್ನು ಪೂರೈಸುತ್ತಿರುವ ವೇಳೆಯಲ್ಲಿ ಯೋಜನೆಯ ಡಿಜಿಟಲ್ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆ.

ಆರೋಗ್ಯ ಕಾರ್ಡ್: ನೋಂದಣಿ ಮಾಡಿ ಕೊಳ್ಳುವುದು ಹೇಗೆ?

ಹೆಲ್ತ್ ಕಾರ್ಡ್ ವೆಬ್ ಪೋರ್ಟಲ್ (https://healthid.ndhm.gov.in) ಮೂಲಕ ಅಥವಾ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ಹೆಲ್ತ್ ಕಾರ್ಡ್ ಅಪ್ಲಿಕೇಶನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಇಲ್ಲವೇ ಸರ್ಕಾರಿ/ ಖಾಸಗಿ ಆಸ್ಪತ್ರೆಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯೂ ಆರೋಗ್ಯ ಕಾರ್ಡ್ ನೋಂದಣಿಗೆ ಮನವಿ ಮಾಡಬಹುದು.

ಇದಕ್ಕಾಗಿ ಬೇಕಾದ ಪ್ರಮುಖ ದಾಖಲೆಗಳು ಆಧಾರ್ ಸಂಖ್ಯೆ ಇಲ್ಲವೇ ಮೊಬೈಲ್ ಸಂಖ್ಯೆ.

ಆಧಾರ್ ಸಂಖ್ಯೆ ಮೂಲಕ ನೋಂದಣಿ ಮಾಡಿಸುವುದಾದಲ್ಲಿ ಹೆಸರು, ಜನ್ಮದಿನಾಂಕ, ಲಿಂಗ, ವಿಳಾಸ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆ ನೀಡಬೇಕು. ಆಧಾರ್ ಸಂಖ್ಯೆಯನ್ನು ಜೋಡಿಸಲು ಬಯಸದವರು ಮೊಬೈಲ್ ಸಂಖ್ಯೆ ಮೂಲಕ ನೋಂದಣಿ ಮಾಡಿಸಬಹುದು. ಅಲ್ಲಿ ಹೆಸರು, ಜನ್ಮದಿನಾಂಕ, ಲಿಂಗ, ವಿಳಾಸ, ಮೊಬೈಲ್ ಸಂಖ್ಯೆಯ ವಿವರ ನೀಡಬೇಕು. ಅದರೊಂದಿಗೆ, ವ್ಯಕ್ತಿಯ ವಾಸಸ್ಥಳ, ಪ್ರದೇಶ, ಕೌಟುಂಬಿಕ ವಿವರ ಹಾಗೂ ಅವರ ಸಂಪರ್ಕ ಮಾಹಿತಿಯನ್ನೂ ಒಳಗೊಂಡಿರುತ್ತದೆ.

ಡಿಜಿಟಲ್ ಆರೋಗ್ಯ ಕಾರ್ಡ್: ಕಾರ್ಯನಿರ್ವಹಣೆ ಹೇಗೆ?

ಈ ಆರೋಗ್ಯ ಕಾರ್ಡ್‌ನಲ್ಲಿ ವ್ಯಕ್ತಿಯು ಚಿಕಿತ್ಸೆ ಪಡೆದ ಆಸ್ಪತ್ರೆ, ವೈದ್ಯರ ವಿವರ, ವೈದ್ಯಕೀಯ ಪರೀಕ್ಷೆ, ಸೂಚಿಸಿದ ಔಷಧಿಗಳ ಮಾಹಿತಿ ಇರುತ್ತದೆ. ಒಂದು ವೇಳೆ, ವ್ಯಕ್ತಿಯು ಬೇರೊಂದು ಊರಿನ ವೈದ್ಯರನ್ನು ಕಾಣಬೇಕಾಗಿ ಬಂದರೂ ಆರೋಗ್ಯ ಕಾರ್ಡ್‌ನಲ್ಲಿ ಆತನ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ವಿವರಗಳು ಸಿಗುತ್ತವೆ. ಹೀಗಾಗಿ, ವ್ಯಕ್ತಿಗೆ ಸಂಬಂಧಿಸಿದ ಆರೋಗ್ಯ ದಾಖಲೆಗಳನ್ನು ಸಂಗ್ರಹಿಸಿ ನಿರ್ವಹಿಸಲು ಹಾಗೂ ತ್ವರಿತ ಮತ್ತು ಸಮರ್ಪಕ ಚಿಕಿತ್ಸೆ ನೀಡಲು ವೈದ್ಯರಿಗೆ ಅನುಕೂಲವಾಗುತ್ತದೆ.

ಜೊಜಿಲಾ ಸುರಂಗಮಾರ್ಗದ ಕಾಮಗಾರಿಯನ್ನು ಪರಿಶೀಲಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ತಜ್ಞರ ತಂಡ —ಪಿಟಿಐ ಚಿತ್ರ

ಜೊಜಿಲಾ: ಏಷ್ಯಾದ ಅತಿ ಎತ್ತರದ ಸುರಂಗ ಮಾರ್ಗ

ಲಡಾಖ್‌ನ ಜೊಜಿಲಾ ಪ್ರಾಂತದಲ್ಲಿನ ಏಷ್ಯಾದಲ್ಲೇ ಅತಿ ಎತ್ತರದ ರಸ್ತೆ ಮಾರ್ಗದಲ್ಲಿ ಏಷ್ಯಾದ ಅತಿ ಉದ್ದದ ದ್ವಿಮುಖ ಸಂಚಾರ ವ್ಯವಸ್ಥೆಯ ಸುರಂಗ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. 2020ರಲ್ಲಿ ಆರಂಭವಾಗಿರುವ ಕಾಮಗಾರಿಯು 2026ರ ಆರಂಭದ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ರಾಷ್ಟ್ರೀಯ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮಾಹಿತಿ ನೀಡಿದೆ. ಈ ಸುರಂಗವನ್ನು ಆಧುನಿಕ ಎಂಜಿನಿಯರಿಂಗ್‌ನ ಅದ್ಭುತ ಎನ್ನಲಾಗಿದೆ.

ವಿಶೇಷಗಳು

11,600 ಅಡಿ ಸಮುದ್ರಮಟ್ಟದಿಂದ ಜೊಜಿಲಾ ಪಾಸ್

14.5 ಕಿ.ಮೀ. ಸುರಂಗ ಮಾರ್ಗದ ಉದ್ದ

₹4,600 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನ

ಅನುಕೂಲಗಳು

- ಶ್ರೀನಗರ-ದ್ರಾಸ್-ಲಡಾಖ್ ಮಧ್ಯ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 1ರಲ್ಲಿ ಜೊಜಿಲಾ ಪಾಸ್ ಬರುತ್ತದೆ. ಹಿಮಪಾತದ ಕಾರಣ ವರ್ಷದ ಆರು ತಿಂಗಳು ಈ ಪಾಸ್ ಅನ್ನು ಮುಚ್ಚಲಾಗುತ್ತದೆ. ಆ ಅವಧಿಯಲ್ಲಿ ಇಲ್ಲಿ ಸಂಚಾರ ಸಂಪೂರ್ಣವಾಗಿ ಸ್ಥಗಿತವಾಗುತ್ತದೆ. ಈ ಸುರಂಗ ಕಾರ್ಯಾರಂಭವಾದರೆ, ಈ ಮಾರ್ಗದಲ್ಲಿ ವರ್ಷದ ಎಲ್ಲಾ ಋತುವಿನಲ್ಲೂ ಸಂಚಾರ ಸಾಧ್ಯವಾಗುತ್ತದೆ
- ಇದು ಕಾಶ್ಮೀರ-ಕಾರ್ಗಿಲ್-ಲಡಾಖ್ ಪ್ರಾಂತಗಳಿಗೆ ಮತ್ತು ಗಿಲ್ಗಿಟ್ ಬಲ್ತಿಸ್ತಾನದ ಗಡಿಗೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆಯಾಗಿದೆ. ಚೀನಾದ ಜತೆಗಿನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿನ ಸಂಘರ್ಷ ಮತ್ತು ಸೇನಾ ಕಾರ್ಯಾಚರಣೆ ವೇಳೆ ಸೇನೆ ರವಾನೆ ಕಷ್ಟಕರವಾಗಿತ್ತು. ಈ ಸುರಂಗ ಮಾರ್ಗ ಕಾರ್ಯಾರಂಭ ಮಾಡಿದರೆ ತುರ್ತು ಸಂದರ್ಭದಲ್ಲಿ ಸೇನೆ ರವಾನೆ ಸುಲಭವಾಗುತ್ತದೆ
- ಲಡಾಖ್ ಮತ್ತು ಜಮ್ಮು-ಕಾಶ್ಮೀರದ ನಡುವೆ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧ ವೃದ್ಧಿಗೆ ಈ ಸುರಂಗ ನೆರವಾಗಲಿದೆ
- ಜೊಜಿಲಾ ಪಾಸ್ ಹಾದುಹೋಗಲು ಈಗ 3 ತಾಸು ಬೇಕು. ಸುರಂಗ ಮಾರ್ಗ ಕಾರ್ಯಾರಂಭ ಮಾಡಿದರೆ 15 ನಿಮಿಷದಲ್ಲಿ ಜೊಜಿಲಾ ಪಾಸ್ ದಾಟಿ ಹೋಗಬಹುದು

ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಸೋನಾಮಾರ್ಗ್: ಶ್ರೀನಗರ-ಲೇಹ್ ಹೆದ್ದಾರಿಯಲ್ಲಿ ನಿರ್ಮಿಸಲಾಗುತ್ತಿರುವ ಜೊಜಿಲಾ ಸುರಂಗ ಮಾರ್ಗ ಮತ್ತು ಝಡ್-ಮೋರ್ ಸುರಂಗ ಮಾರ್ಗಗಳ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಮಂಗಳವಾರ ಪರಿಶೀಲಿಸಿದರು.

'2023ರ ಡಿಸೆಂಬರ್ ವೇಳೆಗೆ ಈ ಕಾಮಗಾರಿಗಳು ಪೂರ್ಣಗೊಳ್ಳಬೇಕು. 2024ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇವುಗಳನ್ನು ಉದ್ಘಾಟಿಸಬೇಕು. ಏಕೆಂದರೆ ನಾವು 2024ರಲ್ಲಿ ಚುನಾವಣೆ ಎದುರಿಸಬೇಕಿದೆ' ಎಂದು ಗಡ್ಕರಿ ಹೇಳಿದ್ದಾರೆ. ಆದರೆ ಜೊಜಿಲಾ ಪಾಸ್ ಸುರಂಗಮಾರ್ಗದ ಕಾಮಗಾರಿ 2026ರ ಆರಂಭದ ವೇಳೆಗೆ ಮುಗಿಯುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಸೋಮವಾರವಷ್ಟೇ ಹೇಳಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವಿದೇಶದಲ್ಲಿ ವೈದ್ಯಕೀಯ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಹತಾ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಎಂದು ತಿಳಿಸುವ ಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. 'ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಈ ಸುತ್ತೋಲೆ ಹೊರಡಿಸಿದ್ದು, 2019ರ ಜನವರಿ 1ರ ಬಳಿಕ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರು ಈ ಪತ್ರ ಪಡೆಯಬೇಕಿದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ. ಇದಕ್ಕೆ 2021ರ ಡಿಸೆಂಬರ್ 31ರ ಗಡುವು ನೀಡಲಾಗಿದೆ.

ಈ ಬಗ್ಗೆ ಪರಿಶೀಲನೆ ನಡೆಸಿರುವ ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆಯು, ಇದೊಂದು ನಕಲಿ ಪತ್ರ ಎಂದು ಸ್ಪಷ್ಟಪಡಿಸಿದೆ. ಇಂತಹ ಯಾವುದೇ ಸುತ್ತೋಲೆಯನ್ನು ಎನ್‌ಎಂಸಿ ಹೊರಡಿಸಿಲ್ಲ. ಸಾರ್ವಜನಿಕರನ್ನು ದಾರಿತಪ್ಪಿಸುವ ಇಂತಹ ನಕಲಿ ಸಂದೇಶಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದೆ. ವಿದ್ಯಾರ್ಥಿಯು ಭಾರತದ ಹೊರಗಿನ ಯಾವುದೇ ವೈದ್ಯಕೀಯ ಸಂಸ್ಥೆಯಿಂದ ಪ್ರಾಥಮಿಕ ವೈದ್ಯಕೀಯ ಅರ್ಹತೆಯನ್ನು ಪಡೆದುಕೊಂಡಿದ್ದರೆ, ನಿಯಮಾವಳಿಗಳಲ್ಲಿ ತಿಳಿಸಿರುವ ಇತರ ಅರ್ಹತಾ ಮಾನದಂಡಗಳನ್ನು ಪೂರೈಸುವುದರ ಜೊತೆಗೆ ಭಾರತದಲ್ಲಿ ನೋಂದಣಿ ಮಾಡಿಕೊಳ್ಳಲು ನಿಗದಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂದು ಎನ್‌ಎಂಸಿ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಗಿದ ಜಾತಕ ಕಥೆಗಳು

ಅಷ್ಟು ಜನರಿಗೆ ಒಂದು ಕಾಡುಪ್ರಾಣಿಯೂ, ಪಕ್ಷಿಯೂ ತೊಂದರೆ ಕೊಟ್ಟಿರಲಿಲ್ಲ. ಅದಕ್ಕೆ ಬೋಧಿಸತ್ವನ ತಪಸ್ಸಿನ ಸಾಧನೆ ಕಾರಣವಾಗಿತ್ತು. ಅಲ್ಲಿಯವರೆಗೆ ರಾಜ ಸಂಜಯ ಸಂತೋಷವಾಗಿದ್ದ. ಆನೆಯನ್ನೇರಿ ಬಂದ ಮಗ-ಸೊಸೆಯರನ್ನು ಕಂಡು ರಾಜ ಸೇನಾಪತಿಯನ್ನು ಕೇಳಿದ, 'ನನ್ನ ಮಗ ಹೋಗುವ ಮಾರ್ಗ ಅಲಂಕೃತವಾಗಿದೆಯಾ?'. 'ಹೌದು ಪ್ರಭೂ, ಎಲ್ಲವೂ ಸಿದ್ಧವಾಗಿದೆ. ಈಗ ಹೊರಡುವ ಸಮಯ ಬಂದಿದೆ' ಎಂದ ಸೇನಾಪತಿ. ಎಲ್ಲರೂ ಹೊರಟರು. ವಂಕಗಿರಿಯಿಂದ ಜೆತುತ್ತರ ನಗರದ ವರೆಗಿನ ಅರವತ್ತು ಯೋಜನದ ರಾಜಮಾರ್ಗ ಅಲಂಕೃತವಾಗಿತ್ತು. ಎಲ್ಲೆಲ್ಲಿಯೂ ಸಿಂಗಾರವಾಗಿತ್ತು, ಹೂವು ಹಾಸಲ್ಪಟ್ಟಿತ್ತು. ಮುಂದೆ ಗಜಾರೋಹಿಗಳು, ರಥಿಕರು, ಕುದುರೆ ಸವಾರರು, ಕಾಲಾಳುಗಳು ಮುಂದೆ ನಡೆದರು. ನಂತರ ಸಿವಿಗಳ ರಾಜ ಸಂಜಯ, ರಾಣಿ ಪುಸತಿದೇವಿ, ವೆಸ್ಸಂತರ ಬೋಧಿಸತ್ವ, ರಾಜಕುಮಾರಿ ಮಾದ್ರಿದೇವಿ ತಮ್ಮ ಮಕ್ಕಳೊಂದಿಗೆ ಹೊರಟರು. ಅವರ ಹಿಂದೆ ಕಿರೀಟಧಾರಿಗಳು, ಚರ್ಮಧಾರಿಗಳು, ಖಡ್ಗಧಾರಿಗಳು, ಕವಚಧಾರಿಗಳು, ಅಸಂಖ್ಯ ಯೋಧರು ನಡೆದರು. ವೆಸ್ಸಂತರ ಕಾಡಿನಿಂದ ಹೊರಟ ಮೇಲೆ ಎಲ್ಲ ಕಾಡು ಪ್ರಾಣಿಗಳು, ಪಕ್ಷಿಗಳು ಒಂದೆಡೆಗೆ ಸೇರಿ ದುಃಖಿಸಿದವು. ಮುಂದೆ ಯಾವ ಪ್ರಾಣಿಯೂ, ಮಧುರಸ್ವರದಲ್ಲಿ ಕೂಗಲಿಲ್ಲ, ಯಾವ ಪಕ್ಷಿಯೂ ಸಂತೋಷದಿಂದ ಹಾಡಲಿಲ್ಲ. ಅರವತ್ತು ಯೋಜನದ ಮಾರ್ಗವನ್ನು ಎರಡು ತಿಂಗಳುಗಳ ಮೆರವಣಿಗೆಯಲ್ಲಿ ಮುಗಿಸಿ ರಾಜ ಜೆತುತ್ತರ ನಗರಕ್ಕೆ ಬಂದ.

ಅಲಂಕೃತವಾದ ನಗರ ಪ್ರವೇಶಮಾಡಿ ಅರಮನೆಯನ್ನು ಸೇರಿದ. ವೆಸ್ಸಂತರನ ಆಗಮನದಿಂದ ಜನಪದವಾಸಿಗಳು, ನಿಗಮವಾಸಿಗಳು ಸಂತೋಷಪಟ್ಟರು. ಇನ್ನು ಮುಂದೆ ವೆಸ್ಸಂತರನ ಆಜ್ಞೆ ಪ್ರಚಲಿತವಾಗುತ್ತದೆ ಎಂದು ಘೋಷಣೆಯಾಯಿತು, ಕೈದಿಗಳ ಬಿಡುಗಡೆಯಾಯಿತು. ಅರಮನೆಯಲ್ಲಿ ವ್ಯವಸ್ಥಿತವಾದ ರಾಜ ವೆಸ್ಸಂತರ ಬ್ರಾಹ್ಮೀ ಮುಹೂರ್ತದಲ್ಲಿ ಯೋಚನೆ ಮಾಡಿದ. 'ದಾನ ಮಾಡುವುದು ನನಗೆ ಹುಟ್ಟಿನಿಂದಲೇ ಬಂದದ್ದು. ಈಗ ನಾನು ರಾಜನಾಗಿ ಬಂದಿದ್ದೇನೆ. ರಾತ್ರಿ ಕಳೆದ ಮೇಲೆ ನಾನು ಬಂದ ಸುದ್ದಿ ರಾಜ್ಯದಲ್ಲೆಲ್ಲ ತಿಳಿಯುತ್ತದೆ. ಆಗ ಯಾಚಕರು ಬರುತ್ತಾರೆ. ಅವರಿಗೆ ಏನು ದಾನ ಮಾಡಲಿ?'. ಅದೇ ಸಮಯದಲ್ಲಿ ಶಕ್ರನ ಆಸನ ಬಿಸಿಯಾಯಿತು. ಆತ ಧ್ಯಾನದಲ್ಲಿ ವೆಸ್ಸಂತರನ ಆಲೋಚನೆಯನ್ನು ತಿಳಿದ. ಆಮೇಲೆ ರಾಜಭವನದ ಪಶ್ಚಿಮ ಮತ್ತು ಪೂರ್ವದ ಕಡೆಗೆ ಸೊಂಟದವರೆಗೆ ಸಪ್ತರತ್ನಗಳ ಮಳೆಯನ್ನು ಸುರಿಸಿದ. ಇಡೀ ಜೆತುತ್ತರ ನಗರದಲ್ಲಿ ಮೊಳಕಾಲಿನವರೆಗೆ ಬಂಗಾರದ, ರತ್ನಗಳ ಮಳೆಯಾಯಿತು. ಮಾರನೆಯ ದಿನ ಬೋಧಿಸತ್ವ ಅವರವರ ಮನೆಗಳ ಪೂರ್ವದಲ್ಲಿ, ಪಶ್ಚಿಮದಲ್ಲಿ ಬಿದ್ದ ಸಂಪತ್ತೆಲ್ಲ ಅವರದೇ ಎಂದು ಘೋಷಣೆ ಮಾಡಿದ. ಉಳಿದ ಧನರಾಶಿಯನ್ನು ಭಂಡಾರದಲ್ಲಿ ತುಂಬಿಸಿ, ದಾನಸ್ಥಾಪನೆ ಮಾಡಿದ. ಮುಂದೆ ದಾನ ಕೇಳುವ ಯಾರೂ ಉಳಿಯಲಿಲ್ಲ.

ಬುದ್ಧಿವಂತ, ಧೀಮಂತ ಬೋಧಿಸತ್ವ ಅನೇಕ ವರ್ಷ ದಾನ ಮಾಡುತ್ತ, ಧರ್ಮದಿಂದ ರಾಜ್ಯಪಾಲನೆ ಮಾಡುತ್ತ ಬದುಕಿ, ದೇಹದಿಂದ ಬಿಡುಗಡೆಯಾದ ಮೇಲೆ ಮತ್ತೆ ಸ್ವರ್ಗ ಸೇರಿದ. ಕೊನೆಗೆ ಬುದ್ಧ ಹೇಳಿದ, 'ನನಗೆ ತೊಂದರೆಕೊಟ್ಟ ಮುದುಕ ಬ್ರಾಹ್ಮಣ ದೇವದತ್ತ, ಅಮಿತ್ತತಾಪನ ಚಿಂಚಾಮಾಣವಿಕೆ, ಜೆತುಪುತ್ರ ಚೆನ್ನ, ಅಚ್ಯುತ ತಪಸ್ವಿ ಸಾರಿಪುತ್ತ, ಸಂಜಯ ಶುದ್ಧೋದನ ಮಹಾರಾಜ, ಪುಸತಿದೇವಿ ಮಹಾಮಾಯೆ, ಮಾದ್ರಿದೇವಿ ರಾಹುಲಮಾತೆ. ಜಾಲಿಕುಮಾರ ರಾಹುಲ, ಕೃಷ್ಣಾಜಿನ ಉತ್ಪಲವರ್ಣೆ, ಉಳಿದ ಪರಿಷತ್ತು ಬುದ್ಧ ಪರಿಷತ್ತು, ವೆಸ್ಸಂತರ ಮಹಾರಾಜ ನಾನೇ'.

ಇಲ್ಲಿಗೆ ಬುದ್ಧನ ಜಾತಕ ಕಥೆಗಳು ಮುಕ್ತಾಯವಾದವು. ❖

ದಿನ ಭವಿಷ್ಯ

ಬುಧವಾರ ಸೆಪ್ಟೆಂಬರ್ 29, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಹಸ್ತೆ ಅಷ್ಟಮೀ ಗಂ. 24-54 (ಹ. 4-13) ಬುಧವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ. 35-57 (ರಾ. 8-38) ವರೀಯನ್ ನಾಮ ಯೋಗ ಗಂ. 27-13 ಕೌಲವ ಕರಣ ಗಂ. 24-54 ವಿಷಾಭಾವಃ ಅಮೃತ ಗಂ 19-10 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-12 ಸೂರ್ಯಾಸ್ತ: 6-10 ಅದೃಷ್ಟ ಸಂಖ್ಯೆ 2 5 8

ಮೇಷ: ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಟೆಗಳಿಗೆ ಚಾಲನೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತಿ.

ವೃಷಭ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಪ್ರಗತಿ.

ಮಿಥುನ: ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶಕ್ಕೆ ಪ್ರಯಾಣ ಮಾಡುವ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ವಿಶೇಷ ಭೋಜನ ಕೂಟದಲ್ಲಿ ಭಾಗಿ.

ಕರ್ಕಾಟಕ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿ. ಧೈರ್ಯ, ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ.

ಸಿಂಹ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಸಂಗಾತಿಯ ಕೋಪವನ್ನು ಎದುರಿಸಬೇಕಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ. ಬಂಧುಗಳ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿ.

ಕನ್ಯಾ: ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಕಾಲ. ಮನಸ್ಸಿಟ್ಟು ಕೆಲಸವನ್ನು ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲವಾಗಿದೆ.

ತುಲಾ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ ದೊರೆಯುವ ಸಾಧ್ಯತೆ.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಅನುಕೂಲಕರವಾಗಿ ತೋರಿಬರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ.

ಧನು: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ.

ಮಕರ: ಆರ್ಥಿಕವಾಗಿ ನಾನಾರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲತೆ ಕೂಡಿಬರಲಿದೆ. ರಾಜಕೀಯದಲ್ಲಿ ಸೂಕ್ತ ಸ್ಥಾನ ದೊರಕುವ ಸಾಧ್ಯತೆ.

ಕುಂಭ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ಮೀನ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆತು ಮನೆಯವರೊಂದಿಗೆ ದೂರದೂರಿನ ಪ್ರಯಾಣದ ಸಾಧ್ಯತೆ ಕಂಡುಬರುತ್ತಿದೆ.

ನಿಮ್ಮ ಜನ್ಮದಿನ 29-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಬೇರೆಯವರ ಪ್ರಭಾವದಿಂದಾಗಿ ನಿಮ್ಮ ಕೆಲಸ ಕಾರ್ಯಗಳು ನೀವು ಯೋಚಿಸಿದಂತೆ ನಡೆಯಲಾರವು. ನಿಮ್ಮತನಕ್ಕಾಗಿ ನೀವು ಹತ್ತಿರದವರನ್ನು ದೂರ ಮಾಡಿಕೊಳ್ಳಬೇಕಾದೀತು. ಸ್ವತಂತ್ರ ವ್ಯಕ್ತಿತ್ವಕ್ಕಾಗಿ ನಡೆಸುವ ಹೋರಾಟದಲ್ಲಿ ನೀವು ಸಫಲರಾಗುವಿರಿ.

ಪದಬಂಧ 4733

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಹಿತ್ತಿಲಲ್ಲಿ ಒಣ ಹಾಕಿದ ತೆಳುವಾದ ಸೀರೆ (3)
3. ಮುಂದೆ ಬರಲಿರುವ ಕಾಲ (3)
5. ಪುಣ್ಯ ಸ್ಥಳವಿದು (2)
6. ಧಮಕಿ ಹಾಕುತ್ತಿರುವನಲ್ಲಾ ಈ ನೀಚ ವ್ಯಕ್ತಿ! (3)
7. ಇಲ್ಲಿಯೇ ಹಾಜರಾಗಿರುವ ಸಾಮ್ರಾಟ! (4)
8. ಸುಳ್ಳು ನುಡಿಯದ ಸಾವಿತ್ರಿಯ ಪತಿ (4)
10. ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11. ಚಾವಡಿಯನ್ನೇರಿದ ಪಿಸುಣ (4)
13. ತವರಲ್ಲಿರುವ ಲೋಹ (3)
14. ಭಾರತ ಹೊತ್ತಿರುವ ಒಜ್ಜೆ! (2)
15. ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಬಳಿ! (3)
17. ಭಾವನ ಗುಣ! (3)

ಮೇಲಿಂದ ಕೆಳಕ್ಕೆ
1. ಖರ್ಚು ಕಳೆದು ಉಳಿದುದು (2)
2. ತಾಪತ್ರಯವಿದ್ದಾಗ ಬರೆದ ಓಲೆ (2)
4. ಪ್ರೇಮಿಗಳ ಅಗಲಿಕೆಯ ನೋವು ದೀರ್ಘವಾಗಿದೆಯಲ್ಲಾ! (3)
5. ಸುಖದ ಸುದ್ದಿಯಿದು (6)
6. ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7. ಚನ್ನಾಗಿ ಕಡೆಯಲ್ಪಟ್ಟಿದ್ದು (3)
9. ಶಾಶ್ವತವಿರದೆ ನಾಶವಾಗುವಂಥದ್ದು (3)
12. ಕೋತಿ ಇಲ್ಲಿಗೆ ಬಂದಿದೆ (3)
14. ಅಭಾವ ಕಾಲದಲ್ಲಿ ಆಗಮಿಸಿದ ಅಕ್ಕನ ಗಂಡ (2)
16. ನೀರು ಒಸರುವ ಜಾಗ (2)



4732ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ವಿನೋದ 3. ಗುಮಾನಿ 5. ನರ 6. ರಿಪೇರಿ 7. ಯಮ 9. ಶಿಶಿರ 10. ಹರವಿ 11. ತಟ 13. ಪರಾಗ 15. ಸುರ 16. ಉಬ್ಧಕ 17. ದಶಮ

ಮೇಲಿಂದ ಕೆಳಕ್ಕೆ: 1. ವಿವರ 2. ದಳ್ಳುರಿ 3. ಗುಜರಿ 4. ನಿಶ್ಚಯ 5. ನಖಶಿಖಾಂತ 8. ಮನೋವಿಕಾರ 12. ಟಪಾಲು 13. ಪದಕ 14. ಗದ್ದದ 15. ಸುಗಮ

ಸುಡೊಕು 5119

						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5118 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಷೇರುಪೇಟೆ ವಹಿವಾಟು
410



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,855
ಇಂದಿನ ಅಂತ್ಯ	17,748
▼	107
ದಿನದ ಕನಿಷ್ಠ	17,576

ವಿನಿಮಯ ದರ

$ ಡಾಲರ್	74.06
£ ಪೌಂಡ್	101.05
€ ಯುರೊ	86.48
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹460
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1517)
ಸೋಯಾ (ರಿಫೈನ್ಡ್)	₹1325 (1328)
ಸೂರ್ಯಕಾಂತಿ (ರಿಫೈನ್ಡ್)	₹1360(1360)
ಪಾಮೋಲಿನ್	₹1208 (1210)

ಸೋಷಿಯಲ್ ಸ್ಟಾಕ್ ಎಕ್ಸ್‌ಚೇಂಜ್ ಆರಂಭಕ್ಕೆ 'ಸೆಬಿ' ಮುಂದಡಿ

ಮುಂಬೈ (ಪಿಟಿಐ): ಸಾಮಾಜಿಕ ಅಭಿವೃದ್ಧಿ ಉದ್ದೇಶದ ಉದ್ದಿಮೆಗಳಿಗೆ ಬಂಡವಾಳ ಸಂಗ್ರಹಿಸಲು ಅವಕಾಶ ಕಲ್ಪಿಸುವ 'ಸೋಷಿಯಲ್ ಸ್ಟಾಕ್ ಎಕ್ಸ್‌ಚೇಂಜ್' (ಎಸ್‌ಎಸ್‌ಇ) ಆರಂಭಕ್ಕೆ ಅಗತ್ಯವಿರುವ ನಿಯಮಗಳಿಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮಂಗಳವಾರ ಒಪ್ಪಿಗೆ ನೀಡಿದೆ. ಸೆಬಿ ರಚಿಸಿದ್ದ ಎರಡು ಸಮಿತಿಗಳು ನೀಡಿದ ವರದಿ ಆಧರಿಸಿ ಈ ನಿಯಮಗಳನ್ನು ರೂಪಿಸಲಾಗಿದೆ.

ಈಗಿರುವ ಷೇರು ಮಾರುಕಟ್ಟೆಗಳ ಪ್ರತ್ಯೇಕ ಭಾಗವಾಗಿ ಎಸ್‌ಎಸ್‌ಇ ಕೆಲಸ ಮಾಡಲಿದೆ ಎಂದು ಸೆಬಿ ಅಧ್ಯಕ್ಷ ಅಜಯ್ ತ್ಯಾಗಿ ಅವರು ಮಂಗಳವಾರ ತಿಳಿಸಿದರು. ಲಾಭದ ಉದ್ದೇಶವಿಲ್ಲದ ಸಂಸ್ಥೆಗಳು (ಎನ್‌ಪಿಒ) ಹಾಗೂ ಲಾಭದ ಉದ್ದೇಶವಿದ್ದರೂ ಸಾಮಾಜಿಕ ಪರಿಣಾಮ ಬೀರುವಂತಹ ಕೆಲಸ ಮಾಡುವ ಉದ್ದಿಮೆಗಳು ಎಸ್‌ಎಸ್‌ಇ ಮೂಲಕ ಬಂಡವಾಳ ಸಂಗ್ರಹಿಸಬಹುದು.

ಸೆಬಿ ಅನುಮೋದನೆ ನೀಡಿರುವ 15 ಸಾಮಾಜಿಕ ಚಟುವಟಿಕೆಗಳ ಪೈಕಿ ಯಾವುದಾದರೂ ಒಂದು ಚಟುವಟಿಕೆಯಲ್ಲಿ ಈ ಸಂಸ್ಥೆಗಳು, ಉದ್ದಿಮೆಗಳು ತೊಡಗಿಸಿಕೊಂಡಿರಬೇಕು. ಎಸ್‌ಎಸ್‌ಇ ಯಾವಾಗ ಕಾರ್ಯ ಆರಂಭಿಸಬಹುದು ಎಂಬ ಪ್ರಶ್ನೆಗೆ ತ್ಯಾಗಿ ಅವರು ಕಾಲಮಿತಿ ನಿಗದಿ ಮಾಡಲಿಲ್ಲ. ಎಸ್‌ಎಸ್‌ಇ ವಿಚಾರವಾಗಿ ಸೆಬಿ, ಸರ್ಕಾರದ ಜೊತೆ ಕೆಲಸ ಮಾಡಲಿದೆ ಎಂದರು.

ಅರ್ಹ ಎನ್‌ಪಿಒಗಳು ಈಕ್ವಿಟಿ, ಮ್ಯೂಚುವಲ್ ಫಂಡ್, ಸಾಮಾಜಿಕ ಪರಿಣಾಮ ಬೀರುವ ಫಂಡ್, ಅಭಿವೃದ್ಧಿ ಬಾಂಡ್‌ಗಳ ಮೂಲಕ ಬಂಡವಾಳ ಸಂಗ್ರಹಿಸಲು ಅವಕಾಶವಿದೆ. ಎನ್‌ಪಿಒಗಳು ಎಸ್‌ಎಸ್‌ಇಯಲ್ಲಿ ನೋಂದಣಿ ಮಾಡಿಕೊಳ್ಳಬೇಕು.

ಸಾಮಾಜಿಕ ಉದ್ದಿಮೆಗಳು ತಮ್ಮ ಆಡಳಿತ ವ್ಯವಸ್ಥೆ, ಹಣಕಾಸಿನ ಸ್ಥಿತಿ ಹಾಗೂ ತಮ್ಮಿಂದ ಸಮಾಜದ ಮೇಲೆ ಆಗಿರುವ ಪರಿಣಾಮದ ಬಗ್ಗೆ ವರದಿ ಮಾಡಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಸೆಬಿ ಹೇಳಿದೆ.

ಕಾರ್ಪೊರೇಟ್ ಪ್ರತಿಷ್ಠಾನಗಳು, ರಾಜಕೀಯ ಮತ್ತು ಧಾರ್ಮಿಕ ಸಂಘಟನೆಗಳು ಎಸ್‌ಎಸ್‌ಇಯಲ್ಲಿ ನೋಂದಣಿ ಮಾಡಿಕೊಳ್ಳಬಾರದು ಎಂದು ಸೆಬಿಯ ಸಮಿತಿಯೊಂದು ಮೇ ತಿಂಗಳಿನಲ್ಲಿ ಹೇಳಿದೆ. ಎಸ್‌ಎಸ್‌ಇ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2019–20ನೇ ಸಾಲಿನ ಬಜೆಟ್ ಭಾಷಣದಲ್ಲಿ ಮೊದಲ ಬಾರಿಗೆ ಪ್ರಸ್ತಾಪ ಮಾಡಿದ್ದರು.

ಜವಳಿ: ನೋಂದಣಿಯಾದ ಕಂಪನಿಗೆ ಮಾತ್ರ ಪಿಎಲ್‌ಐ

ನವದೆಹಲಿ (ಪಿಟಿಐ): ಜವಳಿ ಉದ್ಯಮಕ್ಕೆ ಈಚೆಗೆ ಘೋಷಿಸಲಾಗಿರುವ ₹ 10,683 ಕೋಟಿ ಮೊತ್ತದ ತಯಾರಿಕೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯಲ್ಲಿ ಭಾರತದಲ್ಲಿ ನೋಂದಣಿ ಆಗಿರುವ ತಯಾರಿಕಾ ಕಂಪನಿಗಳು ಮಾತ್ರ ಪಾಲ್ಗೊಳ್ಳಬಹುದು ಎಂದು ಕೇಂದ್ರ ಜವಳಿ ಸಚಿವಾಲಯ ಹೇಳಿದೆ.

ಯೋಜನೆಯ ವಿವರಗಳನ್ನು ಸಚಿವಾಲಯವು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಯೋಜನೆಯ ಅಡಿಯಲ್ಲಿ ನೋಂದಣಿ ಮಾಡಿಕೊಂಡ ಕಂಪನಿ ತಯಾರಿಸಿದ ಉತ್ಪನ್ನಗಳು ಮಾತ್ರ ಉತ್ತೇಜನಕ್ಕೆ ಅರ್ಹತೆ ಪಡೆಯುತ್ತವೆ. ಯೋಜನೆಯ ಅಡಿ 2025–26ರಿಂದ 2029–30ರವರೆಗೆ ಉತ್ತೇಜನ ನೀಡಲಾಗುತ್ತದೆ.

ಉದ್ಯಮ ಸಮೂಹವೊಂದಕ್ಕೆ ಸೇರಿದ ಒಂದು ಕಂಪನಿಗೆ ಮಾತ್ರ ಪಿಎಲ್‌ಐ ಅಡಿಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. ಅದೇ ಸಮೂಹದ ಬೇರೆ ಕಂಪನಿಗಳಿಗೆ ಯೋಜನೆಯ ಫಲಾನುಭವಿ ಆಗಲು ಅವಕಾಶವಿಲ್ಲ ಎಂದು ಸಚಿವಾಲಯ ಹೇಳಿದೆ.

'ಉದ್ಯಮ ಸಮೂಹಗಳು ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಬಹುದು. ಆದರೆ, ಸಮೂಹವು ಸಲ್ಲಿಸಿದ ಒಂದಕ್ಕಿಂತ ಹೆಚ್ಚು ಅರ್ಜಿಗಳು ಅಂತಿಮ ಹಂತಕ್ಕೆ ಆಯ್ಕೆಯಾದಲ್ಲಿ, ಯಾವ ಕಂಪನಿಗೆ ಸೌಲಭ್ಯ ಸಿಗಬೇಕು ಎಂಬುದನ್ನು ಉದ್ಯಮ ಸಮೂಹವು ಆಗ ತೀರ್ಮಾನಿಸಬೇಕು' ಎಂದು ಹೇಳಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	25000-50000
ಹಳತು	46000-51500

ಚಿತ್ರದುರ್ಗ

ಆಪಿ	50619-51029
ಬೆಟ್ಟೆ	39659-40099
ಕೆಂಪುಗೋಟು	32600-33000
ರಾಶಿ	50139-50569

ಪುತ್ತೂರು

ಕೋಕ	10500-26000
ಹೊಸತು	35500-50000

ಸಿದ್ದಾಪುರ

ಬಿಳಿಗೋಟು	36408-42308
ಕೋಕ	26699-39899
ಚಾಲಿ	46099-48609
ಕೆಂಪುಗೋಟು	33209-43208
ರಾಶಿ	47089-50509
ತಟ್ಟಿಬೆಟ್ಟೆ	36699-45258

ರಾಮನಗರ ರೇಷ್ಮೆ

ಮಿಶ್ರ ತಳಿ	271-458
ದ್ವಿತಳಿ	303-556

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13950
ಎಸಿ	6300
ಆರ್‌ಪಿ	6250
ಆರ್‌ಸಿ	3590

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಆದಿನಾರಾಯಣ, ಬೆಂಗಳೂರು

- ಪ್ರಶ್ನೆ: ನನ್ನ ವಯಸ್ಸು 75 ವರ್ಷ. ನಾನು ನಿವೃತ್ತ ಸರ್ಕಾರಿ ನೌಕರ. ಪ್ರತೀ ಬುಧವಾರ ನಿಮ್ಮ ಅಂಕಣ ಓದುತ್ತೇನೆ. ನನ್ನ ಪ್ರಶ್ನೆ ಹೀಗಿದೆ – ಪ್ರತಿ ನೌಕರ ತನ್ನ ನಿವೃತ್ತಿಯ ನಂತರ ಸಿಗುವ ಪಿಂಚಣಿಗೆ ತನ್ನ ಪತ್ನಿಯನ್ನು ನಾಮನಿರ್ದೇಶನ ಮಾಡುವುದು ಸಹಜ. ಒಂದು ವೇಳೆ ಪತ್ನಿ ಮೊದಲೇ ತೀರಿಕೊಂಡಲ್ಲಿ, ಪಿಂಚಣಿದಾರ ತನ್ನ ಕುಟುಂಬದ ಬೇರೆ ಯಾರನ್ನಾದರೂ ನಾಮನಿರ್ದೇಶನ ಮಾಡಲು ಅವಕಾಶ ಇದೆಯೇ?

ಉತ್ತರ: ಪಿಂಚಣಿದಾರ ತನ್ನ ಕಾಲಾನಂತರ ಬರುವ ಪಿಂಚಣಿ ಪಡೆಯಲು ಸಹಜವಾಗಿಯೇ ತನ್ನ ಹೆಂಡತಿಯ ಹೆಸರನ್ನು ನಾಮನಿರ್ದೇಶನ ಮಾಡಿರುತ್ತಾನೆ. ನೀವು ತಿಳಿಸಿದಂತೆ, ನಾಮ ನಿರ್ದೇಶನ ಆಗಿರುವ ವ್ಯಕ್ತಿ ಪಿಂಚಣಿ ಪಡೆಯುವ ವ್ಯಕ್ತಿಗಿಂತ ಮೊದಲೇ ಮರಣ ಹೊಂದಿದಲ್ಲಿ, ಪಿಂಚಣಿದಾರನಿಗೆ ಅಪ್ರಾಪ್ತ ವಯಸ್ಸಿನ ಮಕ್ಕಳಿದ್ದರೆ ಮಾತ್ರ ನಾಮನಿರ್ದೇಶನ ಮಾಡಲು ಅವಕಾಶ ಇದೆ. ಅಪ್ರಾಪ್ತ ಮಕ್ಕಳು ಪ್ರಾಪ್ತ ವಯಸ್ಸಿಗೆ ಬಂದಾಗ ಪಿಂಚಣಿ ಸಿಗಲಾರದು.

ಹೆಸರು, ಊರು ಬೇಡ

- ಪ್ರಶ್ನೆ: ನಾನು ವಿಮಾ ಕಂಪನಿಯಿಂದ ನಿವೃತ್ತನಾಗಿದ್ದು, ಆದಾಯ ತೆರಿಗೆ ಕಳೆದು ₹ 50 ಲಕ್ಷ ಬಂದಿರುತ್ತದೆ. ನಾನು ನನ್ನ ಅಕ್ಕನ (ಅವಿವಾಹಿತೆ) ಉಪಜೀವನಕ್ಕಾಗಿ ₹ 10 ಲಕ್ಷ ಹಣ ಗಿಫ್ಟ್ ಡೀಡ್ ಮಾಡಿ, ಅಂಚೆ ಕಚೇರಿ ಠೇವಣಿಯಲ್ಲಿ ಇರಿಸಿದೆ. ಈ ಠೇವಣಿಗೆ ನನ್ನ ನಾಮ-ನಿರ್ದೇಶನವಿದೆ. ಈಗ ನನ್ನ ಅಕ್ಕ ಅನಾರೋಗ್ಯದಿಂದ ಮರಣ ಹೊಂದಿದ್ದು, ಅಂಚೆ ಕಚೇರಿಯವರು ನಮ್ಮಿಂದ ಮರಣ ಪತ್ರ ಪಡೆದು ಈ ಹಣ ನಾಮ ನಿರ್ದೇಶನ ಹೊಂದಿದ ನನಗೆ ಕೊಟ್ಟಿರುತ್ತಾರೆ. ಇದರಿಂದ ನನಗೆ ಆದಾಯ ತೆರಿಗೆ ಬರುತ್ತದೆಯೇ ತಿಳಿಸಿರಿ. ₹ 10 ಲಕ್ಷಕ್ಕೆ ನಾನು ಒಮ್ಮೆ ನಿವೃತ್ತಿಯಲ್ಲಿ ತೆರಿಗೆ ಪಾವತಿಸಿದ್ದೇನೆ.

ಉತ್ತರ: ನೀವು ಹಾಗೂ ನಿಮ್ಮ ಅಕ್ಕ ರಕ್ತ ಸಂಬಂಧಿಗಳು. ₹ 10 ಲಕ್ಷ ಗಿಫ್ಟ್ ಡೀಡ್ ಮುಖಾಂತರ ನೀವೇ ನಿಮ್ಮ ಅಕ್ಕನಿಗೆ ಕೊಟ್ಟಿದ್ದಾಗಿದೆ. ಈ ಕಾರಣದಿಂದ, ನಾಮನಿರ್ದೇಶನ ಹೊಂದಿ ನೀವು ಹೀಗೆ ಪಡೆಯುವ ₹ 10 ಲಕ್ಷಕ್ಕೆ ಪುನಃ ಆದಾಯ ತೆರಿಗೆ ಕೊಡುವ ಅಗತ್ಯವಿಲ್ಲ. ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಠೇವಣಿ ಮಾಡುವಾಗ ನಾಮ ನಿರ್ದೇಶನ ಮಾಡಬೇಕಾಗುತ್ತದೆ. ಠೇವಣಿದಾರ ಮರಣ ಹೊಂದಿ, ನಾಮನಿರ್ದೇಶನ ಇರುವ ವ್ಯಕ್ತಿ ಹಣ ಪಡೆದಲ್ಲಿ ಅಂತಹ ಮೊತ್ತವನ್ನು ಹಣ ಪಡೆದವರ ಆದಾಯಕ್ಕೆ ಸೇರಿಸಿ ತೆರಿಗೆ ಕೊಡಬೇಕಿಲ್ಲ. ಮುಂದೆ ಈ ಹಣದಿಂದ ಬರುವ ಬಡ್ಡಿ ವರಮಾನವನ್ನು ಹಣ ಪಡೆದ ವ್ಯಕ್ತಿಯ ಒಟ್ಟು ಆದಾಯಕ್ಕೆ ಸೇರಿಸಿ ತೆರಿಗೆ ಕೊಡಬೇಕಾಗುತ್ತದೆ.

ಗುರು ಚನ್ನಬಸಪ್ಪ, ನೆಲಮಂಗಲ

- ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 71 ವರ್ಷ. ನನ್ನ ಮಾಸಿಕ ಪಿಂಚಣಿ ₹ 29,954. ಬ್ಯಾಂಕ್–ಅಂಚೆ ಕಚೇರಿಗಳಲ್ಲಿ ಠೇವಣಿ ಇಲ್ಲ. ಮೇ 2021ರ ನನ್ನ ಪಿಂಚಣಿಯಲ್ಲಿ ₹ 6,189 ಟಿಡಿಎಸ್ ಮಾಡಿದ್ದಾರೆ. ನಾನು ಆದಾಯ ತೆರಿಗೆಗೆ ಒಳಗಾಗುತ್ತೇನೆಯೇ ಎಂಬ ಬಗ್ಗೆ ಸಲಹೆ ಬೇಕಾಗಿದೆ. ಜನಸಾಮಾನ್ಯರಿಗೆ ಉಪಯುಕ್ತ ಆಗುವ ಅಂಕಣ 'ಪ್ರಜಾವಾಣಿ' ಹೊರತುಪಡಿಸಿ ಇನ್ಯಾವ ಪತ್ರಿಕೆಗಳಲ್ಲಿಯೂ ಬರುವುದಿಲ್ಲ. 'ಪ್ರಜಾವಾಣಿ'ಗೆ ಹಾಗೂ ನಿಮಗೆ ಅಭಿನಂದನೆ.

ಉತ್ತರ: ಇಂದಿನ ಆದಾಯ ತೆರಿಗೆ ನಿಯಮದಂತೆ, ಯಾವುದೇ ವ್ಯಕ್ತಿಯ ವಾರ್ಷಿಕ ಒಟ್ಟು ಆದಾಯ ₹ 5 ಲಕ್ಷದೊಳಗೆ ಇರುವಲ್ಲಿ ಅವರಿಗೆ ಆದಾಯ ತೆರಿಗೆ ಇಲ್ಲ. ನಿಮ್ಮ ವಾರ್ಷಿಕ ಆದಾಯ ₹ 5 ಲಕ್ಷ ದಾಟುವ ತನಕ ನೀವು ತೆರಿಗೆಗೆ ಒಳಗಾಗುವುದಿಲ್ಲ. ನೀವು ಪಿಂಚಣಿದಾರ ಆದ್ದರಿಂದ ಸೆಕ್ಷನ್ 16(1ಎ) ಆಧಾರದಲ್ಲಿ ₹ 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ಮೇಲೆ ವಿನಾಯಿತಿ ಪಡೆಯಬಹುದು. ಈ ಸವಲತ್ತು ಸೇರಿಸಿ ನಿಮ್ಮ ಒಟ್ಟು ಆದಾಯ ₹5,50,000 ದಾಟುವ ತನಕವೂ ತೆರಿಗೆಗೆ ಒಳಗಾಗುವುದಿಲ್ಲ.

ನಿಮ್ಮ ಈಗಿನ ವಾರ್ಷಿಕ ಒಟ್ಟು ಆದಾಯ ₹ 3,59,448. ಓರ್ವ ವ್ಯಕ್ತಿ ತೆರಿಗೆಗೆ ಒಳಗಾಗಲಿ, ಆಗದೇ ಇರಲಿ ಒಟ್ಟು ಆದಾಯ ₹ 2.50 ಲಕ್ಷ ದಾಟಿದಲ್ಲಿ, ಹಿರಿಯ ನಾಗರಿಕರಿಗೆ ₹ 3 ಲಕ್ಷ ದಾಟಿದಲ್ಲಿ, 80 ವರ್ಷ ದಾಟಿದವರಿಗೆ ₹ 5 ಲಕ್ಷ ದಾಟಿದಲ್ಲಿ ಐ.ಟಿ. ರಿಟರ್ನ್ಸ್ ತುಂಬಬೇಕಾಗುತ್ತದೆ. ನೀವು ಬ್ಯಾಂಕ್‌ನಿಂದ ಟಿಡಿಎಸ್ ಮೊತ್ತಕ್ಕೆ ಫಾರಂ ನಂಬರ್ 16(ಎ) ಪಡೆದು ಐ.ಟಿ. ರಿಟರ್ನ್ಸ್ ಸಲ್ಲಿಸಿ, ಕಡಿತವಾದ ₹ 6,189 ವಾಪಸು ಪಡೆಯಿರಿ. ಪತ್ರಿಕೆ ಹಾಗೂ ನನ್ನ ಮೇಲೆ ನೀವು ಇಟ್ಟಿರುವ ಗೌರವಕ್ಕೆ ವಂದನೆಗಳು.

ಅಕ್ಟೋಬರ್ 1ರಿಂದ ಟೊಯೊಟಾ ಕಾರು ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟೊಯೊಟಾ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಕಂಪನಿಯು ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿ ವಾಹನಗಳ ಬೆಲೆಯನ್ನು ಗರಿಷ್ಠ ಶೇಕಡ 2ರವರೆಗೆ ಹೆಚ್ಚಳ ಮಾಡುವುದಾಗಿ ಮಂಗಳವಾರ ತಿಳಿಸಿದೆ.

ತಯಾರಿಕಾ ವೆಚ್ಚ ಹೆಚ್ಚಳದ ಪರಿಣಾಮವನ್ನು ಭಾಗಶಃ ಸರಿದೂಗಿಸಲು ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

1 ಲಕ್ಷ ಆಲ್ಟ್ರೋಜ್ ತಯಾರಿಕೆ: ಟಾಟಾ

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ತನ್ನ ಪುಣೆ ಘಟಕದಲ್ಲಿ ಒಟ್ಟಾರೆ 1 ಲಕ್ಷ ಆಲ್ಟ್ರೋಜ್ ಕಾರು ತಯಾರಿಕೆ ಮಾಡಿದೆ.

ಕಂಪನಿಯು 2019ರ ನವೆಂಬರ್ ಅಂತ್ಯದಲ್ಲಿ ಈ ಕಾರಿನ ತಯಾರಿಕೆ ಆರಂಭಿಸಿತು. 2020ರ ಜನವರಿಯಲ್ಲಿ ಬಿಡುಗಡೆ ಮಾಡಿತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಪ್ರೀಮಿಯಂ ಹ್ಯಾಚ್‌ಬ್ಯಾಕ್ ವಿಭಾಗದಲ್ಲಿ ಆಲ್ಟ್ರೋಜ್ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

'12 ಉಗ್ರ ಸಂಘಟನೆಗಳ ನೆಲೆ ಪಾಕಿಸ್ತಾನ'

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನವು ಅಂತರರಾಷ್ಟ್ರೀಯ ಮಟ್ಟದ 12 ನಿಷೇಧಿತ ಉಗ್ರ ಸಂಘಟನೆಗಳಿಗೆ ನೆಲೆಯಾಗಿದೆ ಎಂದು ಅಮೆರಿಕದ ಸಂಸದೀಯ ಸಂಶೋಧನಾ ಸೇವೆ (ಸಿಆರ್‌ಎಸ್) ವರದಿ ಹೇಳಿದೆ. ಲಷ್ಕರ್‌–ಎ–ತಯ್ಬಾ ಮತ್ತು ಜೈಷ್‌–ಎ–ಮೊಹಮ್ಮದ್ ಕೂಡ ಇದರಲ್ಲಿ ಸೇರಿವೆ.

ಲಷ್ಕರ್‌–ಎ–ತಯ್ಬಾ 80ರ ದಶಕದ ಅಂತ್ಯದಲ್ಲಿ ಸೃಷ್ಟಿಯಾಗಿದ್ದು, ಇದನ್ನು 2001ರಲ್ಲಿ ಅಂತರರಾಷ್ಟ್ರೀಯ ಮಟ್ಟದ ನಿಷೇಧಿತ ಉಗ್ರ ಸಂಘಟನೆ ಎಂದು ಘೋಷಿಸಲಾಗಿತ್ತು. 2008ರ ಮುಂಬೈ ದಾಳಿ ಸೇರಿದಂತೆ ಭಾರತದಲ್ಲಿ ನಡೆದಿರುವ ಹಲವು ಪ್ರಮುಖ ದಾಳಿಗಳ ಹಿಂದೆ ಲಷ್ಕರ್ ಕೈವಾಡವಿರುವುದಾಗಿ ಸಿಆರ್‌ಎಸ್ ವರದಿ ಉಲ್ಲೇಖಿಸಿದೆ.

ಕಾಶ್ಮೀರಿ ಉಗ್ರ ಮಸೂದ್ ಅಜರ್ 2000ನೇ ಇಸವಿಯಲ್ಲಿ ಸ್ಥಾಪಿಸಿದ ಜೈಷ್–ಎ–ಮೊಹಮ್ಮದ್ ಅನ್ನು ಅಂತರ-ರಾಷ್ಟ್ರೀಯ ನಿಷೇಧಿತ ಉಗ್ರ ಸಂಘಟನೆ ಎಂದು 2001ರಲ್ಲಿ ಘೋಷಿಸಲಾಗಿತ್ತು. 2001ರಲ್ಲಿ ಭಾರತದ ಸಂಸತ್ ಮೇಲೆ ನಡೆದ ದಾಳಿಯಲ್ಲಿ ಲಷ್ಕರ್ ಜತೆಗೆ ಜೈಷ್ ಕೈವಾಡವೂ ಇತ್ತು ಎಂದು ವರದಿ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

28-9-2021

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1527)
ಒಂದು ವಾರದ ಡೆಲಿವರಿ	1520 (1522)
ಸೋಯಾ ಕಚ್ಚಾ	1282 (1290)
ಪಾಮ್ ವಾರದ ಡೆಲಿವರಿ	1206 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
45,850 (46,100)
ಬೆಳ್ಳಿ ಕೆ.ಜಿ 59,750 (60,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

For Online Classified Booking
Name Change / Education / Property / Job / Services & many more
Log on to : dhclassifieds.com

ಶ್ರದ್ಧಾಂಜಲಿ

: ಜನನ : 14/06/1962 **ಎನ್. ಶಿವಕುಮಾರ್** B.E : ಮರಣ : 28/09/2021

ಪ್ರೀತಿಯ ಬಂಧುಗಳೇ ಮತ್ತು ಸ್ನೇಹಿತರೆ, ಶ್ರೀಯುತರು ದಿನಾಂಕ: 28.09.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯಕ್ರಿಯೆಯನ್ನು ಇಂದು ಮಧ್ಯಾಹ್ನ 2 ಘಂಟೆಗೆ ಕೊಡಿಗೇಹಳ್ಳಿ ಸಮೀಪದ ವಿರುಪಾಕ್ಷಪುರದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

: ಇಂತಿ ದುಃಖತಪ್ತರು :
ಕೆ.ಎನ್ ಚಕ್ರಪಾಣಿ ಹಿರಿಯ ಬಿಜೆಪಿ ಮುಖಂಡರು, ಅಧ್ಯಕ್ಷರು ಚಕ್ರಪಾಣಿ ಫೌಂಡೇಶನ್. ಶ್ರೀಮತಿ ಜಯಮ್ಮ ನಂಜುಂಡಪ್ಪ (ತಾಯಿ), ಆರ್.ಸುನೀತ(ಹೆಂಡತಿ) ಮತ್ತು ಮಕ್ಕಳು, ಕೆ.ಎ. ಕವಿತಾ(ನಾದಿನಿ) ಮತ್ತು ಮಕ್ಕಳು, ಸಹೋದರ, ಸಹೋದರಿಯರು, ಪೈಲ್ವಾನ್ ಪಿ ನಂಜುಂಡಪ್ಪ ಕುಟುಂಬ ವರ್ಗ ಹಾಗೂ ಅಪಾರ ಬಂಧು–ಬಳಗ

ಪ್ರಥಮ ವರ್ಷದ ಪುಣ್ಯ ಸ್ಮರಣೆ

ಸಾರ್ವಜನಿಕ ಸೇವಾಪ್ರಸಕ್ತ, ಭಕ್ತ ಶಿರೋಮಣಿ, ದಿವಂಗತ ಶ್ರೀಹಾಡೋನಹಳ್ಳಿ ವೆಂಕಟರಮಣಪ್ಪನವರ ಧರ್ಮಪತ್ನಿ
ಶ್ರೀಮತಿ ನಾಗರತ್ನಮ್ಮನವರು
ಜನನ 30.7.1930
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನೀವು ನಮ್ಮಗಳ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದು, ನಿಮ್ಮ ಆದರ್ಶಗಳು ಸದಾ ನಮಗೆ ದಾರಿ ದೀಪವಾಗಿದೆ. ಸದಾ ನಿಮ್ಮನ್ನು ಸ್ಮರಿಸುವ;
ನಿಮ್ಮ ಪುತ್ರರು, ಸೊಸೆಯಂದಿರು, ಪುತ್ರಿಯರು, ಅಳಿಯಂದಿರು ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಕುಟುಂಬದವರು.

10ನೇ ವರ್ಷದ ಸ್ಮರಣೆ



ಹೆಚ್. ಕಮಲಾನಾಥ್
ಜನನ : 07–08–1925
ನಿಧನ : 29–09–2011
ಮಾಜಿ ಅಧ್ಯಕ್ಷರು
ಬೆಂಗಳೂರು ಗಾಯನ ಸಮಾಜ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ
ಸ್ಟ್ಯಾಂಡರ್ಡ್ ಬುಕ್ ಕಂಪನಿ
ಸ್ಟ್ಯಾಂಡರ್ಡ್ ಪ್ರೆಸ್
ದುಃಖತಪ್ತ ಕುಟುಂಬವರ್ಗ

ಶ್ರದ್ಧಾಂಜಲಿ

ದಿ|| ಎಂ. ರಾಮಲಕ್ಷ್ಮಮ್ಮ
ಎಂ.ರಾಮಚಂದ್ರಪ್ಪನವರ ಧರ್ಮಪತ್ನಿ,
ಮಾಜಿ ಪುರಸಭೆ ಅಧ್ಯಕ್ಷರು, ಮಾಜಿ ಸಿ.ಎಂ.ಸಿ ಸದಸ್ಯರು
ಇವರು ದಿನಾಂಕ: 28.09.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, 29.09.2021ರ ಮಧ್ಯಾಹ್ನ 1.30ರ ವರೆಗೆ ಅಂತಿಮ ದರ್ಶನವನ್ನು ಅವರ ಸ್ವಗೃಹದಲ್ಲಿ ಏರ್ಪಡಿಸಲಾಗಿರುತ್ತದೆ. ಇವರ ಅಂತ್ಯಕ್ರಿಯೆಯನ್ನು ಶಿವನಹಳ್ಳಿಯ ತೋಟದಲ್ಲಿ 29.09.2021 ರಂದು ನೆರವೇರಿಸಲಾಗುವುದು. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
: ಇಂತಿ ದುಃಖತಪ್ತರು :
ಪತಿ ಎಂ.ರಾಮಚಂದ್ರಪ್ಪ, ಮೈದುನರು ಎಂ. ಚಿನ್ನರಾಜು & ಎಂ. ರಾಮಕೃಷ್ಣಪ್ಪ, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು, ಯಲಹಂಕ, ಬೆಂಗಳೂರು

ಚಿರಸ್ಮರಣೆ

ಎಂ.ಎಸ್. ಸಂದೀಪ್, ಎಂ.ಎಸ್.
ಜನನ : 06-12-1981
ಮರಣ : 29-09-2007
ಅನಂತದಲ್ಲಿ ನೀ ಲೀನವಾಗಿದ್ದರೂ
ಅಳಿಸಲಾಗದು, ಆರಿಸಲಾಗದು,
ಕದಡಿಸಲಾಗದು
ನಮ್ಮ ಭಾವ ಬಂಧಗಳ
ಮಧುರ ಸಂಗಮ
ಸದಾ ನಿನ್ನ ನೆನಪಿನಲ್ಲಿ
ಉಷಾ ಮತ್ತು ಎಂ.ಕೆ. ಶಂಕರಲಿಂಗೇಗೌಡ, ಐಎಎಸ್(ನಿ)
ಇ–ಮೇಲ್: mssundeeptrust@gmail.com

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ : ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು21: 9738421001, 9886683188

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

✓ ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

✓ TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗೆ ನೇರನೇಮಕಾತಿ 10th, PUC, ITI, Degree ಯುವಕಯುವತಿಯರಿಗೆ ವಸತಿಯೂಟದೊಂದಿಗೆ ಸಂಬಳ 16,000-18000/- .9901175319

✓ ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

✓ ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

ಶ್ರೀ ಶಕ್ತಿ ಹೆಲ್ತ್ ಕೇರ್ ಗೆ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ.ತಿಂಗಳಿಗೆ ವೇತನ 10,000-ರಿಂದ 12,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು. 90196 26612

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

✓ ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ.ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂರ್ಕಿಸಿರಿ:8904879948/ 8904879491

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Teachers/ Professors

ಮಾತ್ರ ಶ್ರವಣದೋಷವುಳ್ಳ ಮಕ್ಕಳ ಶಾಲೆಗೆ ಬೇಕಾಗಿದ್ದಾರೆ.ವಿಶೇಷ ಶಿಕ್ಷಕರು (ಶ್ರವಣದೋಷ) ವಿದ್ಯಾರ್ಹತೆ: ಎಂ.ಎಸ್ಸಿ.ಸ್ಪೆಷಲ್ ಬಿ.ಎಡ್. ಡಿಪ್ಲೋಮಾ (ಶ್ರವಣದೋಷ) ಮತ್ತು ಸಿ.ಬಿ.ಆರ್.ವರ್ಕರ್, ಮಹಿಳಾ ವಾರ್ಡನ್. ಮಾಹಿತಿಗೆ: 9686097335

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಮನೆಕೆಲಸ, ವಯಸ್ಸಾದವರನ್ನು, ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ಸಂಬಳ 15,000-22,000/- 9663196788, 6366324863

WANTED MALE & Female PUC/Graduates Freshers & Experience(M.Sc Chemistry or B.Sc Chemistry): 8660018006/ 9019696123

ಚಲನಚಿತ್ರ, ಧಾರಾವಾಹಿ, ಕಿರುಚಿತ್ರಗಾಗಿ ನಟ ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

Walk-in

ವಾಂಟೆಡ್ ಪುರುಷ ಸೇಲ್ಸ್ ಎಕ್ಸಿಕ್ಯೂಟಿವ್ ಕನ್ನಡ ಸ್ಪೀಕಿಂಗ್, ಟೂ ವೀಲರ್ ಮ್ಯಾಂಡೇಟರಿ walk-in. ಅಟ್ರ್ಯಾಕ್ಟಿವ್ ಇನ್ಸೆಂಟಿವ್ ಬಜಾಜ್ ಫೈನಾನ್ಸ್ ಪ್ರೆಸ್ಟೀಜ್ ಲಿಮಿಟೆಡ್, ಟವರ್ 8 ನೇ ಮಹಡಿ, ರೆಸಿಡೆನ್ಸಿ ರೋಡ್-560025 ಸಂಪರ್ಕಿಸಿ - 8147927081, 7899073558

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Peenya

ನಿವೇಶನ ಮಾರಾಟಕ್ಕೆ ಇದೆ. ಬೆಂಗಳೂರು ಲಗ್ಗೆರೆ ಚೌಡೇಶ್ವರಿ ನಗರ, ಪೋಲಿಸ್ ಚೌಕಿ ಸಮೀಪ 63 x 40 ಅಡಿಯ ವಾಣಿಜ್ಯಕ್ಕೆ ಆಗುವ ಕಾರ್ನರ್ ಸೈಟ್ ಮಾರಾಟಕ್ಕೆ ಇದೆ. ಮೊ: 7406226331.

ಶಿಕ್ಷಣ

Admission

ಆಯುರ್ವೇದ ತೇರಪಿಸ್ಟ್ ನ ಒಂದು ತಿಂಗಳ ಸರ್ಟಿಫಿಕೇಟ್ ಪ್ರೋಗ್ರಾಮ್ ಉತ್ತಮ ಉದ್ಯೋಗ ಅವಕಾಶ.10ನೇ ತರಗತಿ ಪಾಸ್ ಆದವರು ಸಂಪರ್ಕಿಸಿ: ಡಾಕ್ಟರ್ ಜಾಕ್ಸಿ:9620767774

ಭವಿಷ್ಯ

Astrology

★||ಶ್ರೀಶಿರಿಡಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀ_ಪುರುಷ_ವಶೀಕರಣ, ದಾಂಪತ್ಯ_ಕಿರಿಕಿರಿ, ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ_ಗುಪ್ತ ಸಮಸ್ಯೆಗಳಿಗೆ 11_ಗಂಟೆಗಳಲ್ಲಿ ಶಾಶ್ವತ_ಪರಿಹಾರ. ಪಂಡಿತ್.ವಿಕ್ರಮ್_ಭಟ್ 9972654095

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127 .

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಶ್ರೀ ರಾಜರಾಜೇಶ್ವರಿ ಟೂರ್, 9743895346/ 9739618243. 11-11-2021, 7ದಿನ ಪ್ರವಾಸ ವೈಷ್ಣೋದೇವಿ, ಶಿವಕೋರಿ, ಜಮ್ಮು ಡಾಲ್ ಹೌಸಿ, ಧರ್ಮಶಾಲ, ದೆಹಲಿ

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಕಾಂಗ್ರೆಸ್‌ಗೆ ಯುವನಾಯಕರ ಆಗಮನ; ಪುನಶ್ಚೇತನದ ಹುರುಪಿನಲ್ಲಿ ಪಕ್ಷ • ಬಿಜೆಪಿ–ಆರ್‌ಎಸ್‌ಎಸ್ ಸಿದ್ಧಾಂತ ವಿರುದ್ಧ ವಾಗ್ದಾಳಿ ನಡೆಸಬಲ್ಲವರ ತಂಡ ಕಟ್ಟುತ್ತಿರುವ ರಾಹುಲ್

ನಿರ್ವಾತ ತುಂಬಲಿದ್ದಾರೆಯೇ ಕನ್ಹಯ್ಯಾ, ಜಿಗ್ನೇಶ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ತಮ್ಮ ಸಹೋದ್ಯೋಗಿಗಳು ಬಿಜೆಪಿ ಅಥವಾ ಆರ್‌ಎಸ್‌ಎಸ್ ಸಿದ್ಧಾಂತವನ್ನು ಬಲವಾಗಿ ವಿರೋಧಿಸುತ್ತಿಲ್ಲ ಎಂಬ ಅಸಮಾಧಾನ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರದ್ದು. ಆದರೆ ಈಗ ಪಕ್ಷಕ್ಕೆ ಸೇರ್ಪಡೆಗೊಂಡಿರುವ ಕನ್ಹಯ್ಯಾ ಕುಮಾರ್ ಹಾಗೂ ಜಿಗ್ನೇಶ್ ಮೇವಾನಿ ಅವರು ಹಿಂದುತ್ವ ಬ್ರಿಗೇಡ್ ವಿರುದ್ಧ ಕಠಿಣ ನಿಲುವು ಹೊಂದಿದ್ದಾರೆ.

ಕನ್ಹಯ್ಯಾ ಕುಮಾರ್ ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಮುಖ್ಯಸ್ಥರಾಗಿದ್ದಾಗ ದೇಶದ್ರೋಹ ಪ್ರಕರಣದಲ್ಲಿ ಬಂಧನಕ್ಕೊಳಗಾದ ಬಳಿಕ ರಾಷ್ಟ್ರೀಯ ಮಟ್ಟದಲ್ಲಿ ಬೆಳಕಿಗೆ ಬಂದಿದ್ದರು. ಸಿಪಿಐ ತೊರೆದು ಈಗ ಕಾಂಗ್ರೆಸ್ ಸೇರಿದ್ದಾರೆ. ಹೋರಾಟದ ಹಿನ್ನೆಲೆಯಿಂದ ಗುರುತಿಸಿಕೊಂಡಿರುವ ಗುಜರಾತ್‌ನ ಪಕ್ಷೇತರ ಶಾಸಕ ಜಿಗ್ನೇಶ್ ಮೇವಾನಿ ಪ್ರಮುಖ ದಲಿತ ನಾಯಕರಾಗಿ ಹೊರಹೊಮ್ಮಿದ್ದಾರೆ. ಇವರು ಮುಂಬರುವ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಚಿಹ್ನೆಯಡಿ ಕಣಕ್ಕಿಳಿಯಲಿದ್ದಾರೆ.

ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ರಾಹುಲ್ ಜತೆಗೆ, ಹಾರ್ದಿಕ್, ಕನ್ಹಯ್ಯಾ ಮತ್ತು ಜಿಗ್ನೇಶ್ ಪಿಟಿಐ ಚಿತ್ರ

ಬಿಹಾರ ಹಾಗೂ ಗುಜರಾತಿನಲ್ಲಿ ರಾಜಕೀಯವಾಗಿ ಕಳೆಗುಂದುತ್ತಿರುವ ಪಕ್ಷಕ್ಕೆ ಇಬ್ಬರೂ ಯುವ ನಾಯಕರು ಪ್ರಖರ ದನಿಯಾಗಲಿದ್ದಾರೆ ಎಂಬ ವಿಶ್ವಾಸ ಕಾಂಗ್ರೆಸ್‌ನಲ್ಲಿದೆ. ಕನ್ಹಯ್ಯಾ ಅವರ ಕಾಂಗ್ರೆಸ್ ಸೇರ್ಪಡೆಗೆ ಪಕ್ಷದೊಳಗಿನ ಒಂದು ಗುಂಪಿನಿಂದ ಆಕ್ಷೇಪವಿದೆ. ಎಡಪಂಥೀಯ ಯುವ ನಾಯಕರನ್ನು ಪಕ್ಷಕ್ಕೆ ಕರೆತಂದಿರುವುದರ ಹಿಂದಿನ ತರ್ಕವನ್ನು ಹಲವರು ಪ್ರಶ್ನಿಸಿದ್ದಾರೆ.

'ಅಭಿವೃದ್ಧಿ ಬಗ್ಗೆ ಮಾತನಾಡುವ ನಾಯಕನ ಅಡಿಯಲ್ಲಿ ಯುವಕರಾದ ನಾವು ಕೆಲಸ ಮಾಡಲು ಬಯಸುತ್ತೇವೆ. ನಾವು ಈ ಹಿಂದೆ ದೇಶದ ಜನರಿಗಾಗಿ ಧ್ವನಿ ಎತ್ತಿದ್ದೇವೆ ಮತ್ತು ಅವರನ್ನು ಬಲಪಡಿಸಲು ಮತ್ತು ಅವರ ಧ್ವನಿಯಾಗಲು ಬಯಸುತ್ತೇವೆ' ಎಂದು ಗುಜರಾತ್ ಕಾಂಗ್ರೆಸ್ ಘಟಕದ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ಅವರು ಹೇಳಿದ್ದಾರೆ.

ಕನ್ಹಯ್ಯಾ, ಮೇವಾನಿ ಮತ್ತು ಅಲ್ಪೇಶ್ ಠಾಕೂರ್ ಜೊತೆಯಲ್ಲಿ ಹಾರ್ದಿಕ್ ಪಟೇಲ್ ಅವರು ಇತ್ತೀಚಿನ ವರ್ಷಗಳಲ್ಲಿ ಬಿಜೆಪಿ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದರು. ಹಾರ್ದಿಕ್ ಮತ್ತು ಠಾಕೂರ್ ಕಾಂಗ್ರೆಸ್ ಸೇರಿದರು. ಆದರೆ ನಂತರ ಸಂಘಟನಾತ್ಮಕ ಸಮಸ್ಯೆಗಳಿಂದ ಅಸಮಾಧಾನಗೊಂಡು ಠಾಕೂರ್ ಬಿಜೆಪಿಗೆ ಹೋದರು.

ಕಳೆದ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಮೇವಾನಿ ಹಾಗೂ ಕಾಂಗ್ರೆಸ್ ನಡುವೆ ಒಡನಾಟ ಏರ್ಪಡಿಸುವಲ್ಲಿ ಹಾರ್ದಿಕ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಲಾಗಿದೆ. ಕನ್ಹಯ್ಯಾ ಕೂಡ ಹಾರ್ದಿಕ್ ಜೊತೆ ಉತ್ತಮ ಸಮೀಕರಣವನ್ನು ಹೊಂದಿದ್ದು, ಕಾಂಗ್ರೆಸ್‌ಗೆ ಅವರು ಸೇರುವಲ್ಲಿ ರಾಹುಲ್ ಹೆಚ್ಚು ಕಾರಣಕರ್ತರು ಎನ್ನಲಾಗಿದೆ.

ಕನ್ಹಯ್ಯಾ, ಮೇವಾನಿಯಂತಹ ಯುವ ನಾಯಕರ ಸೇರ್ಪಡೆಯು ಪಕ್ಷವನ್ನು ಪುನಶ್ಚೇತನಗೊಳಿಸುತ್ತದೆ ಮತ್ತು ಇತ್ತೀಚಿನ ವರ್ಷಗಳಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ, ಜಿತಿನ್ ಪ್ರಸಾದ, ಸುಶ್ಮಿತಾ ದೇವ್ ಮತ್ತು ಪ್ರಿಯಾಂಕಾ ಚತುರ್ವೇದಿಯಂತಹ ಹಲವಾರು ಯುವ ನಾಯಕರ ನಿರ್ಗಮನದಿಂದ ಉಂಟಾದ ನಿರ್ವಾತವನ್ನು ತುಂಬಲಿದೆ ಎಂದು ನಂಬಲಾಗಿದೆ.

ಆದರೆ ಕನ್ಹಯ್ಯ ಕಾಂಗ್ರೆಸ್ ಸೇರ್ಪಡೆಗೂ ಮುನ್ನ ಅವರು ಸಿಪಿಐ ನಾಯಕತ್ವದ ಜೊತೆ ಹೊಂದಿದ್ದ ಭಿನ್ನಮತದಿಂದ ಸುದ್ದಿಯಲ್ಲಿದ್ದರು. ಕನ್ಹಯ್ಯ ಅವರು ಕಮ್ಯುನಿಸ್ಟ್ ಪಕ್ಷದಲ್ಲಿ ಉನ್ನತ ಸ್ಥಾನಕ್ಕೆ ಬೇಡಿಕೆಯಿಟ್ಟಿದ್ದರು ಎಂಬ ಆರೋಪವಿದೆ. ಆದರೆ ಅವರ ಆಪ್ತರು ಇದನ್ನು ಅಲ್ಲಗಳೆದಿದ್ದಾರೆ.

ಕಾಂಗ್ರೆಸ್ ಇಲ್ಲದೆ ದೇಶಕ್ಕೆ ಉಳಿವಿಲ್ಲ: ಕನ್ಹಯ್ಯಾ

ನವದೆಹಲಿ: 'ಬಿಜೆಪಿಯ ಸಿದ್ಧಾಂತಗಳು ಭಾರತದ ಮೌಲ್ಯಗಳು, ಸಂಸ್ಕೃತಿ, ಇತಿಹಾಸ ಮತ್ತು ಭವಿಷ್ಯವನ್ನು ಹಾಳುಮಾಡುತ್ತಿವೆ. ಕಾಂಗ್ರೆಸ್ 200 ಕ್ಷೇತ್ರಗಳಲ್ಲಿ ಬಿಜೆಪಿ ಜತೆಗೆ ನೇರ ಹಣಾಹಣಿ ನಡೆಸುತ್ತದೆ. ಕಾಂಗ್ರೆಸ್ ಉಳಿಯದಿದ್ದರೆ, ದೇಶ ಉಳಿಯುವುದಿಲ್ಲ. ಹೀಗಾಗಿ ನಾನು ಕಾಂಗ್ರೆಸ್ ಸೇರುತ್ತಿದ್ದೇನೆ' ಎಂದು ಕನ್ಹಯ್ಯಾ ಕುಮಾರ್ ಹೇಳಿದ್ದಾರೆ.

ಕಾಂಗ್ರೆಸ್ ಸೇರಿದ ನಂತರ ಇಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದ್ದಾರೆ. 'ಕಾಂಗ್ರೆಸ್ ದೊಡ್ಡ ಪಕ್ಷ. ದೊಡ್ಡ ಹಡಗನ್ನು ರಕ್ಷಿಸದೇ ಹೋದರೆ, ಸಣ್ಣ ದೋಣಿಗಳಿಗೆ ಉಳಿಗಾಲವಿಲ್ಲ. ಹೀಗಾಗಿ ಕಾಂಗ್ರೆಸ್ ಅನ್ನು ರಕ್ಷಿಸುವುದು ಅನಿವಾರ್ಯ' ಎಂದು ಅವರು ಹೇಳಿದ್ದಾರೆ. ಮಾಧ್ಯಮಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಗುಜರಾತ್ ಕಾಂಗ್ರೆಸ್ ಕಾರ್ಯಕಾರಿ ಅಧ್ಯಕ್ಷ ಹಾರ್ದಿಕ್ ಪಟೇಲ್ ಮತ್ತು ಜಿಗ್ನೇಶ್ ಅವರು ಕನ್ಹಯ್ಯಾ ಜತೆಗಿದ್ದರು. ಕಾಂಗ್ರೆಸ್ ಸೇರಿದ್ದನ್ನು ಕನ್ಹಯ್ಯಾ ಸಮರ್ಥಿಸಿಕೊಂಡಿದ್ದಾರೆ. 'ನಾನು ಜನರ ಆಕಾಂಕ್ಷೆಗಳು, ಮಹಾತ್ಮ ಗಾಂಧೀಜಿ ಅವರ ಏಕತ್ವ, ಭಗತ್ ಸಿಂಗ್ ಅವರ ಧೈರ್ಯ ಮತ್ತು ಬಿ.ಆರ್.ಅಂಬೇಡ್ಕರ್ ಅವರ ಸಮಾನತೆಯ ಪ್ರತಿಪಾದನೆಯನ್ನು ನಂಬುತ್ತೇನೆ. ಕಾಂಗ್ರೆಸ್ ಇವೆಲ್ಲವನ್ನೂ ರಕ್ಷಿಸುತ್ತದೆ. ಕಾಂಗ್ರೆಸ್ ಕೇವಲ ಒಂದು ಪಕ್ಷವಲ್ಲ. ಅದೊಂದು ಧ್ಯೇಯ. ಅದು ದೇಶದ ಅತ್ಯಂತ ಹಳೆಯ ಪ್ರಜಾಸತ್ತಾತ್ಮಕ ಪಕ್ಷ. ನಾನೂ ಪ್ರಜಾಪ್ರಭುತ್ವಕ್ಕೆ ಒತ್ತು ನೀಡುತ್ತೇನೆ. ಕಾಂಗ್ರೆಸ್‌ನ ಹೊರತಾಗಿ ದೇಶವನ್ನು ರಕ್ಷಿಸುವುದು ಸಾಧ್ಯವಿಲ್ಲ ಎಂದು ನಾನೊಬ್ಬ ಮಾತ್ರವಲ್ಲ, ಹಲವರು ನಂಬಿದ್ದಾರೆ' ಎಂದು ಕನ್ಹಯ್ಯಾ ಹೇಳಿದ್ದಾರೆ.

ಕಾಂಗ್ರೆಸ್ ಸೇರುವುದಕ್ಕೂ ಕೆಲವೇ ಗಂಟೆ ಮೊದಲು ಅವರು ಸಿಪಿಐಗೆ ರಾಜೀನಾಮೆ ನೀಡಿದ್ದಾರೆ. ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರಿಗೆ ಕನ್ಹಯ್ಯಾ ರಾಜೀನಾಮೆ ಪತ್ರವನ್ನು ಮೇಲ್ ಮಾಡಿದ್ದಾರೆ. 'ದೇಶದ ಇಂದಿನ ಸ್ಥಿತಿಯಲ್ಲಿ, ದೇಶಕ್ಕೆ ಪ್ರಬಲ ಮತ್ತು ಸಕ್ರಿಯವಾದ ಕಮ್ಯುನಿಸ್ಟ್ ಪಕ್ಷದ ಅವಶ್ಯಕತೆ ಇದೆ. ಪಕ್ಷವು ಈ ಅಗತ್ಯವನ್ನು ಪೂರೈಸುತ್ತದೆ ಎಂದು ನಾನು ನಂಬಿದ್ದೇನೆ' ಎಂದು ರಾಜೀನಾಮೆ ಪತ್ರದಲ್ಲಿ ವಿವರಿಸಿದ್ದಾರೆ.

> **ದೇಶದ ಪ್ರಜಾಪ್ರಭುತ್ವ ಮತ್ತು ಭಾರತತ್ವವನ್ನು ಉಳಿಸಲು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಮತ್ತು ಬ್ರಿಟಿಷರನ್ನು ಹೊರಗಟ್ಟಿದ ಪಕ್ಷದ ಜತೆಗಿರಬೇಕು**
> **ಜಿಗ್ನೇಶ್ ಮೇವಾನಿ,** ದಲಿತ ನಾಯಕ

> **ಕನ್ಹಯ್ಯಾ ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ವಿರುದ್ಧ ಹೋರಾಡುತ್ತಿದ್ದಾರೆ. ಅವರಿಂದ ಪಕ್ಷಕ್ಕೆ ಹೊಸ ಹುರುಪು ಬಂದಿದೆ**
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್‌ಗೆ ಕನ್ಹಯ್ಯಾ; ಸ್ಥಾನ ಬಿಟ್ಟ ನವಜೋತ್ ಸಿಧು

ಒಂದನೇ ಪುಟದಿಂದ

ಅಮರಿಂದರ್ ಸಿಂಗ್ ಅವರ ಬಲವಾದ ವಿರೋಧ ಇದ್ದರೂ ಸಿಧು ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಜುಲೈನಲ್ಲಿ ನೇಮಿಸಲಾಗಿತ್ತು. ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿಯವರ ಬೆಂಬಲದಿಂದಾಗಿ ಸಿಧುಗೆ ಹುದ್ದೆ ಸಿಕ್ಕಿತ್ತು. ಸಿಧು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ ರಾಹುಲ್ ಮತ್ತು ಪ್ರಿಯಾಂಕಾ ಅವರು 'ಅನನುಭವಿಗಳು' ಎಂದು ಅಮರಿಂದರ್ ಹೇಳಿದ್ದರು. ಸಿಧು ರಾಜೀನಾಮೆಗೆ ಅವರ ಪ್ರತಿಕ್ರಿಯೆ ಹೀಗಿದೆ: 'ನಾನು ನಿಮಗೆ ಹೇಳಿದ್ದೆ... ಪಂಜಾಬ್‌ನಂತಹ ಗಡಿ ರಾಜ್ಯಕ್ಕೆ ಸ್ಥಿರ ಬುದ್ಧಿ ಇಲ್ಲದ ವ್ಯಕ್ತಿ ಅರ್ಹ ಅಲ್ಲ'.

ಒಳಸ್ಫೋಟ ಮುಂದುವರಿದರೆ ಕಾಂಗ್ರೆಸ್ ಪಕ್ಷವು ನಿಜವಾದ ಬಿಕ್ಕಟ್ಟಿಗೆ ಒಳಗಾಗಲಿದೆ. ಪಕ್ಷ ವಿಭಜನೆಯ ಹಂತಕ್ಕೆ ಹೋದರೆ, ಆಡಳಿತ ಪಕ್ಷದ ಪರಿಸ್ಥಿತಿ ಇನ್ನಷ್ಟು ಸಂಕೀರ್ಣಗೊಳ್ಳಲಿದೆ.

ಹಿಂದುಳಿದ ತಾಲ್ಲೂಕು: 'ಸಮತೋಲನ'

ಒಂದನೇ ಪುಟದಿಂದ

ಈಗ ಕೇಂದ್ರ ಸರ್ಕಾರದಿಂದ ನೀತಿ ಆಯೋಗವು 117 ಮಹತ್ವಾಕಾಂಕ್ಷಿ ಜಿಲ್ಲೆಗಳ ಅಭಿವೃದ್ಧಿಗಾಗಿ ರೂಪಿಸಿದ 49 ಸೂಚಕಗಳಂತೆ ಪ್ರಾದೇಶಿಕ ಸಮತೋಲನ ಸಾಧಿಸಲು ಪ್ರಸ್ತಾಪಿಸಲಾಗಿದೆ. ನೀತಿ ಆಯೋಗ ನಿಗದಿಪಡಿಸಿದ 49 ಸೂಚಕಗಳನ್ನು ಐದು ವಲಯಗಳಲ್ಲಿ ಅಂದರೆ, ಆರೋಗ್ಯ ಮತ್ತು ಪೌಷ್ಟಿಕತೆ (ಶೇ 30, ಶಿಕ್ಷಣ (ಶೇ 30), ಕೃಷಿ ಮತ್ತು ಜಲ ಸಂಪನ್ಮೂಲ (ಶೇ 20). ಆರ್ಥಿಕ ಸೇರ್ಪಡೆ (ಶೇ 10), ಕೌಶಲಾಭಿವೃದ್ಧಿ (ಶೇ 5), ಮೂಲಸೌಕರ್ಯಕ್ಕೆ (ಶೇ 5) ಆದ್ಯತೆ ನೀಡಿ ನಿಗದಿಪಡಿಸಲಾಗಿದೆ.

ನಂಜುಂಡಪ್ಪ ವರದಿಯಡಿ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಮೂಲಸೌಕರ್ಯ ಮತ್ತು ಬೃಹತ್ ನೀರಾವರಿ ವಲಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಆದರೆ, ಹೊಸ ಯೋಜನೆಯಲ್ಲಿ ನೀತಿ ಆಯೋಗದ ಮಾನದಂಡಗಳ ಅನುಸಾರ ಮಾನವ ಸಂಪನ್ಮೂಲಗಳ ಅಭಿವೃದ್ಧಿ , ಕೃಷಿ ಮತ್ತು ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನಂಜುಂಡಪ್ಪ ವರದಿಯಲ್ಲಿ ಅಭಿವೃದ್ಧಿಯ 35 ಸೂಚಕಗಳ ಪೈಕಿ, ಕೇವಲ 19 ಸೂಚಕಗಳು ಮಾತ್ರ ನೀತಿ ಆಯೋಗದಲ್ಲಿದೆ.

ಪ್ರಶಸ್ತಿ: ಹಿಂದುಳಿದ ತಾಲ್ಲೂಕುಗಳ ₹ 3 ಸಾವಿರ ಕೋಟಿ ಅನುದಾನವನ್ನು ಹಂಚಿಕೆ ಮಾಡಿ, ಮುಂದಿನ 5 ವರ್ಷಗಳಲ್ಲಿ ಮಹತ್ವಾಕಾಂಕ್ಷಿ ತಾಲ್ಲೂಕುಗಳ ಅಭಿವೃದ್ಧಿ ಸೂಚಕಗಳನ್ನು ಸುಧಾರಿಸಿ, ರಾಜ್ಯದ ಸರಾಸರಿ ಮಟ್ಟಕ್ಕೆ ತರಲು ಉದ್ದೇಶಿಸಲಾಗಿದೆ. ಅಲ್ಲದೆ, ನೀತಿ ಆಯೋಗದ ಮಾದರಿಯಲ್ಲಿ ತಾಲ್ಲೂಕುಗಳ ಪ್ರತಿ ತ್ರೈಮಾಸಿಕ ಪ್ರಗತಿ ಪರಿಶೀಲಿಸಿ, ಸಾಧನೆಯಲ್ಲಿ ಸುಧಾರಣೆಗೊಂಡು ಪ್ರಥಮ ಶ್ರೇಣಿ ಗಳಿಸುವ ಮೂರು ತಾಲ್ಲೂಕುಗಳಿಗೆ ಪ್ರಶಸ್ತಿ ಪತ್ರ ನೀಡಿ ಉತ್ತೇಜಿಸಲು ಕೂಡಾ ಸರ್ಕಾರ ನಿರ್ಧರಿಸಿದೆ.

ಸಿಧು ಪದತ್ಯಾಗಕ್ಕೆ ಅಸಮಾಧಾನ ಕಾರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನ ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡಿದ್ದು ಹಾಗೂ ಸರ್ಕಾರದಲ್ಲಿ ಇತ್ತೀಚೆಗೆ ಮಾಡಲಾದ ಕೆಲವು ನೇಮಕಾತಿಗಳಿಂದ ಅಸಮಾಧಾನಗೊಂಡ ನವಜೋತ್ ಸಿಂಗ್ ಸಿಧು ಅವರು ರಾಜೀನಾಮೆಯಂತಹ ಕಠಿಣ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

ದಲಿತ ಸಮುದಾಯದ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಮುಖ್ಯಮಂತ್ರಿ ಮಾಡಿದ ದಿನವೇ ಸಿಧು ಅವರ ರಾಜಕೀಯ ಹಾದಿ ಅಂತ್ಯಗೊಂಡಿತ್ತು ಎಂದು ಕೆಲವು ಮುಖಂಡರು ಹೇಳುತ್ತಾರೆ. ಚುನಾವಣೆ ಬಳಿಕ ಸಿಧು ಅವರಿಗೆ ಅಧಿಕಾರ ಸಿಗುತ್ತದೆ ಎಂಬ ಖಾತ್ರಿ ಇಲ್ಲ ಎನ್ನುವ ನೋವು ಅವರಲ್ಲಿತ್ತು ಎನ್ನಲಾಗಿದೆ.

ಕೆಲವು ದಿನಗಳಿಂದ ಮುಖ್ಯಮಂತ್ರಿ ಚನ್ನಿ ಅವರ ಕಾರ್ಯ ಶೈಲಿ ದೃಢವಾಗಿದೆ. ತಾವು ತಾತ್ಕಾಲಿಕ ಮುಖ್ಯಮಂತ್ರಿ ಅಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸುತ್ತಿದ್ದಾರೆ. ತಾವು ರಬ್ಬರ್ ಸ್ಟಾಂಪ್ ಅಲ್ಲ ಅಥವಾ ಸಿಧು ನೆರಳಿನಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ತೋರಿಸಹೊರಟಂತೆ ಅವರ ವರ್ತನೆ ಕಂಡುಬರುತ್ತಿದೆ.

ಉಪಮುಖ್ಯಮಂತ್ರಿ ಸುಖ್‌ಜಿಂದರ್ ರಂಧಾವ ಅವರಿಗೆ ಗೃಹಖಾತೆ ನೀಡಿದ್ದು ಸಿಧು ಅವರಿಗೆ ಸಿಟ್ಟು ತರಿಸಿರುವ ಅಂಶ ಎಂದು ಪರಿಗಣಿಸಲಾಗಿದೆ. ರಂಧಾವ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಪ್ರಸ್ತಾಪಿಸಿದ್ದಾಗ ಸಿಧು ತೀವ್ರವಾಗಿ ವಿರೋಧಿಸಿದ್ದರು. ರಂಧಾವ ಮತ್ತು ಸಿಧು ಇಬ್ಬರು ಜಾಟ್ ಸಿಖ್ ಸಮುದಾಯಕ್ಕೆ ಸೇರಿದವರು.

ತಮ್ಮ ಆಕ್ಷೇಪಣೆಯ ಹೊರತಾಗಿಯೂ ರಾಣಾ ಗುರ್ಜಿತ್ ಸಿಂಗ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದಾರೆ ಎಂಬುದು ಸಿಧು ಅವರಲ್ಲಿ ಆಕ್ರೋಶ ತರಿಸಿದೆ.

'ನವಜೋತ್ ಸಿಂಗ್ ಸಿಧು ಅವರು ದಲಿತರ ವಿರೋಧಿ ಎಂಬುದನ್ನು ಇದು ತೋರಿಸುತ್ತಿದೆ. ಬಡತನದ ಹಿನ್ನೆಲೆಯಿಂದ ಬಂದ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಿದ್ದನ್ನು ಸಿಧು ಸಹಿಸುತ್ತಿಲ್ಲ. ಇದು ದುಃಖಕರ' ಎಂದು ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಪ್ರತಿಕ್ರಿಯಿಸಿದ್ದಾರೆ.

ಕೇವಲ ಅರಾಜಕತೆ ತುಂಬಿರುವ ಪಂಜಾಬ್ ಕಾಂಗ್ರೆಸ್‌ನಿಂದ ರಾಜ್ಯದ ಜನರು ಸುಭದ್ರ, ಅಭಿವೃದ್ಧಿಪರ ಆಡಳಿತ ನಿರೀಕ್ಷಿಸಲು ಸಾಧ್ಯವೇ ಎಂದು ಎಎಪಿ ಮುಖಂಡ ರಾಘವ್ ಚಡ್ಡಾ ಟ್ವೀಟ್ ಮಾಡಿದ್ದಾರೆ..

'ಪಂಜಾಬ್‌ಗೆ ಟಿಕೆಟ್ ಬುಕ್ ಮಾಡಿಸೋಣವೇ'

ಲಖನೌ (ಪಿಟಿಐ): ಉತ್ತರ ಪ್ರದೇಶಕ್ಕೆ ಭೇಟಿ ನೀಡುತ್ತಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಕಾಲೆಳೆದಿರುವ ಅಲ್ಲಿನ ಬಿಜೆಪಿ ಮುಖಂಡರು, 'ನೀವು ಪಂಜಾಬ್‌ಗೆ ಭೇಟಿ ನೀಡಬೇಕಿತ್ತಲ್ಲವೇ? ಅಲ್ಲಿಗೆ ಟಿಕೆಟ್ ಬುಕ್ ಮಾಡಿಸೋಣವೇ?' ಎಂದು ಕುಟುಕಿದ್ದಾರೆ.

ಪಂಜಾಬ್ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಬಿಕ್ಕಟ್ಟಿನಲ್ಲಿ ಹಿನ್ನೆಲೆಯಲ್ಲಿ, ಉತ್ತರ ಪ್ರದೇಶ ಬಿಜೆಪಿ ಘಟಕ ಟ್ವೀಟ್ ಮಾಡಿದ್ದು, 'ಪ್ರಿಯಾಂಕಾ ವಾದ್ರಾ ಜೀ, ನೀವು ಉತ್ತರಪ್ರದೇಶಕ್ಕೆ ಬರಬೇಕಾದ ಹೊತ್ತು ಇದಲ್ಲ. ನೀವು ತಪ್ಪು ಸಮಯದಲ್ಲಿ ಬಂದಿದ್ದೀರಿ. ನೀವೀಗ ಪಂಜಾಬ್‌ನಲ್ಲಿ ಇರಬೇಕಿತ್ತು' ಎಂದು ವ್ಯಂಗ್ಯವಾಡಿದೆ. ಮುಂದಿನ ವರ್ಷ ನಡೆಯಲಿರುವ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಾಗಿ, ಪಕ್ಷದ ಸಿದ್ಧತೆ ಬಗ್ಗೆ ಚರ್ಚಿಸಲು, ಪ್ರಿಯಾಂಕಾ ಗಾಂಧಿ ಸೋಮವಾರ ಲಖನೌಗೆ ಬಂದಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು facebook Live ಇಂದು ಬೆಳಿಗ್ಗೆ 11 ಕ್ಕೆ

ಯುವಜನರಲ್ಲಿ ಹೆಚ್ಚುತ್ತಿರುವ ಹೃದಯಾಘಾತ
ಪಾಲ್ಗೊಳ್ಳುವವರು: ಡಾ. ಸುರೇಶ ಸಗರದ, ರಾಯಚೂರಿನ ಹಿರಿಯ ಹೃದ್ರೋಗ ತಜ್ಞ

ಗ್ರೀನ್ ಟಾಕ್
ಪಾಲಿ ಹೌಸ್- ನೀರ ಭಂಡಾರ



https://bit.ly/2XSNxWv

ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 **ಝಣ ಝಣ ಕಾಂಚಾಣ,** ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಜೆಡಿಎಸ್: ಮಿಷನ್ 123- ಕಾರ್ಯಸಾಧುವೇ?
ಭಾಗವಹಿಸುವವರು:
ಬಿ.ಎಲ್.ಶಂಕರ್, ಅಧ್ಯಕ್ಷ, ಕೆಪಿಸಿಸಿ, ಮಾಧ್ಯಮ ವಿಭಾಗ.
ವೈ.ಎಸ್.ವಿ.ದತ್ತಾ, ಜೆಡಿಎಸ್ ಮುಖಂಡ.
ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ, ಬಿಜೆಪಿ.
ಪ್ರೀತಿ ನಾಗರಾಜ್, ಹಿರಿಯ ಪತ್ರಕರ್ತೆ

ಸಂವಾದ ಮಧ್ಯಾಹ್ನ 1 ರಿಂದ 2

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಹೆಚ್ಚಳ ಪರಿಣಾಮ

ಪೆಟ್ರೋಲ್, ಡೀಸೆಲ್ ಬೆಲೆ ಶೇ10ರಷ್ಟು ಏರಿಕೆ?

• ಅನ್ನಪೂರ್ಣಾ ಸಿಂಗ್

ನವದೆಹಲಿ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಆಗಿರುವ ಪರಿಣಾಮವಾಗಿ ಮುಂಬರುವ ದಿನಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ತೀವ್ರ ಏರಿಕೆ ಆಗುವ ಸಾಧ್ಯತೆ ಇದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಶೇಕಡ 8ರಿಂದ ಶೇ 10ರಷ್ಟು ಹೆಚ್ಚಳ ಆಗಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.

'ತೈಲ ಬೇಡಿಕೆಯು ಹೆಚ್ಚಾಗುತ್ತಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 85–86 ಡಾಲರ್‌ಗೆ ತಲುಪಬಹುದು. ವರ್ಷಾಂತ್ಯದ ವೇಳೆಗೆ ಬೆಲೆಯು ಬ್ಯಾರೆಲ್‌ಗೆ 90 ಡಾಲರ್ ಆಗಬಹುದು ಎಂದು ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆಯು ಅಂದಾಜು ಮಾಡಿದೆ.

ಇದರ ಜೊತೆಯಲ್ಲಿ, ಅಮೆರಿಕದ ಡಾಲರ್ ಎದುರು ರೂಪಾಯಿ ಇನ್ನಷ್ಟು ದುರ್ಬಲಗೊಂಡರೆ ನಾವು ಪೆಟ್ರೋಲ್ ಮತ್ತು ಡೀಸೆಲ್‌ಗೆ ನೀಡಬೇಕಾದ ಬೆಲೆಯಲ್ಲಿ ಶೇ 8 ಅಥವಾ ಶೇ 10ರಷ್ಟು ಏರಿಕೆ ಆಗಬಹುದು' ಎಂದು ಕೇಡಿಯಾ ಕಮಾಡಿಟಿಸ್ ಸಂಸ್ಥೆಯ ನಿರ್ದೇಶಕ ಅಜಯ್ ಕುಮಾರ್ 'ಪ್ರಜಾವಾಣಿ'ಗೆ ವಿವರಿಸಿದರು.

ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದಿದ್ದ ನಿರ್ಬಂಧಗಳನ್ನು ಸಡಿಲಿಸಲಾಗುತ್ತಿದೆ. ಇದರಿಂದಾಗಿ ತೈಲದ ಬೇಡಿಕೆ ಹೆಚ್ಚಾಗಿದೆ. ಜಾಗತಿಕ ಮಟ್ಟದಲ್ಲಿ ತೈಲದ ಬೇಡಿಕೆಯು ಪೂರೈಕೆ ಪ್ರಮಾಣಕ್ಕಿಂತ ಹೆಚ್ಚಾಗಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ ಹಾಗೂ ಒಪೆಕ್ ಅಂದಾಜಿಸಿವೆ. ಇದರಿಂದಾಗಿ ಸದ್ಯದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಯು ಇಳಿಕೆ ಆಗದು.

ಆದರೆ, ಹಲವು ಕಾರಣಗಳಿಂದಾಗಿ ಕಚ್ಚಾ ತೈಲ ಉತ್ಪಾದನೆಗೆ ಪೆಟ್ಟು ಬಿದ್ದಿದೆ. ಕಚ್ಚಾ ತೈಲದ ಬೆಲೆ ಹೆಚ್ಚಳವಾದರೆ ಭಾರತದಲ್ಲಿ ಚಿಲ್ಲರೆ ಹಣದುಬ್ಬರ ದರವು ಏರಿಕೆ ಆಗುತ್ತದೆ. ಈಗ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ರ ಸಮೀಪ ಇದೆ. ತೈಲ ಬೆಲೆ ಇನ್ನಷ್ಟು ಹೆಚ್ಚಳವಾದರೆ ಕೌಟುಂಬಿಕ ವೆಚ್ಚಗಳ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆದರೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸುವ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೆಟ್ರೋಲ್ 20 ಪೈಸೆ, ಡೀಸೆಲ್ 25 ಪೈಸೆ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಂಗಳವಾರ ಪೆಟ್ರೋಲ್ ದರವನ್ನು ಲೀಟರಿಗೆ 20 ಪೈಸೆಯಷ್ಟು, ಡೀಸೆಲ್ ದರವನ್ನು ಲೀಟರಿಗೆ 25 ಪೈಸೆಯಷ್ಟು ಹೆಚ್ಚಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಮೂರು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಬ್ಯಾರಲ್‌ಗೆ 80 ಡಾಲರ್‌ಗಳ ಸಮೀಪ ಬಂದಿರುವುದರಿಂದ ಇಂಧನ ದರದಲ್ಲಿ ಹೆಚ್ಚಳ ಆಗಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಮಂಗಳವಾರ ಪೆಟ್ರೋಲ್ ದರ ₹ 104.9 ಮತ್ತು ಡೀಸೆಲ್ ದರ ₹ 95.03ಕ್ಕೆ ತಲುಪಿದೆ.

ಎರಡು ತಿಂಗಳ ಬಳಿಕ ಇದೇ ಮೊದಲ ಬಾರಿಗೆ ಪೆಟ್ರೋಲ್ ದರ ಹೆಚ್ಚಿಸಲಾಗಿದೆ. ಡೀಸೆಲ್ ದರ ನಾಲ್ಕನೇ ಬಾರಿ ಹೆಚ್ಚಾಗಿದೆ. ಸೆಪ್ಟೆಂಬರ್ 24ರ ನಂತರದಲ್ಲಿ ಡೀಸೆಲ್ ದರ ಲೀಟರಿಗೆ 95 ಪೈಸೆ ಹೆಚ್ಚಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಮೂರು ವರ್ಷಗಳ ಗರಿಷ್ಠ ಮಟ್ಟದ ಸಮೀಪಕ್ಕೆ ಬಂದಿದ್ದು, ಜಾಗತಿಕ ಉತ್ಪಾದನೆಯಲ್ಲಿ ಅಡಚಣೆ ಆಗಿರುವುದರಿಂದ ಕಂಪನಿಗಳನ್ನು ತಮ್ಮ ಸಂಗ್ರಹದಿಂದ ಹೆಚ್ಚು ಕಚ್ಚಾ ತೈಲವನ್ನು ಹೊರತೆಗೆಯುತ್ತಿವೆ. ಅಮೆರಿಕದ ಕಚ್ಚಾ ತೈಲ ಸಂಗ್ರಹದ ಮಟ್ಟವು ಮೂರು ವರ್ಷಗಳ ಕನಿಷ್ಠ ಮಟ್ಟಕ್ಕೆ ಬರುತ್ತಿದೆ.

ಭವಾನಿಪುರ: ಉಪಚುನಾವಣೆ ತಡೆಗೆ ಹೈಕೋರ್ಟ್ ನಕಾರ

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದ ಪ್ರಕಾರ ಭವಾನಿಪುರ ವಿಧಾನಸಭಾ ಕ್ಷೇತ್ರಕ್ಕೆ ಗುರುವಾರವೇ ಉಪಚುನಾವಣೆ ನಡೆಯಲಿದೆ.

ನಿಗದಿಯಾದ ದಿನದಂದೇ ಚುನಾವಣೆ ನಡೆಸುವಂತೆ ಕಲ್ಕತ್ತ ಹೈಕೋರ್ಟ್ ಸೂಚಿಸಿದ್ದು, ಈ ಹಂತದಲ್ಲಿ ಚುನಾವಣಾ ಆಯೋಗದ ನಿರ್ಧಾರದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಹೇಳಿದೆ.

ರಾಜ್ಯದಲ್ಲಿ ಎದುರಾಗಬಹುದಾದ ಸಾಂವಿಧಾನಿಕ ಬಿಕ್ಕಟ್ಟುಗಳನ್ನು ತಪ್ಪಿಸುವುದಕ್ಕಾಗಿ ಭವಾನಿಪುರದಲ್ಲಿ ತುರ್ತಾಗಿ ಚುನಾವಣೆ ನಡೆಸಬೇಕು ಎಂದು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದ ರಾಜ್ಯದ ಮುಖ್ಯ ಕಾರ್ಯದರ್ಶಿ ಎಚ್. ಕೆ. ದ್ವಿವೇದಿ ಅವರನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತು.

ತಾವು ಸರ್ಕಾರಿ ಅಧಿಕಾರಿ ಎಂಬುದನ್ನು ಮರೆತು ರಾಜಕೀಯ ಪಕ್ಷವೊಂದರ ಸೇವಕನಂತೆ ತಮ್ಮನ್ನು ಬಿಂಬಿಸಿಕೊಂಡಿದ್ದಾರೆ. ಅಲ್ಲದೇ ಚುನಾವಣಾ ಆಯೋಗವನ್ನೂ ದಾರಿ ತಪ್ಪಿಸಲು ನೋಡಿದ್ದಾರೆ ಎಂದು ಹರಿಹಾಯ್ದಿತು.

ಮುಖ್ಯ ಕಾರ್ಯದರ್ಶಿ ಶಿಫಾರಸಿನಂತೆ ಚುನಾವಣೆಯನ್ನು ನಡೆಸಲು ಮುಂದಾಗಿದ್ದ ಚುನಾವಣಾ ಆಯೋಗದ ನಿರ್ಧಾರವನ್ನು ರದ್ದುಮಾಡಬೇಕು ಎಂದು ಆಗ್ರಹಿಸಿ, ಫಯಾನ್ ಸಿನ್ಹಾ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್, ರಾಜರ್ಷಿ ಭಾರದ್ವಾಜ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠ, ರಾಜ್ಯದಲ್ಲಿ ಕೋವಿಡ್, ಪ್ರವಾಹ ಪರಿಸ್ಥಿತಿ ನಿಯಂತ್ರಣದಲ್ಲಿರುವುದಾಗಿ ಮುಖ್ಯಕಾರ್ಯದರ್ಶಿಯು ನೀಡಿದ ಮಾಹಿತಿ ಸತ್ಯಕ್ಕೆ ದೂರವಾಗಿದೆ. ಯಾವುದೇ ಪಕ್ಷವು ಅಧಿಕಾರದಲ್ಲಿರಲಿ, ಅವರು ಒಬ್ಬ ಸರ್ಕಾರಿ ಅಧಿಕಾರಿಯಾಗಿ ಮಾತ್ರ ಕಾರ್ಯನಿರ್ವಹಿಸಬೇಕು ಎಂದು ಹೇಳಿತು.

ಕೋವಿಡ್ ಸಾವು: ಎಲ್ಲ ಪ್ರಕರಣಗಳಲ್ಲೂ ಪರಿಹಾರ

ಒಂದನೇ ಪುಟದಿಂದ

ಬಿಪಿಎಲ್ ಕುಟುಂಬಗಳಲ್ಲಿ ಕೋವಿಡ್ ಸೋಂಕಿನಿಂದ ಮೃತರಾದವರ ಪೈಕಿ ಪ್ರತಿ ಕುಟುಂಬಕ್ಕೆ ತಲಾ ಒಂದು ಪ್ರಕರಣದಲ್ಲಿ ₹ 1 ಲಕ್ಷ ಪರಿಹಾರವನ್ನು 'ಸಂಧ್ಯಾ ಸುರಕ್ಷಾ ಯೋಜನೆ' ಅಡಿಯಲ್ಲಿ ವಿತರಿಸಲು ರಾಜ್ಯ ಸರ್ಕಾರ ಸೆಪ್ಟೆಂಬರ್ 23ರಂದು ಆದೇಶ ಹೊರಡಿಸಿತ್ತು. ಆದರೆ, ಕೋವಿಡ್‌ನಿಂದ ಸಂಭವಿಸಿದ ಸಾವಿನ ಎಲ್ಲ ಪ್ರಕರಣಗಳಲ್ಲೂ ಪರಿಹಾರ ವಿತರಿಸುವುದಾಗಿ ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರದ ಅನುಸಾರ ಮಂಗಳವಾರ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

ಬಿಪಿಎಲ್ ಕುಟುಂಬಗಳಲ್ಲಿ ಕೋವಿಡ್‌ನಿಂದ ಸಂಭವಿಸಿರುವ ಸಾವುಗಳಲ್ಲಿ ತಲಾ ಒಂದು ಪ್ರಕರಣದಲ್ಲಿ ₹ 1 ಲಕ್ಷ ಪರಿಹಾರ ವಿತರಿಸುವ ಸೆ.23ರ ಕಂದಾಯ ಇಲಾಖೆಯ ಆದೇಶವನ್ನು ಮಂಗಳವಾರ ಸಂಜೆ ಹಿಂಪಡೆಯಲಾಗಿತ್ತು. ಬಳಿಕ ಪರಿಷ್ಕೃತ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಪರಿಹಾರ ವಿತರಣೆಯ ಪ್ರಕ್ರಿಯೆ ಕುರಿತು ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಇಂಜಮಾಮ್‌ಗೆ ಆ್ಯಂಜಿಯೊಪ್ಲಾಸ್ಟಿ

ಇಂಜಮಾಮ್ ಉಲ್ ಹಕ್

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಇಂಜಮಾಮ್ ಉಲ್ ಹಕ್ ಅವರಿಗೆ ಲಘು ಹೃದಯಾಘಾತಕ್ಕೊಳಗಾದರು. 51 ವರ್ಷದ ಇಂಜಮಾಮ್ ಅವರಿಗೆ ಆ್ಯಂಜಿಯೊಪ್ಲಾಸ್ಟಿ ಮಾಡಲಾಗಿದ್ದು, ಆರೋಗ್ಯ ಸ್ಥಿರವಾಗಿದೆ.

'ಉಸಿರಾಟದಲ್ಲಿ ತೊಂದರೆಯಾಗುತ್ತಿದೆ ಮತ್ತು ಎದೆನೋವು ಇದೆ ಎಂದು ಸೋಮವಾರ ಇಂಜಮಾಮ್ ಹೇಳಿದರು. ಕೂಡಲೇ ಖಾಸಗಿ ಆಸ್ಪತ್ರೆಗೆ ಸೇರಿಸಲಾಯಿತು' ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. 120 ಟೆಸ್ಟ್, 370 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಒಲಿಂಪಿಯನ್‌ರಿಂದ ಜಾಗೃತಿ

ನವದೆಹಲಿ(ಪಿಟಿಐ): ಮುಂಬರಲಿರುವ ಹಬ್ಬಗಳ ಋತುವಿನಲ್ಲಿ ಜನರು ಮೈಮರೆಯಬಾರದು. ಕೋವಿಡ್ –19 ಹರಡದಂತೆ ಎಚ್ಚರಿಕೆ ವಹಿಸಬೇಕೆಂದು ಟೋಕಿಯೊ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಪದಕವಿಜೇತರು ಜಾಗೃತಿ ಅಭಿಯಾನ ನಡೆಸುತ್ತಿದ್ದಾರೆ.

ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ, ಪ್ಯಾರಾಲಿಂಪಿಕ್ಸ್ ಶೂಟರ್ ಅವನಿ ಲೇಖರ ಸೇರಿದಂತೆ ಬಹುತೇಕ ಎಲ್ಲ ಪದಕವಿಜೇತರು ಪಾಲ್ಗೊಂಡಿದ್ದಾರೆ. ಅವರೆಲ್ಲರೂ ನೀಡಿರುವ ಸಂದೇಶದ ತೆವಹಾರೋಂಕಾರಂಗ್ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಲಾಗುವುದು ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ನೀರಜ್ ಚೋಪ್ರಾ

ವಿದೇಶಿ ಕೋಚ್: ನವೆಂಬರ್‌ನಲ್ಲಿ ನಿರ್ಧಾರ

ಭಾರತ ಕುಸ್ತಿ ತಂಡಕ್ಕೆ ತರಬೇತಿ ನೀಡುತ್ತಿರುವ ವಿದೇಶಿ ಕೋಚ್‌ಗಳನ್ನು ಮುಂದುವರಿಸುವ ಕುರಿತು ನವೆಂಬರ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ನಂತರ ನಿರ್ಧರಿಸಲಾಗುವುದು ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ತಿಳಿಸಿದೆ.

ಅಕ್ಟೋಬರ್ 2 ರಿಂದ ನಾರ್ವೆಯಲ್ಲಿ ವಿಶ್ವ ಚಾಂಪಿಯನ್‌ಷಿಪ್ ಶುರುವಾಗಲಿದೆ. ನವೆಂಬರ್ 19 ರಿಂದ 21ರವರೆಗೆ ಉತ್ತರಪ್ರದೇಶದ ಗೊಂಡಾದಲ್ಲಿ ರಾಷ್ಟ್ರೀಯ ಕುಸ್ತಿ ನಡೆಯಲಿದೆ.

ಮಹಿಳಾ ಹಾಕಿ ತಂಡಕ್ಕೆ ಪುರಸ್ಕಾರ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಮೋಘ ಸಾಧನೆ ಮಾಡಿದ ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿಯರನ್ನು ಮಂಗಳವಾರ ಮಧ್ಯಪ್ರದೇಶ ಸರ್ಕಾರವು ಸನ್ಮಾನಿಸಿತು. ಈ ಸಂದರ್ಭದಲ್ಲಿ ಆಟಗಾರ್ತಿಯರಿಗೆ ತಲಾ ₹ 31 ಲಕ್ಷ ನಗದು ಪುರಸ್ಕಾರವನ್ನು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಪ್ರದಾನ ಮಾಡಿದರು. 'ಮಧ್ಯಪ್ರದೇಶದಲ್ಲಿ ಹಾಕಿ ಕ್ರೀಡೆಗಾಗಿ ವಿಶ್ವದರ್ಜೆಯ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು. ಕ್ರೀಡೆಯ ಉತ್ತೇಜನಕ್ಕೆ ಸಕಲ ಸೌಲಭ್ಯ ನೀಡಲಾಗುವುದು' ಎಂದು ಚೌಹಾಣ್ ಹೇಳಿದರು.

ಸೆಮಿಗೆ ಅನರ್ಘ್ಯಾ

ಬೆಂಗಳೂರು: ಕರ್ನಾಟಕದ ಅನರ್ಘ್ಯಾ ಮಂಜುನಾಥ್ ಅವರು ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. 17 ವರ್ಷದೊಳಗಿನ ಬಾಲಕಿಯರ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು 3–1, 11–4, 11–1, 7–11, 11–5ರಿಂದ ರಾಜ್ಯದವರೇ ಆದ ಕರುಣಾ ಗಜೇಂದ್ರನ್ ಅವರನ್ನು ಸೋಲಿಸಿದರು.

ಒಲಿಂಪಿಕ್ಸ್ ಸಾಧಕರಿಗೆ ಉದ್ಯೋಗದಲ್ಲಿ ಬಡ್ತಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿದ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್, ಗೋಲ್ ಕೀಪರ್ ಸವಿತಾ ಪುನಿಯಾ ಮತ್ತು ಪ್ಯಾರಾಲಿಂಪಿಕ್ ಪದಕ ವಿಜೇತರಾದ ಮಾರಿಯಪ್ಪನ್ ತಂಗವೇಲು ಮತ್ತು ಶರದ್ ಕುಮಾರ್ ಅವರಿಗೆ ಮಂಗಳವಾರ ಭಾರತೀಯ ಕ್ರೀಡಾ ಪ್ರಾಧಿಕಾರವು (ಸಾಯ್) ಉದ್ಯೋಗದಲ್ಲಿ ಬಡ್ತಿ ನೀಡಿದೆ.

ಟೋಕಿಯೊದಲ್ಲಿ ಕಂಚು ಗೆದ್ದ ಪುರುಷರ ಹಾಕಿ ತಂಡದ ಸಹಾಯಕ ಸಿಬ್ಬಂದಿಯಾಗಿದ್ದ ತರಬೇತುದಾರ ಪಿಯೂಷ್ ದುಬೆ ಅವರಿಗೂ ಬಡ್ತಿ ನೀಡಲು ಉದ್ದೇಶಿಸಲಾಗಿದೆ. ಸಾಯ್‌ನ ಆಡಳಿತ ಮಂಡಳಿಯ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಅರ್ಜುನ ಪ್ರಶಸ್ತಿ ಪುರಸ್ಕೃತ ಬಾಕ್ಸರ್ ದಿವಂಗತ ಡಿಂಕೊ ಸಿಂಗ್ ಅವರ ಕುಟುಂಬಕ್ಕೆ ₹ 6.87 ಲಕ್ಷ ಅನುದಾನ ನೀಡಲು ಸಾಯ್ ನಿರ್ಧರಿಸಿದೆ. 42 ವರ್ಷದ ಡಿಂಕೊ, ಜೂನ್‌ನಲ್ಲಿ ಲಿವರ್ ಕ್ಯಾನ್ಸರ್‌ನಿಂದ ನಿಧನರಾಗಿದ್ದರು.

ಸವಿತಾ ಅವರು ಸಹಾಯಕ ತರಬೇತುದಾರರಿಂದ ತರಬೇತುದಾರರಾಗಿ ಬಡ್ತಿ ಪಡೆದರೆ, ರಾಣಿ ಮತ್ತು ದುಬೆ ಅವರನ್ನು ಸೀನಿಯರ್ ಕೋಚ್‌ಗಳನ್ನಾಗಿ ಬಡ್ತಿ ನೀಡಲಾಗಿದೆ. ರಾಣಿ ಮತ್ತು ಸವಿತಾ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ಭಾರತ ತಂಡದಲ್ಲಿದ್ದರು.

ರಾಣಿ ರಾಂಪಾಲ್– ಪಿಟಿಐ ಚಿತ್ರ

ಟೋಕಿಯೊದಲ್ಲಿ ಸತತ ಎರಡನೇ ಪ್ಯಾರಾಲಿಂಪಿಕ್ ಪದಕ ಗೆದ್ದ ಹೈಜಂಪ್ ಪಟು ಮಾರಿಯಪ್ಪನ್, ಹಿರಿಯ ತರಬೇತುದಾರರಿಂದ ಮುಖ್ಯ ತರಬೇತುದಾರರಾಗಿ ಮತ್ತು ಸಹಾಯಕ ತರಬೇತುದಾರರಾಗಿದ್ದ ಶರದ್ ಅವರನ್ನು (ಟೋಕಿಯೊದಲ್ಲಿ ಕಂಚು ಗೆದ್ದಿದ್ದರು) ತರಬೇತುದಾರರನ್ನಾಗಿ ಬಡ್ತಿ ನೀಡಲಾಗಿದೆ.

'ಟೋಕಿಯೊ ಒಲಿಂಪಿಯನ್ಸ್ ಮತ್ತು ಪ್ಯಾರಾಲಿಂಪಿಯನ್‌ಗಳ ಅದ್ಭುತ ಪ್ರಯತ್ನಗಳಿಗೆ ಅಭಿನಂದನೆ ಸೂಚಿಸುವ ಭಾಗವಾಗಿ ಅಥ್ಲೀಟ್‌ಗಳಿಗೆ ಬಡ್ತಿ ನೀಡಲು ಅನುಮೋದನೆ ನೀಡಲಾಗಿದೆ' ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಟ್ವೀಟ್ ಮಾಡಿದ್ದಾರೆ.

ಆಕಾಶ್ ಪ್ರೈಮ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಚಂಡೀಪುರ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ ಆಕಾಶ್ ಕ್ಷಿಪಣಿಯ ಹೊಸ ಮಾದರಿ 'ಆಕಾಶ್ ಪ್ರೈಮ್' ಅನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.

ಒಡಿಶಾದ ಚಂಡೀಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ (ಐಎನ್‌ಟಿ) ಸೋಮವಾರ ಈ ಪರೀಕ್ಷೆ ನಡೆದಿದೆ. ಶತ್ರು ಪಡೆಯ ಮಾನವ ರಹಿತ ವೈಮಾನಿಕ ಗುರಿಯನ್ನು ಭೇದಿಸುವ ಪರೀಕ್ಷೆಯಲ್ಲಿ ಆಕಾಶ್ ಪ್ರೈಮ್ ಕ್ಷಿಪಣಿ ಯಶಸ್ವಿಯಾಗಿದೆ ಎಂದು ಡಿಆರ್‌ಡಿಒ ಪ್ರಕಟಣೆಯಲ್ಲಿ ತಿಳಿಸಿದೆ.

ವಿಭಿನ್ನ ಗುಣದ 35 ಬೆಳೆ ತಳಿ ಬಿಡುಗಡೆ

ನವದೆಹಲಿ (ಪಿಟಿಐ): ತಾಪಮಾನ ಬದಲಾವಣೆ ಮತ್ತು ಪೌಷ್ಟಿಕಾಂಶ ಕೊರತೆಯ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ವಿಭಿನ್ನ ಗುಣಲಕ್ಷಣಗಳುಳ್ಳ 35 ಬೆಳೆಗಳ ತಳಿಯನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬಿಡುಗಡೆ ಮಾಡಿದರು.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಇವನ್ನು ಅಭಿವೃದ್ಧಿಪಡಿಸಿದೆ. ಐಸಿಎಆರ್, ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ವಿ.ವಿಗಳಲ್ಲಿ ನಡೆದ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಈ ಬಿಡುಗಡೆ ಮಾಡಲಾಯಿತು.

ಪ್ರಜಾವಾಣಿ

ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು

ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು

ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!

ಪ್ರಶ್ನೆ 1: ಚಲನ ಚಿತ್ರದ ಹೆಸರನ್ನು ಊಹಿಸಿ

ಪ್ರಶ್ನೆ 2: ದೇಶದ ಹೆಸರನ್ನು ಊಹಿಸಿ

ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್

3D ಪಜ಼ಲ್ 3 ಸ್ಪೆಶಲ್ ಬಹುಮಾನ

ಗಿಫ್ಟ್ ವೌಚರ್ ₹ 500 ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ

*ಷರತ್ತುಗಳು ಅನ್ವಯ

ಹಿಂದಿನ ಪ್ರಶ್ನೆಗೆ ಉತ್ತರ: 1) ಒಂದು 2) ಶ್ರುತಿ

ಒತ್ತಡದಲ್ಲಿ ಸಂಜು ಸ್ಯಾಮ್ಸನ್ ಬಳಗ; ಉತ್ತಮ ಲಯದಲ್ಲಿ ಹರ್ಷಲ್, ಚಾಹಲ್

ವಿರಾಟ್ ಬಳಗಕ್ಕೆ 'ರಾಯಲ್ಸ್' ಚಾಲೆಂಜ್

ದುಬೈ (ಪಿಟಿಐ): ಮೂರು ದಿನಗಳ ಹಿಂದೆ 'ಹಾಲಿ ಚಾಂಪಿಯನ್' ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಈಗ ಭರ್ತಿ ಆತ್ಮವಿಶ್ವಾಸದಲ್ಲಿದೆ.

ಬುಧವಾರ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ತಂಡವು ಅಪಾರ ಒತ್ತಡದಲ್ಲಿರುವ ರಾಜಸ್ಥಾನ್ ರಾಯಲ್ಸ್ ಬಳಗವನ್ನು ಎದುರಿಸಲಿದೆ. ಎರಡನೇ ಹಂತದ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದ ಬೆಂಗಳೂರು ಮೂರನೇ ಪಂದ್ಯದಲ್ಲಿ ಪುಟಿದೆದ್ದಿತು. ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಆಕರ್ಷಕ ಅರ್ಧಶತಕಗಳು, ಮಧ್ಯಮವೇಗಿ ಹರ್ಷಲ್ ಪಟೇಲ್ 'ಹ್ಯಾಟ್ರಿಕ್' ಮತ್ತು ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿಯಿಂದಾಗಿ ಗೆಲುವು ಒಲಿದಿತ್ತು.

10 ಪಂದ್ಯಗಳಲ್ಲಿ ತಂಡವು 12 ಅಂಕಗಳನ್ನು ಗಳಿಸಿದೆ. ರಾಜಸ್ಥಾನ್ ತಂಡದೆದುರು ಜಯಿಸಿದರೆ ಪ್ಲೇ ಆಫ್ ಪ್ರವೇಶದ್ವಾರಕ್ಕೆ ಮತ್ತಷ್ಟು ನಿಕಟವಾಗಲಿದೆ. ಸತತ ಎರಡು ಪಂದ್ಯಗಳಲ್ಲಿ ಅರ್ಧಶತಕಗಳನ್ನು ಬಾರಿಸಿರುವ ವಿರಾಟ್ ಲಯಕ್ಕೆ ಮರಳಿರುವುದು ತಂಡದಲ್ಲಿ ಸಮಾಧಾನ ಮೂಡಿಸಿದೆ. ಅಲ್ಲದೇ ಮ್ಯಾಕ್ಸ್‌ವೆಲ್ ಕೂಡ ಕಳೆದ ಪಂದ್ಯದಲ್ಲಿ ಆಡಿದ ರೀತಿ ವಿಶ್ವಾಸ ಹೆಚ್ಚಿಸಿದೆ. ದೇವದತ್ತ ಪಡಿಕ್ಕಲ್ ಮುಂಬೈ ಎದುರಿನ ಪಂದ್ಯದಲ್ಲಿ ವಿಫಲರಾಗಿದ್ದರು. ಆದರೆ ಅದಕ್ಕಿಂತ ಮುಂಚಿನ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದರು. ಆದರೆ, ತಂಡದ ಬ್ಯಾಟಿಂಗ್‌ನ 'ಆನೆಬಲ'ವೆಂದೇ ಪರಿಗಣಿಸಲಾಗಿರುವ ಎಬಿ ಡಿವಿಲಿಯರ್ಸ್ ಸತತವಾಗಿ ವಿಫಲರಾಗಿದ್ದಾರೆ. ದಕ್ಷಿಣ ಆಫ್ರಿಕಾದ ಎಬಿಡಿ ಕಳೆದ ಮೂರು ಪಂದ್ಯಗಳಲ್ಲಿ ಕ್ರಮವಾಗಿ 0,12 ಮತ್ತು 11 ರನ್ ಗಳಿಸಿದ್ದಾರೆ. ಈ ಪಂದ್ಯದಲ್ಲಿ ಅವರ ಕ್ರಮಾಂಕ ಬದಲಿಸಿ ಕಣಕ್ಕಿಳಿಸುವ ಸಾಧ್ಯತೆ ಇದೆ.

ಬೌಲಿಂಗ್‌ನಲ್ಲಿ ಕೊಹ್ಲಿಗೆ ಹೆಚ್ಚು ಚಿಂತೆ ಇಲ್ಲ. ಚಾಹಲ್ ಮತ್ತು ಹರ್ಷಲ್ ಅವರ ಜೊತೆಯಾಟ ರಂಗೇರಿದೆ. ಮೊಹಮ್ಮದ್ ಸಿರಾಜ್ ಮತ್ತು ಜೆಮಿಸನ್ ಹೆಚ್ಚು ವಿಕೆಟ್ ಪಡೆದಿಲ್ಲ. ಆದರೆ ಉತ್ತಮ ಲೈನ್ ಮತ್ತು ಲೆಂಗ್ತ್‌ನೊಂದಿಗೆ ಎದುರಾಳಿಗಳನ್ನು ಒತ್ತಡದಲ್ಲಿ ಸಿಲುಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ರಾಜಸ್ಥಾನ್ ತಂಡದ ನಾಯಕ ಸಂಜು ಸ್ಯಾಮ್ಸನ್‌ಗೆ ಹಲವು ಚಿಂತೆಗಳಿವೆ. ತಾವು ಉತ್ತಮ ಲಯದಲ್ಲಿದ್ದರೂ ಉಳಿದ ಬ್ಯಾಟ್ಸ್‌ಮನ್‌ಗಳಿಂದ ನಿರೀಕ್ಷಿತ ಸಾಮರ್ಥ್ಯ ಮೂಡಿಬರುತ್ತಿಲ್ಲವೆಂಬ ಸಂಗತಿ ಅವರನ್ನು ಕಾಡುತ್ತಿದೆ. ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಸಂಜು 82 ರನ್‌ಗಳನ್ನು ಗಳಿಸಿದ್ದರು.



ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ವಿರಾಟ್ ಕೊಹ್ಲಿ (ನಾಯಕ), ದೇವದತ್ತ ಪಡಿಕ್ಕಲ್, ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್, ಡ್ಯಾನ್ ಕ್ರಿಸ್ಟಿಯನ್, ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್, ಯಜುವೇಂದ್ರ ಚಾಹಲ್, ಕೈಲ್ ಜೆಮಿಸನ್,ಕೆ.ಎಸ್. ಭರತ್, ಟಿಮ್ ಡೇವಿಡ್, ಮೊಹಮ್ಮದ್ ಅಜರುದ್ದೀನ್, ಪವನ್ ದೇಶಪಾಂಡೆ.

ರಾಜಸ್ಥಾನ್ ರಾಯಲ್ಸ್: ಸಂಜು ಸ್ಯಾಮ್ಸನ್ (ನಾಯಕ), ಲಿಯಾಮ್ ಲಿವಿಂಗ್‌ಸ್ಟೋನ್, ಎವಿನ್ ಲೂಯಿಸ್, ಡೇವಿಡ್ ಮಿಲ್ಲರ್, ಕ್ರಿಸ್ ಮೊರಿಸ್, ಚೇತನ್ ಸಕಾರಿಯಾ, ರಾಹುಲ್ ತೆವಾಟಿಯಾ, ಆಕಾಶ್ ಸಿಂಗ್, ಯಶಸ್ವಿ ಜೈಸ್ವಾಲ್, ಶಿವಂ ದುಬೆ, ಶ್ರೇಯಸ್ ಗೋಪಾಲ್, ಜಯದೇವ್ ಉನದ್ಕತ್, ಮುಸ್ತಫಿಜುರ್ ರೆಹಮಾನ್, ಒಷೇನ್ ಥಾಮಸ್, ರಿಯಾನ್ ಪರಾಗ್.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆದರೆ, ಉಳಿದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ತಂಡವು ಸೋತಿತು. ಕಾರ್ತಿಕ್ ತ್ಯಾಗಿ, ಬಾಂಗ್ಲಾದ ಮುಸ್ತಫಿಜುರ್ ರೆಹಮಾನ್ ಮತ್ತು ಯುವ ಬೌಲರ್ ಚೇತನ್ ಸಕಾರಿಯಾ ಅವರು ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ.

ಆದರೆ, ಎಂಟು ಪಾಯಿಂಟ್ಸ್‌ನೊಂದಿಗೆ ಆರನೇ ಸ್ಥಾನದಲ್ಲಿರುವ ಸಂಜು ಬಳಗವು ಪ್ಲೇ ಆಫ್ ಪ್ರವೇಶಿಸಬೇಕಾದರೆ, ಆರ್‌ಸಿಬಿ ಸೇರಿದಂತೆ ನಾಲ್ಕು ಪಂದ್ಯಗಳಲ್ಲಿ ವಿಜಯ ಸಾಧಿಸಬೇಕು.

ಸಂಜು ಸ್ಯಾಮ್ಸನ್

ಬಲಾಬಲ

ಪಂದ್ಯಗಳು 24

ಬೆಂಗಳೂರು ಜಯ	11
ರಾಜಸ್ಥಾನ್ ಜಯ	10
ಫಲಿತಾಂಶವಿಲ್ಲ	3

ಪ್ರಮುಖ ಅಂಶಗಳು

2 ಬಾರಿ ಆರ್‌ಸಿಬಿಯು ರಾಜಸ್ಥಾನ್ ರಾಯಲ್ಸ್ ಎದುರು 2010 ಮತ್ತು 2021ರ ಮೊದಲ ಹಂತದಲ್ಲಿ 10 ವಿಕೆಟ್‌ಗಳಿಂದ ಗೆದ್ದ ಸಾಧನೆ ಮಾಡಿದೆ

4 ವಿಕೆಟ್ ಐಪಿಎಲ್‌ನಲ್ಲಿ 50 ವಿಕೆಟ್ ಗಳಿಸಿದ ಸಾಧನೆ ಮಾಡಲು ಮೊಹಮ್ಮದ್ ಸಿರಾಜ್‌ಗೆ ಇನ್ನೂ ನಾಲ್ಕು ವಿಕೆಟ್‌ಗಳು ಬೇಕು

5 ಸಲ ಐಪಿಎಲ್‌ನಲ್ಲಿ ಯಜುವೇಂದ್ರ ಚಾಹಲ್ ಅವರು ಸಂಜು ಸ್ಯಾಮ್ಸನ್ ಅವರನ್ನು ಔಟ್ ಮಾಡಿದ್ದಾರೆ.

3 ಸಿಕ್ಸರ್ ಎಬಿ ಡಿವಿಲಿಯರ್ಸ್ ಮೂರು ಸಿಕ್ಸರ್ ಗಳಿಸಿದರೆ 250 ಸಿಕ್ಸರ್ ಗಳಿಸಿದ ಐಪಿಎಲ್‌ನ ಎರಡನೇ ಆಟಗಾರನಾಗಲಿದ್ದಾರೆ. ಮೊದಲನೇ ಸ್ಥಾನದಲ್ಲಿ ಕ್ರಿಸ್ ಗೇಲ್ ಇದ್ದಾರೆ

2 ವಿಕೆಟ್ ಐಪಿಎಲ್‌ನಲ್ಲಿ ವಿಕೆಟ್‌ಗಳ ಅರ್ಧಶತಕ ಪೂರೈಸಲು ಕನ್ನಡಿಗ ಶ್ರೇಯಸ್ ಗೋಪಾಲ್ ಅವರಿಗೆ ಬೇಕಾಗಿರುವ ವಿಕೆಟ್‌ಗಳು. ಒಟ್ಟು 47 ಪಂದ್ಯಗಳಿಂದ 48 ವಿಕೆಟ್ ಗಳಿಸಿದ್ದಾರೆ.

ಸುನೀಲ್ ಆಲ್‌ರೌಂಡ್ ಆಟ

ಡೆಲ್ಲಿ ವಿರುದ್ಧ ಕೋಲ್ಕತ್ತ ನೈಟ್ ರೈಡರ್ಸ್ ಜಯಭೇರಿ

ಶಾರ್ಜಾ (ಪಿಟಿಐ): ಸುನೀಲ್ ನಾರಾಯಣ್ ಆಲ್‌ರೌಂಡ್ ಆಟದ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ಬಲಿಷ್ಠ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸೋಲಿನ ರುಚಿ ತೋರಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಡೆಲ್ಲಿ ತಂಡಕ್ಕೆ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲಿಯೂ ಹಿನ್ನಡೆಯಾಯಿತು. ಅದಕ್ಕೆ ಕಾರಣವಾಗಿದ್ದು ಸ್ಪಿನ್ ಆಲ್‌ರೌಂಡರ್ ಸುನೀಲ್ ಅವರ ಆಟ. ಇದರಿಂದಾಗಿ ಕೋಲ್ಕತ್ತ ತಂಡವು 3 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಒಟ್ಟು ಹತ್ತು ಅಂಕಗಳೊಂದಿಗೆ ಕೋಲ್ಕತ್ತ ನಾಲ್ಕನೇ ಸ್ಥಾನಕ್ಕೇರಿತು. ತಂಡದ ಪ್ಲೇ ಆಫ್ ಪ್ರವೇಶದ ಕನಸು ಜೀವಂತವಾಗುಳಿಯಿತು.

ಟಾಸ್ ಗೆದ್ದ ಕೋಲ್ಕತ್ತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೌಲಿಂಗ್‌ನಲ್ಲಿ ಮಿಂಚಿದ ಸುನೀಲ್ (18ಕ್ಕೆ2), ಲಾಕಿ ಫರ್ಗ್ಯುಸನ್ (10ಕ್ಕೆ2) ಮತ್ತು ನವಪ್ರತಿಭೆ ವೆಂಕಟೇಶ್ ಅಯ್ಯರ್ (29ಕ್ಕೆ2) ಡೆಲ್ಲಿ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದರು. ರಿಷಭ್ ಪಂತ್ ಬಳಗವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 127 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 18.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 130 ರನ್ ಗಳಿಸಿ ಜಯಿಸಿತು. ನಿತೀಶ್ ರಾಣಾ (ಔಟಾಗದೆ 36) ಮತ್ತು ಸುನೀಲ್ (21; 10ಎಸೆತ) ತಂಡದ ಜಯಕ್ಕೆ ಕಾಣಿಕೆ ಸಲ್ಲಿಸಿದರು. ಯುವ ಬ್ಯಾಟ್ಸ್‌ಮನ್ ಶುಭಮನ್ ಗಿಲ್ (30 ರನ್) ಮತ್ತು ವೆಂಕಟೇಶ್ (14 ರನ್) ನೀಡಿದ ಉತ್ತಮ ಆರಂಭ ವ್ಯರ್ಥವಾಗಲಿಲ್ಲ. ಡೆಲ್ಲಿ ತಂಡದ ಆವೇಶ್ ಖಾನ್ (13ಕ್ಕೆ3) ಅವರ ಕರಾರುವಾಕ್ ದಾಳಿಯನ್ನು ದಿಟ್ಟತನದಿಂದ ಎದುರಿಸಿದ ರಾಣಾ ತಂಡವನ್ನು ಜಯದತ್ತ ಸಾಗಿಸಿದರು.

ಆದರೆ, ಮೊದಲು ಬ್ಯಾಟಿಂಗ್ ಮಾಡಿದ್ದ ಡೆಲ್ಲಿ ತಂಡದ ಸ್ಟೀವನ್ ಸ್ಮಿತ್ (39ರನ್) ಮತ್ತು ಶಿಖರ್ ಧವನ್ (24 ರನ್) ಉತ್ತಮ ಆರಂಭ ಕೊಟ್ಟರು. ಮಧ್ಯದಲ್ಲಿ ಪಂತ್ (39 ರನ್) ಕೂಡ ಚೆನ್ನಾಗಿ ಆಡಿದರು. ಆದರೆ ಶ್ರೇಯಸ್ ಅಯ್ಯರ್ ಸೇರಿದಂತೆ ಉಳಿದೆಲ್ಲ ಬ್ಯಾಟ್ಸ್‌ಮನ್‌ಗಳೂ ಎರಡಂಕಿ ತಲುಪಲಿಲ್ಲ. ಅನುಭವಿ ಮತ್ತು ಯುವ ಬ್ಯಾಟ್ಸ್‌ಮನ್‌ಗಳು ಕೋಲ್ಕತ್ತ ಬೌಲರ್‌ಗಳ ಸ್ಪಿನ್ ಮತ್ತು ರಿವರ್ಸ್ ಸ್ವಿಂಗ್‌ಗಳನ್ನು ಎದುರಿಸುವಲ್ಲಿ ಎಡವಿದರು.

ವಿಕೆಟ್ ಗಳಿಸಿದ ಸುನೀಲ್ ನಾರಾಯಣ್ (ಬಲ) ಅವರನ್ನು ಅಭಿನಂದಿಸಿದ ಕೆಕೆಆರ್ ನಾಯಕ ಏಯಾನ್ ಮಾರ್ಗನ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಲಟ್ಸ್ 9ಕ್ಕೆ 127 (20 ಓವರ್)

ಸ್ಮಿತ್ ಬಿ ಫರ್ಗ್ಯುಸನ್ 39 (34ಎ, 4X4), ಧವನ್ ಸಿ ವೆಂಕಟೇಶ್ ಬಿ ಫರ್ಗ್ಯುಸನ್ 24 (20ಎ, 4X5), ಶ್ರೇಯಸ್ ಬಿ ನಾರಾಯಣ್ 1 (5ಎ), ರಿಷಭ್ ರನೌಟ್ (ಕರುಣ್/ಕಾರ್ತಿಕ್) 39 (36ಎ, 4X3), ಹೆಟ್ಮೆಯರ್ ಸಿ ಸೌಥಿ ಬಿ ವೆಂಕಟೇಶ್ 4 (5ಎ), ಲಲಿತ್ ಎಲ್‌ಬಿಡಬ್ಲ್ಯು ನಾರಾಯಣ್ 0 (3ಎ), ಅಕ್ಷರ್ ಸಿ ಫರ್ಗ್ಯುಸನ್ ಬಿ ವೆಂಕಟೇಶ್ 0 (5ಎ), ಆರ್. ಅಶ್ವಿನ್ ಸಿ ರಾಣಾ ಬಿ ಸೌಥಿ 9 (8ಎ, 4X1), ರಬಾಡ ಔಟಾಗದೆ 0 (1ಎ), ಆವೇಶ್ ರನೌಟ್ (ಕಾರ್ತಿಕ್) 5 (3ಎ, 4X1).)

ಇತರೆ (ಲೆಗ್‌ಬೈ 2, ವೈಡ್ 4) 6

ವಿಕೆಟ್ ಪತನ: 1–35 (ಶಿಖರ್ ಧವನ್, 4.6), 2–40 (ಶ್ರೇಯಸ್ ಅಯ್ಯರ್, 6.2), 3–77 (ಸ್ಟೀವನ್ ಸ್ಮಿತ್, 12.2), 4–88 (ಶಿಮ್ರಾನ್ ಹೆಟ್ಮೆಯರ್, 13.5), 5–89 (ಲಲಿತ್ ಯಾದವ್, 14.3), 6–92 (ಅಕ್ಷರ್ ಪಟೇಲ್, 15.3), 7–120 (ರವಿಚಂದ್ರನ್ ಅಶ್ವಿನ್, 19.1), 8–122 (ರಿಷಭ್ ಪಂತ್, 19.2), 9–127 (ಆವೇಶ್ ಖಾನ್, 19.6).

ಬೌಲಿಂಗ್: ಸಂದೀಪ್ ವಾರಿಯರ್ 2–0–15–0, ಟಿಮ್ ಸೌಥಿ 4–0–29–1, ಲಾಕಿ ಫರ್ಗ್ಯುಸನ್ 2–0–10–2, ವರುಣ್ ಚಕ್ರವರ್ತಿ 4–0–24–0, ಸುನಿಲ್ ನಾರಾಯಣ್ 4–0–18–2, ವೆಂಕಟೇಶ್ ಅಯ್ಯರ್ 4–0–29–2.

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ 130 (18.2 ಓವರ್)

ಶುಭಮನ್ ಸಿ ಶ್ರೇಯಸ್ ಬಿ ರಬಾಡ 30 (33ಎ, 4X1, 6X2), ವೆಂಕಟೇಶ್ ಬಿ ಲಲಿತ್ 14 (15ಎ, 4X2), ತ್ರಿಪಾಠಿ ಸಿ ಸ್ಮಿತ್ ಬಿ ಆವೇಶ್ 9 (5ಎ, 6X1), ನಿತೀಶ್ ಔಟಾಗದೆ 36 (27ಎ, 4X2, 6X2), ಮಾರ್ಗನ್ ಸಿ ಲಲಿತ್ ಬಿ ಅಶ್ವಿನ್ 0 (2ಎ), ಕಾರ್ತಿಕ್ ಬಿ ಆವೇಶ್ 12 (14ಎ, 4X2), ನಾರಾಯಣ್ ಸಿ ಅಕ್ಷರ್ ಬಿ ನಾರ್ಕಿಯಾ 21 (10ಎ, 4X1, 6X2), ಸೌಥಿ ಬಿ ಆವೇಶ್ 3 (5ಎ), ಫರ್ಗ್ಯುಸನ್ ಔಟಾಗದೆ 0.

ಇತರೆ (ಬೈ 1, ಲೆಗ್‌ಬೈ 1, ನೋಬಾಲ್ 1, ವೈಡ್ 2) 5

ವಿಕೆಟ್ ಪತನ: 1–28 (ವೆಂಕಟೇಶ್ ಅಯ್ಯರ್, 4.3), 2–43 (ರಾಹುಲ್ ತ್ರಿಪಾಠಿ, 5.5), 3–67 (ಶುಭಮನ್ ಗಿಲ್, 10.6), 4–67 (ಇಯೊನ್ ಮಾರ್ಗನ್, 11.2), 5–96 (ದಿನೇಶ್ ಕಾರ್ತಿಕ್, 14.4), 6–122 (ಸುನಿಲ್ ನಾರಾಯಣ್, 16.5), 7–126 (ಟಿಮ್ ಸೌಥಿ, 17.6).

ಬೌಲಿಂಗ್: ಆ್ಯನ್ರಿಚ್ ನಾರ್ಕಿಯಾ 2.2–0–15–1, ಅಕ್ಷರ್ ಪಟೇಲ್ 3–0–13–0, ರವಿಚಂದ್ರನ್ ಅಶ್ವಿನ್ 4–0–24–1, ಲಲಿತ್ ಯಾದವ್ 3–0–35–1, ಆವೇಶ್ ಖಾನ್ 3–0–13–3, ಕಗಿಸೊ ರಬಾಡ 3–1–28–1.

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 3 ವಿಕೆಟ್ ಜಯ

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	454
ಸಂಜು ಸ್ಯಾಮ್ಸನ್	ರಾಜಸ್ಥಾನ್	433
ಕೆ.ಎಲ್.ರಾಹುಲ್	ಪಂಜಾಬ್	422

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	23
ಆವೇಶ್ ಖಾನ್	ಡೆಲ್ಲಿ	18
ಬೂಮ್ರಾ	ಮುಂಬೈ	16

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	10	8	2	00	00	16
ಡೆಲ್ಲಿ ಕ್ಯಾಪಿಟಲ್ಸ್	11	8	3	00	00	16
ಬೆಂಗಳೂರು	10	6	4	00	00	12
ಕೋಲ್ಕತ್ತ ನೈಟ್ ರೈಡರ್ಸ್	11	5	6	00	00	10
ಮುಂಬೈ ಇಂಡಿಯನ್ಸ್	11	5	6	00	00	10
ಪಂಜಾಬ್	11	4	7	00	00	8
ರಾಜಸ್ಥಾನ	10	4	6	00	00	8
ಹೈದರಾಬಾದ್	10	2	8	00	00	4

* ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಅಂಪೈರ್ ಸತ್ಯಾಜಿರಾವ್ ನಿಧನ

ಬೆಂಗಳೂರು: ಅಂತರರಾಷ್ಟ್ರೀಯ ಕ್ರಿಕೆಟ್‌ನ ಮಾಜಿ ಅಂಪೈರ್ ಬಾದಾಮಿ ಸತ್ಯಾಜಿರಾವ್ (92) ಮಂಗಳವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ ಮತ್ತು ಕ್ರಿಕೆಟಿಗ ವಿನಯ್ ಬಾದಾಮಿ ಇದ್ದಾರೆ. ವಿನಯ್ ಅವರು ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರ ಸಮಕಾಲೀನ ಆಟಗಾರರಾಗಿದ್ದಾರೆ.

ಸತ್ಯಾಜಿ ರಾವ್ ಅವರು 1929ರ ಅಕ್ಟೋಬರ್ 16ರಂದು ಬೆಂಗಳೂರಿನಲ್ಲಿ ಜನಿಸಿದರು. ದೇಶದಲ್ಲಿ ಪ್ರಮುಖ ಕ್ರಿಕೆಟ್ ಅಂಪೈರ್‌ಗಳಲ್ಲಿ ಸತ್ಯಾಜಿ ರಾವ್ ಕೂಡ ಒಬ್ಬರು. 1956 ರಿಂದ 1981ರ ಅವಧಿಯಲ್ಲಿ ಅವರು ಕಾರ್ಯನಿರ್ವಹಿಸಿದರು. 1960 ರಿಂದ 1979ರಲ್ಲಿ ಅವರು 17 ಟೆಸ್ಟ್ ಪಂದ್ಯಗಳಲ್ಲಿ ಅಂಪೈರಿಂಗ್ ಮಾಡಿದ್ದು ದಾಖಲೆಯಗಿತ್ತು. ಅದನ್ನು 1984ರಲ್ಲಿ ಸ್ವರೂಪ್ ಕಿಷನ್ ಸರಿಗಟ್ಟಿದರು. ನಂತರ ವಿ.ಕೆ. ರಾಮಸ್ವಾಮಿ (26 ಟೆಸ್ಟ್) ಮತ್ತು ಎಸ್. ವೆಂಕಟರಾಘವನ್ (1993–2004ರಲ್ಲಿ 73 ಟೆಸ್ಟ್) ಹೊಸ ದಾಖಲೆ ಮಾಡಿದರು.

ಕೋಲ್ಕತ್ತ ಈಡನ್ ಗಾರ್ಡನ್‌ನಲ್ಲಿ 1960ರಲ್ಲಿ ನಡೆದಿದ್ದ ಭಾರತ–ಪಾಕಿಸ್ತಾನ ಟೆಸ್ಟ್‌ನಲ್ಲಿ ಅಂಪೈರಿಂಗ್ ಮಾಡುವ ಮೂಲಕ ಪದಾರ್ಪಣೆ ಮಾಡಿದ್ದರು.

ಸತ್ಯಾಜಿ ರಾವ್

ಅವರು ಅಂಪೈರಿಂಗ್ ಮಾಡಿದ ಕಾಲಘಟ್ಟದಲ್ಲಿ ಭಾರತ ತಂಡದಲ್ಲಿ ಮನ್ಸೂರ್ ಅಲಿಖಾನ್ ಪಟೌಡಿ, ಬಿಷನ್ ಸಿಂಗ್ ಬೇಡಿ, ಬಿ.ಎಸ್. ಚಂದ್ರಶೇಖರ್, ಸುನೀಲ್ ಗಾವಸ್ಕರ್, ಜಿ.ಆರ್. ವಿಶ್ವನಾಥ್ ಅವರಂತಹ ದಿಗ್ಗಜರು ಇದ್ದರು.5 ಬಾರಿ ರಣಜಿ ಟ್ರೋಫಿ ಮತ್ತು 4 ಸಲ ದುಲೀಪ್ ಟ್ರೋಫಿ ಫೈನಲ್‌ಗಳಲ್ಲಿಯೂ ಅಂಪೈರಿಂಗ್ ಮಾಡಿದ್ದರು. 1970ರಲ್ಲಿ ಕೆಲವು ದೇಶಿ ಪಂದ್ಯಗಳಲ್ಲಿಯೂ ಕಾರ್ಯನಿರ್ವಹಿಸಿದರು. ಬಿಸಿಸಿಐನ ಉತ್ತಮ ಅಂಪೈರ್‌ಗಳನ್ನು ಸಿದ್ಧಗೊಳಿಸುವ ಕಾರ್ಯಕ್ರಮ ಅಂಗವಾಗಿ ಇಂಗ್ಲೆಂಡ್‌ಗೆ ತೆರಳಿದ್ದರು.

ಅಂಪೈರಿಂಗ್‌ನಿಂದ ನಿವೃತ್ತರಾದ ನಂತರ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಕೆಲವು ವರ್ಷಗಳವರೆಗೆ ಸಹಾಯಕ ಕಾರ್ಯದರ್ಶಿ (ಟೂರ್ನಿ ವಿಭಾಗ)ಯಾಗಿದ್ದರು.ಕರ್ನಾಟಕ ಕ್ರಿಕೆಟ್ ಅಂಪೈರ್ಸ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಸಂಘದ ಬೆಳವಣಿಗೆಗೆ ಮಹತ್ವದ ಕಾಣಿಕೆ ನೀಡಿದ್ದರು.

ಮುಂಬೈ ಇಂಡಿಯನ್ಸ್‌ಗೆ ಜಯ

ಅಬುಧಾಬಿ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ ಅಂತೂ ಇಂತೂ ಮಂಗಳವಾರ ಜಯದ ಸವಿ ಉಂಡಿತು.

ತಲಾ ಎರಡು ವಿಕೆಟ್ ಗಳಿಸಿದ ಜಸ್‌ಪ್ರೀತ್ ಬೂಮ್ರಾ ಹಾಗೂ ಕೀರನ್ ಪೊಲಾರ್ಡ್ ಅವರ ಬೌಲಿಂಗ್ ಬಲದಿಂದ ಮುಂಬೈ ತಂಡವು 6 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಗೆದ್ದಿತು. 14ನೇ ಆವೃತ್ತಿಯ ಎರಡನೇ ಹಂತದಲ್ಲಿ ಮುಂಬೈಗೆ ಇದು ಮೊದಲ ಜಯ.

ಟಾಸ್ ಗೆದ್ದ ಮುಂಬೈ ತಂಡದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅವರ ನಿರೀಕ್ಷೆಗೆ ತಕ್ಕಂತೆ ಬೌಲರ್‌ಗಳು ಮಿಂಚಿದರು. ಇದರಿಂದಾಗಿ ಪಂಜಾಬ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 135 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಮುಂಬೈ ತಂಡವು ಸೌರಭ್ ತಿವಾರಿ (45 ರನ್) ಮತ್ತು ಹಾರ್ದಿಕ್ ಪಾಂಡ್ಯ (ಔಟಾಗದೆ 40) ಅವರಿಬ್ಬರ ಉತ್ತಮ ಬ್ಯಾಟಿಂಗ್‌ನಿಂದಾಗಿ 19 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 137 ರನ್ ಗಳಿಸಿ ಜಯಭೇರಿ ಬಾರಿಸಿತು.

ಪಂಜಾಬ್ ತಂಡದ ನಾಯಕ ಕೆ.ಎಲ್. ರಾಹುಲ್ (21 ರನ್) ಅವರೊಂದಿಗೆ ಮನದೀಪ್ ಸಿಂಗ್ (15 ರನ್) ಇನಿಂಗ್ಸ್ ಆರಂಭಿಸಿದರು. ಮಯಂಕ್ ಅಗರವಾಲ್ ಅವರು ಕಣಕ್ಕಿಳಿಯಲಿಲ್ಲ. ಕ್ರಿಸ್ ಗೇಲ್ ಕೇವಲ ಒಂದು ರನ್ ಗಳಿಸಿ ನಿರ್ಗಮಿಸಿದರು. ಮಧ್ಯಮ ಕ್ರಮಾಂಕದಲ್ಲಿ ಏಡನ್ ಮಾರ್ಕರಂ (42) ಮತ್ತು ದೀಪಕ್ ಹೂಡಾ (28) ಅವರಿಂದಾಗಿ ತಂಡವು 100ರ ಗಡಿ ದಾಟಲು ಸಾಧ್ಯವಾಯಿತು. ಈ ವೇಳೆ ಪೊಲಾರ್ಡ್ ಟಿ20 ಕ್ರಿಕೆಟ್‌ನಲ್ಲಿ 300ನೇ ವಿಕೆಟ್ ಗಳಿಸಿದ ಸಂಭ್ರಮ ಆಚರಿಸಿದರು.

ಕೀರನ್ ಪೊಲಾರ್ಡ್– ಪಿಟಿಐ ಚಿತ್ರ

ಮುಂಬೈ ತಂಡದ ಆರಂಭವೂ ಚೆನ್ನಾಗಿರಲಿಲ್ಲ. ರೋಹಿತ್ ಶರ್ಮಾ ಎಂಟು ರನ್ ಗಳಿಸಿ ಔಟಾದರೆ, ಸೂರ್ಯಕುಮಾರ್ ಯಾದವ್ ಖಾತೆಯನ್ನೇ ತೆರೆಯಲಿಲ್ಲ. ಕ್ವಿಂಟನ್ ಡಿಕಾಕ್ (27 ರನ್) ಸ್ವಲ್ಪ ಹೋರಾಟ ತೋರಿದರು. ಆದರೆ, ತಿವಾರಿ ಮತ್ತು ಹಾರ್ದಿಕ್ ತಂಡಕ್ಕೆ ಆಸರೆಯಾದರು. ಅಂತ್ಯದಲ್ಲಿ ಪೊಲಾರ್ಡ್ 7 ಎಸೆತಗಳಲ್ಲಿ 15 ರನ್ ಗಳಿಸಿ ಅಜೇಯರಾಗುಳಿದರು.

ಸಂಕ್ಷಿಪ್ತ ಸ್ಕೋರ್: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 6ಕ್ಕೆ 135 (ಏಡನ್ ಮರ್ಕರಮ್ 42, ದೀಪಕ್ ಹೂಡಾ 28, ಕೆ.ಎಲ್.ರಾಹುಲ್ 21, ಮನದೀಪ್ ಸಿಂಗ್ 15; ಜಸ್‌ಪ್ರೀತ್ ಬೂಮ್ರಾ 24ಕ್ಕೆ 2, ಕೀರನ್ ಪೊಲಾರ್ಡ್ 8ಕ್ಕೆ 2, ಕೃಣಾಲ್ ಪಾಂಡ್ಯ 24ಕ್ಕೆ 1). ಮುಂಬೈ ಇಂಡಿಯನ್ಸ್: 19 ಓವರ್‌ಗಳಲ್ಲಿ 4ಕ್ಕೆ 137 (ಸೌರಭ್ ತಿವಾರಿ 45, ಹಾರ್ದಿಕ್ ಪಾಂಡ್ಯ ಔಟಾಗದೆ 40, ಕೀರನ್ ಪೊಲಾರ್ಡ್ ಔಟಾಗದೆ 15; ರವಿ ಬಿಷ್ಣೋಯಿ 25ಕ್ಕೆ 2, ನೇಥನ್ ಎಲ್ಲಿಸ್ 12ಕ್ಕೆ 1, ಮೊಹಮ್ಮದ್ ಶಮಿ 42ಕ್ಕೆ 1). ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್‌ಗಳ ಜಯ.

ಈಜು: ಬಸವನಗುಡಿ ಈಜುಕೇಂದ್ರಕ್ಕೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜುಕೇಂದ್ರದ ಸೀನಿಯರ್ ಮತ್ತು ಜೂನಿಯರ್ ತಂಡಗಳು ಮಂಗಳವಾರ ಮುಕ್ತಾಯವಾದ ರಾಜ್ಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡವು.

ಜೂನಿಯರ್ ವಿಭಾಗದಲ್ಲಿ ಬಸವನಗುಡಿ ತಂಡವು 616 ಅಂಕ ಗಳಿಸಿತು. 613 ಅಂಕ ಪಡೆದ ಡಾಲ್ಫಿನ್ ಅಕ್ವೆಟಿಕ್ಸ್ ಎರಡನೇ ಸ್ಥಾನ ಪಡೆಯಿತು. ಸೀನಿಯರ್ ವಿಭಾಗದಲ್ಲಿ 326 ಅಂಕಗಳೊಂದಿಗೆ ಬಸವನಗುಡಿಯು ಪ್ರಶಸ್ತಿ ತನ್ನದಾಗಿಸಿಕೊಂಡಿತು. ಬೆಂಗಳೂರು ಈಜು ಸಂಶೋಧನಾ ಕೇಂದ್ರವು 51 ಅಂಕಗಳಿಸಿ ರನ್ನರ್ಸ್ ಅಪ್ ಆಯಿತು.

ಶ್ರೀಹರಿ ನಟರಾಜ್ ಮತ್ತು ದಾಮಿನಿ ಕೆ. ಗೌಡ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವೈಯಕ್ತಿಕ ವಿಭಾಗದ ಪ್ರಶಸ್ತಿ ಗಳಿಸಿದರು.

ಫಲಿತಾಂಶಗಳು: ಪುರುಷರು: 200 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಾಲ್ಫಿನ್)-1, ತನೀಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ)-2, ಎಸ್. ಶಿವಾ (ಬಿಎಸಿ)-3, ಕಾಲ: ನೂತನ ದಾಖಲೆ: 1ನಿ,52.62ಸೆ, ಹಳೆಯದು: 2018 ಸಜನ್‌ಪ್ರಕಾಶ್ 1ನಿ,50.35ಸೆ.400 ಮೀ ಮೆಡ್ಲೆ: ಎಸ್ ಶಿವಾ (ಬಿಎಸಿ)-1, ಬಿ ಜತಿನ್ (ಬೆಂಗಳೂರು ಈಜು ಸಂಶೋಧನಾ ಕೇಂದ್ರ)-2, ಕೆ.ಎಂ. ಇಂದ್ರೇಶ್ (ಪಿಇಟಿ)-3 ಕಾಲ: 4ನಿ,40.77ಸೆ.200 ಮೀ ಬ್ರೆಸ್ಟ್‌ಸ್ಟ್ರೋಕ್: ಲಿತೀಶ್ ಜಿ ಗೌಡ (ಬಿಎಸಿ)-1 ವಿಕ್ರಂ ಗೌಡ (ಬಿಎಸಿ)-2, ಎಸ್.ಎನ್. ಹರ್ಷವರ್ಧನ್ (ಬಿಎಸಿ)-3, ಕಾಲ: 2ನಿ,36.07ಸೆ.100 ಮೀ ಬಟರ್‌ಫ್ಲೈ: ತನಿಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ)-1, ಎಂ. ಪೃಥ್ವಿ (ಬಿಎಸಿ)-2, ರಾಜ್ ವಿನಾಯಕ ರೇಳೇಕರ್ (ಬಿಎಸಿ)-3. ಕಾಲ: 56.80ಸೆ;

ಮಹಿಳೆಯರು:200 ಮೀ ಫ್ರೀಸ್ಟೈಲ್: ಬಿ.ಜಿ. ಮಧುರಾ(ಬಿಎಸಿ)-1, ವಿ. ಪ್ರೀತಾ (ಡಿಕೆವಿ)-2, ಎಸ್.ವಿ. ನಿಖಿತಾ (ಬಿಎಸಿ)-3. ಕಾಲ: 2ನಿ,18.39ಸೆ.400 ಮೀ ಮೆಡ್ಲೆ: ವಿ. ಪ್ರೀತಾ (ಡಿಕೆವಿ)-1, ವಿಭಾ ಅಪರ್ಣ ಭೋಂಸ್ಲೆ (ಬಿಎಸಿ)-2, ಶ್ರುಂಗಿ ಬಾಂದೇಕರ್ (ಜಿಎಎಫ್‌ಆರ್‌ಎವೈ)-3, ಕಾಲ: 5ನಿ,50.05ಸೆ. 200 ಮೀ ಬ್ರೆಸ್ಟ್ ಸ್ಟ್ರೋಕ್: ಇಂಚರಾ ಎಸ್ ನಾರಾಯಣ (ಬಿಎಸಿ)-1. ಕಾಲ: 3ನಿ,23.96ಸೆ. 100 ಮೀ ಬಟರ್‌ಫ್ಲೈ: ದಾಮಿನಿ ಕೆ ಗೌಡ (ಬಿಎಸಿ)-1, ಕೆ. ಕ್ಷಿತಿಜಾ -2, ವಿಭಾ ಅಪರ್ಣಾ ಭೋಂಸ್ಲೆ (ಬಿಎಸಿ)-3. ಕಾಲ: 1ನಿ,09.43ಸೆ. ಬಾಲಕರು: ಗ್ರುಪ್ 1: 400 ಮೀ ಮೆಡ್ಲೆ: ಶೋನ್ ಗಂಗೂಲಿ -1, ಕಲ್ಪ್ ಎಸ್ ಬೊಹ್ರಾ -2, ಅನೀಶ್ ಎಸ್ ಗೌಡ 3 (ಮೂವರೂ ಬಸವನಗುಡಿ ಈಜು ಕೇಂದ್ರ) ಕಾಲ: - ನೂತನ ದಾಖಲೆ 4ನಿ,43.02ಸೆ. (ಹಳೆಯದು: 2017-ಅದ್ವೈತ್ ಪಾಗೆ 4.41.37ಸೆ) . 200 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್ ಶಂಕರ್ (ಡಾಲ್ಫಿನ್)-1, ಎಲ್. ಮಣಿಕಂಠ (ದಾವಣಗೆರೆ ಎಸ್‌ಎ)-2, ಕಲ್ಪ್ ಬೊಹ್ರಾ (ಬಿಎಸಿ)-3, ನೂತನ ದಾಖಲೆ: ಕಾಲ: 2ನಿ,22.41ಸೆ (ಹಳೆಯದು: 2017, ಎಸ್.ಧನುಷ್ 2ನಿ,22.44ಸೆ). 200 ಮೀ ಫ್ರೀಸ್ಟೈಲ್: ಆರ್. ಸಂಭವ್ (ಬೆಂಗಳೂರು ಎಸ್‌ಆರ್‌ಸಿ)-1, ಅನೀಶ್ ಎಸ್ ಗೌಡ (ಬಿಎಸಿ)-2, ಶಿವಾಂಕ್ ವಿಶ್ವನಾಥ್ (ಜಿಎಎಫ್‌ಆರ್‌ಎಐಎಸ್‌ಪಿ)-3, ಕಾಲ: 1ನಿ,55.30ಸೆ. 100 ಮೀ ಬಟರ್‌ಫ್ಲೈ: ಆರ್. ಸಂಭವ್ (ಬೆಂಗಳೂರು ಎಸ್‌ಆರ್‌ಸಿ)-1, ಉತ್ಕರ್ಷ್ ಸಂತೋಷ್ ಪಾಟೀಲ (ಬಿಎಸಿ)-2, ನಯನ್ ವಿಘ್ನೇಷ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)-3, ಕಾಲ: 56.06ಸೆ. ಗುಂಪು 2:400 ಮೀ ಮೆಡ್ಲೆ: ಪವನ್ ಧನಂಜಯ್ (ಬಿಎಸಿ)-1, ಕ್ರಿಷ್ ಸುಕುಮಾರ್ (ಡಾಲ್ಫಿನ್)-2, ತರುಣ್ ಕಾರ್ತಿಕೇಯನ್ (ಡಾಲ್ಫಿನ್) -3, ಕಾಲ: 5ನಿ,00.77ಸೆ.200 ಮೀ ಬ್ರೆಸ್ಟ್‌ಸ್ಟ್ರೋಕ್: ಕ್ರಿಷ್ ಸುಕುಮಾರ್ (ಡಾಲ್ಫಿನ್)-1, ಸೂರ್ಯ ಜೋಯಪ್ಪ (ಬಿಎಸಿ)-2, ನವನೀತ್ ಆರ್ ಗೌಡ (ಡಾಲ್ಫಿನ್)-3, ಕಾಲ: 2ನಿ,35.72ಸೆ. 100 ಮೀ ಬಟರ್‌ಫ್ಲೈ: ನಿರಂಜನ್ ಬಿ ಕಾರ್ತಿಕ್ (ಬೆಂಗಳೂರು ಎಸ್‌ಆರ್‌ಸಿ)-1 ಸ್ಟೀವ್ ಜೆಫ್ ಲೊಬೊ (ಡಾಲ್ಫಿನ್)-2, ಅದ್ವೈತ್ ನಾಡಕರ್ಣಿ (ಡಾಲ್ಫಿನ್)-3 ಕಾಲ: 1ನಿ,3.46ಸೆ. 200 ಮೀ ಫ್ರೀಸ್ಟೈಲ್:ಅನಂತಜೀತ್ ಮುಖರ್ಜಿ (ಬೆಂಗಳೂರು ಎಸ್‌ಆರ್‌ಸಿ)-1, ಅಲೆಸ್ಟರ್ ಸ್ಯಾಮುಯೆಲ್ ರೆಗೊ (ಡಾಲ್ಫಿನ್)-2, ಎಸ್. ದಕ್ಷಣ್ (ಬಿಎಸಿ)-3 ಕಾಲ: 2ನಿ, 06.77ಸೆ.

ಬಾಲಕಿಯರು: ಗುಂಪು 1: 400 ಮೀ ಮೆಡ್ಲೆ: ಎ. ಜೆದಿದಾ (ಡಿಕೆವಿಎಸಿ)-1, ಎಸ್. ಲಕ್ಷ್ಯಾ (ಬಿಎಎ) -2, ಅನುಮತಿ ಚೌಗಲೆ (ಜಿಎಎಫ್‌ಆರ್‌ಎವೈ) -3, ಕಾಲ: 5ನಿ,32.25ಸೆ.200 ಮೀ ಬ್ರೆಸ್ಟ್‌ಸ್ಟ್ರೋಕ್: ಸಾನ್ವಿ ಎಸ್ ರಾವ್ (ಬೆಂಗಳೂರು ಎಸ್‌ಆರ್‌ಸಿ)-1, ಎಸ್. ಲಕ್ಷ್ಯಾ (ಬಿಎಸಿ)-2, ಶಾನಿಯಾ ಶಿರೋಮಣಿ (ಜಿಎಎಫ್‌ಆರ್‌ಎವೈ)-3. ನೂತನ ದಾಖಲೆ: ಕಾಲ: 2ನಿ,47.96ಸೆ (ಹಳೆಯದು: 2017, ಸಲೋನಿ ದಲಾಲ್ 2ನಿ,43.01ಸೆ). 100 ಮೀ ಬಟರ್‌ಫ್ಲೈ: ನಿನಾ ವೆಂಕಟೇಶ್ (ಡಾಲ್ಫಿನ್)-1, ನೈಷಾ ಶೆಟ್ಟಿ (ಡಾಲ್ಫಿನ್)-2, ಎ. ಜೆದಿದಾ (ಡಿಕೆವಿ) -3. ಕಾಲ: 1ನಿ,0.58ಸೆ; 200 ಮೀ ಫ್ರೀಸ್ಟೈಲ್: ಅಶ್ಮಿತಾ ಚಂದ್ರ (ಜಿಎಎಫ್‌ಆರ್‌ಎವೈ)-1, ಅನ್ವಯಿ ಮಸ್ಕೆ (ಡಾಲ್ಫಿನ್)-2, ಬಿ. ಇಂಚರಾ (ಜಿಎಎಫ್‌ಆರ್‌ಎವೈ)-3 ಕಾಲ: 2ನಿ,15.77ಸೆ. ಗ್ರುಪ್ 2: 400 ಮೀ ಮೆಡ್ಲೆ: ಹಷಿಕಾ ರಾಮಚಂದ್ರ (ಡಾಲ್ಫಿನ್)-1, ಬಿ.ಎಂ. ರಿತಿಕಾ (ಬಿಎಸಿ)-2, ರಿಯಾನಾ ಧೃತಿ ಫರ್ನಾಂಡಿಸ್ (ಡಾಲ್ಫಿನ್)-3, ಕಾಲ: 5ನಿ,29.98ಸೆ. 200 ಮೀ ಬ್ರೆಸ್ಟ್‌ಸ್ಟ್ರೋಕ್: ಲಿನೇಶಾ ಎ.ಕೆ. (ಬೆಂಗಳೂರು ಎಸ್‌ಆರ್‌ಸಿ)-1, ದಿಯಾ ಮಧುರಕರ್ (ಡಾಲ್ಫಿನ್)-2, ರಿಯಾನಾ ಧೃತಿ ಫರ್ನಾಂಡಿಸ್ (ಡಾಲ್ಫಿನ್)-3. ಕಾಲ:2ನಿ-,49.51ಸೆ. 100 ಮೀ ಬಟರ್‌ಫ್ಲೈ: ರಿಷಿಕಾ ಯು ಮಾಂಗ್ಲೆ (ವಿಜಯನಗರ ಎಸಿ)-1, ಹಷಿಕಾ ರಾಮಚಂದ್ರ (ಡಾಲ್ಫಿನ್)-2, ಅನ್ನು ದೇಶಪಾಂಡೆ (ವಿಜಯನಗರ ಎಸಿ)-3. ಕಾಲ: ನೂತನ ದಾಖಲೆ: 1ನಿ,05,65ಸೆ. 200 ಮೀ ಫ್ರೀಸ್ಟೈಲ್: ಹಷಿಕಾ ರಾಮಚಂದ್ರ (ಡಾಲ್ಫಿನ್)-1, ಶಿರಿನ್ (ಬಿಎಸಿ)-2, ಆಷ್ನಾ ಮತ್ತೂರ್ (ಜಿಎಎಫ್‌ಆರ್‌ಎವೈ)-3, ಕಾಲ: 2ನಿ,13.66ಸೆ.

4X100 ಮೀ. ಮೆಡ್ಲೆ: ಬಾಲಕರ ಗುಂಪು2: ಡಾಲ್ಫಿನ್ ತಂಡ 'ಎ'-1, ಕಾಲ: 4:29.91, ಬಿಎಸಿ ತಂಡ 'ಎ'-2, ಬಿಎಸ್‌ಆರ್‌ಸಿ-3,.ಗುಂಪು 1: ಬಿಎಸಿ ತಂಡ 'ಎ'-1, ಕಾಲ: 4:00.54 (ಕೂಟ ದಾಖಲೆ), ಡಾಲ್ಫಿನ್ ತಂಡ 'ಎ'-2, ಬಿಎಸಿ ತಂಡ 'ಬಿ'-3. ಬಾಲಕಿಯರ ಗುಂಪು 2: ಡಾಲ್ಫಿನ್ ತಂಡ 'ಎ',ಕಾಲ: 4:45.66 (ಕೂಟ ದಾಖಲೆ), ಬಿಎಸಿ ತಂಡ 'ಎ'-2, ಡಾಲ್ಫಿನ್ ತಂಡ 'ಬಿ'-3. ಗುಂಪು 1: ಡಾಲ್ಫಿನ್ ತಂಡ 'ಎ'-1, ಕಾಲ: 4:49.37, ಜಿಎಎಫ್‌ಆರ್‌ಎವೈ-2, ಬಿಎಸ್‌ಆರ್‌ಸಿ-3.

ಜೂನಿಯರ್ ಸಮಗ್ರ ಪ್ರಶಸ್ತಿ: ಬಿಎಸಿ (616 ಪಾಯಿಂಟ್ಸ್), ರನ್ನರ್ಸ್ ಅಪ್: ಡಾಲ್ಫಿನ್ (613). ಸೀನಿಯರ್ ಸಮಗ್ರ ಪ್ರಶಸ್ತಿ: ಬಿಎಸಿ (326 ಪಾಯಿಂಟ್ಸ್), ರನ್ನರ್ಸ್ ಅಪ್: ಬಿಎಸ್‌ಆರ್‌ಸಿ (51).

ವೈಯಕ್ತಿಕ ವಿಭಾಗದ ಪ್ರಶಸ್ತಿಗಳು: ಬಾಲಕರು: ಗುಂಪು 1: ವಿದಿತ್ ಶಂಕರ್ (ಡಾಲ್ಫಿನ್), ಗುಂಪು 2: ನವನೀತ್ ಗೌಡ (ಡಾಲ್ಫಿನ್). ಪುರುಷ: ಶ್ರೀಹರಿ ನಟರಾಜ್ (ಡಾಲ್ಫಿನ್). ಬಾಲಕಿಯರು: ಗುಂಪು 1: ನೀನಾ ವೆಂಕಟೇಶ್ (ಡಾಲ್ಫಿನ್), ಗುಂಪು 2: ರಿಧಿಮಾ ವೀರೇಂದ್ರ ಕುಮಾರ್ (ಬಿಎಸಿ). ಮಹಿಳೆ: ದಾಮಿನಿ ಗೌಡ (ಬಿಎಸಿ).

ಸಮಗ್ರ ಪ್ರಶಸ್ತಿ ವಿಜೇತ ಬಸವನಗುಡಿ ಈಜುಕೇಂದ್ರ ತಂಡಗಳು –ಪ್ರಜಾವಾಣಿ ಚಿತ್ರ